ಕರ್ಣಾಟಕ ಕಾವ್ಯಮಂಜರಿ.

ಸಂಚಿಯ ಹೊನ್ನಮ್ಮ ವಿರಚಿತ

# ಹದಿಬದೆಯ ಧರ್ಮ

[ ೪ ]

ಎಸ್. ಜಿ. ನರಸಿಂಹಾಚಾರ್,
ಮ. ಆ. ರಾಮಾನುಜೈಯ್ಯಂಗಾರ್,
ಇವರಿಂದ ಪರಿಷ್ಕರಿಸಲ್ಪಟ್ಟು

ಕರ್ಣಾಟಕ ಕಾವ್ಯಮಂಜರಿ ಪ್ರೊಪ್ರೈಟರುಗಳಿಗಾಗಿ

ಮೈಸೂರು,

ಸದ್ವಿದ್ಯಾಮಂದಿರ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.

೧೮೯೩.

[ಕ್ರಯ [illegible] ರೂಪಾಯಿ.

Registered according to Act XXV, 1867

*(All rights reserved.)*

ಈ ಪುಸ್ತಕವು ಮೈಸೂರಲ್ಲಿರುವ ಕರ್ಣಾಟಕಕಾವ್ಯಮಂಜರಿ ಆಫೀಸ್ ಮ್ಯಾನೇಜಿಂಗ್ ಪ್ರೊಪ್ರೈಟರ್ ಮ. ಕುಮಾರಸ್ವಾಮಿ ತಿರುಮಲಾಚಾರ್ಯರಲ್ಲಿ ದೊರೆಯುತ್ತದೆ.

# ಪೀಠಿಕೆ

## ಕವಿಚರಿತ್ರೆ ಮತ್ತು ಗ್ರಂಥಪ್ರಶಸ್ತಿ

ಈ ಗ್ರಂಥವನ್ನು ರಚಿಸಿದ ಹೊನ್ನಮ್ಮನೆಂಬವಳು ಚಿಕದೇವ ಮಹಾರಾಜನ ಸಂಚಿಯ ಓಲಗದವಳು. ಇವಳು ಮೊದಲು ಅಷ್ಟು ಉತ್ತಮಸ್ಥಿತಿಯಲ್ಲಿರಲಿಲ್ಲ; "ಅನಾಥಳೆನ್ನ ಮುನ್ನಿರವಾವುದು ?" (ಸಂಧಿ ೧-೨೭) ಎಂದು ತಾನೇ ಹೇಳಿಕೊಳ್ಳುತ್ತಾಳೆ. ಪ್ರಭುವಿನಲ್ಲಿ ಸಂಚಿಯ ಓಲಗವೇ ತನಗೆ ಅತ್ಯುನ್ನತವಾದ ಪದವಿಯೆಂದು ತಿಳಿದಿದ್ದಳು. "ಸಂಚಿಯ ಹೊನ್ನಿಯೆಂಬೀಕೆಗೆ ನೆತ್ತಿತ್ತಹೆನು" ಎಂದೂ, "ನಿನ್ನ ದಯಾಮಾತ್ರದಕಟಾ । ಏನೆಂಬೆನಿದಕೆ ನೆಳವನೆಳೆವಾ ಗಂಗೆ ತಾನೈದೆ ಬಂದುದೆಂಬಂತೆ ॥" "ನಿನ್ನ ಚೆನ್ನಡಿಯೋಲಗದಿಂದೆ ಪಿನ್ನೀಳುಮುನ್ನೀಳು ಕರದವರಸಿಬಿರುಮುನ್ನತಿಪಡೆದರೆನ್ನಂದೆ ॥" ಎಂದೂ (ಸಂಧಿ ೧. ೨೫-೨೭) ಹೇಳಿಕೊಳ್ಳುತ್ತಾಳೆ. ಇವಳು ಅಂತಃಪುರದ ಓಲಗದಲ್ಲಿದ್ದರೂ ಯಾವ ವಿಧದಲ್ಲಿಯೂ ರಾಜಕುಲಕ್ಕೆ ಸಂಬಂಧಪಟ್ಟವಳಲ್ಲವೆಂದು ತೋರುತ್ತದೆ. ಪಟ್ಟಮಹಿಷಿಯಾದ ಎಳವಂದೂರು ದೇವಮ್ಮಣ್ಣಿಯವರ ಅತ್ಯಂತ ಪ್ರೀತಿಗೆ ಪಾತ್ರಳಾಗಿದ್ದಳು. ಎಳವಂದೂರು ಪ್ರಾಂತದಲ್ಲೇ ಹುಟ್ಟಿ ಪಟ್ಟಮಹಿಷಿಯೊಡನೆ ಆಸ್ಥಾನಕ್ಕೆ ಬಂದಿರಬಹುದು. "ಪಾದದೋಲಗದೊಳು ಬಳೆದ ಬಾಲಕಿ" (ಸಂಧಿ ೧-೩೩) ಎಂದು ಹೇಳಿಕೊಂಡಿರುವುದರಿಂದ ಬಾಲ್ಯದಲ್ಲಿಯೇ ಅಂತಃಪುರವನ್ನು ಸೇರಿ ಅಲ್ಲಿಯೇ ಬೆಳೆದಳೆಂದು ಹೇಳಬಹುದು. ಮಾತಾಪಿತೃಗಳ ಹೆಸರನ್ನೂ ಸಹೋದರರೇ ಮೊದಲಾದ ಬಂಧುವರ್ಗದವರ ಹೆಸರನ್ನೂ, ಒಂದು ವೇಳೆ ಮದುವೆಯಾಗಿದ್ದರೆ ಗಂಡನ ಹೆಸರನ್ನೂ ಗ್ರಂಥದಲ್ಲಿ ಎಲ್ಲಿಯೂ ಸೂಚಿಸಿಲ್ಲ; ಇದರಿಂದ ಈಕೆಯು ಸಣ್ಣ ಮನುಷ್ಯ

ತನ್ನ ಮಹಾರಾಣಿಯವರ ಊಳಿಗಕ್ಕೆ ಸೇರಿ ಅವಳೊಡನೆಯೇ ಅಂತಃಪುರಕ್ಕೆ ಬಂದಿರಬಹುದೆಂದೂ, ಮತ್ತು "* ಒಲಿದು ತನ್ನೊಡವುಟ್ಟಿ ಸೊಸೆಮಗಳೆಂದೆಂಬ । ಪಲರು ಮನ್ನಿಸ ಬಾಂಧವರು ॥ ಕುಲದೇವತೆಯೆಂದು ಕೂರ್ತು ತಂತಮ್ಮಿಷ್ಟ । ಫಲವ ಪಡೆದರೆನ್ನಿಂದೆ ॥ ಸುತ್ತಣದೇಶದರಸಿಯರ ಭೃತ್ಯತತಿ ಗತ್ತಿನ ಭೂಷಣವೆನಿಸ ॥ ಮುತ್ತಿನ ಸರವನ್ನ ರತ್ನಹಾವುಗೆಗಳ । ಸುತ್ತ ಅಂಬಣಿವಾಧುರಿಂದು । ", " ಒಡೆಯನಿರಿಸಿ ದಂತಿಪುರದಲ್ಲಿದೆ ಒಡವೆಗೆ ಬೇರಿಲ್ಲರಂತೆ । ಕಡು ಕೂರ್ಮೆಯಿಂದೆ ನಿನ್ನ ॥ ಯಾಣತಿಯನ್ನ ನುಡಿಯೊಳಾಂತೆನು " ಎಂದು ಹೇಳಿರುವುದರಿಂದ ಇವಳಿಗೆ ಮದುವೆಯಾಗಿರಲಿಲ್ಲವೆಂದೂ, (ಸಂಧಿ ೧. ೫೭-೩೩) ಬಂದಿ ಹಾಕಿದ ರಾಜನ ಪಂಕ್ತಿಯವಳಾಗಿರಬಹುದೆಂದೂ ತೋರುತ್ತದೆ. ಪಟ್ಟಮಹಿಷಿಯು ಇವಳಲ್ಲಿ ಕೇವಲ ಅಭಿಮಾನವಿಟ್ಟುದರಿಂದ ಇವಳ ಚಟುವಟಿಕೆಯನ್ನು ಕಂಡು ಇವಳಿಗೆ ವಿದ್ಯೆ ಕಲಿಸಿದರೆ ನಿಪುಣೆಯಾಗುವಳೆಂದು ಭಾವಿಸಿ, ಆಸ್ಥಾನ ಪಂಡಿತರಾದ ಅಳಸಿಂಗರಾಚಾರ್ಯರಲ್ಲಿ ಮಹಾರಾಜನ ಮೂಲಕ ವಿದ್ಯಾಭ್ಯಾಸಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿರಬಹುದು. " ಅಳಸಿಂಗರಾರ್ಯನೆಂಬಾತನು ಕೃಪಾಸ್ವಭಾವಕೆ ಪೊಮ್ಮಿಸಿ ನೆಗಳಿದ ಕೃಪೆಯಿಂದಾಗಿ ಧರ್ಮರಹಸ್ಯವನರಿತೆನು " (ಸಂಧಿ ೯-೫೩) ಎಂದು ಹೇಳುತ್ತಾಳೆ. ಆ ಗುರುವಿನಲ್ಲಿಯೇ ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಪಾಂಡಿತ್ಯವನ್ನೂ ಪಡೆದುದಲ್ಲದೆ ಶ್ರೀವೈಷ್ಣವ ವೇದಾಂತ ರಹಸ್ಯಗಳಲ್ಲಿ ಹೆಚ್ಚಾದ ತಿಳುವಳಿಕೆಯನ್ನು ಸಂಪಾದಿಸಿ ಈ ಕಾವ್ಯರಚನೆಯನ್ನು ಮಾಡಿರಬೇಕು.

ಈ ಕಾವ್ಯವನ್ನು ಬರೆಯಲು ಕಾರಣವನ್ನು ಹೀಗೆ ಹೇಳುತ್ತಾಳೆ :—

---

* ಇವಳು ಬಾಲ್ಯದಲ್ಲಿಯೇ ಅಂತಃಪುರಕ್ಕೆ ಸೇರಿದ್ದುದರಿಂದ ಇಲ್ಲಿ ಒಡಹುಟ್ಟು, ಸೊಸೆ, ಮಗಳು ಎಂದರೆ ತನ್ನ ಒಡಹುಟ್ಟಿದವರು, ಸೋದರ ಸೊಸೆ, ಅಕ್ಕ ತಂಗಿಯರ ಮಕ್ಕಳು ಇವರು ತನ್ನಿಂದ ತಮ್ಮಿಷ್ಟಾರ್ಥವನ್ನು ಪಡೆದರೆಂದು ಹೇಳಿದ್ದಾಳೆಂದು ತಿಳಿಯಬೇಕು.

“ ಚಿಕದೇವ ಮಹಾರಾಜನು ತನ್ನ ಒಂಭತ್ತು ಮಂದಿ ಮಹಿಷಿಯರೊಡನೆ
ವಿನೋದವಾಗಿ ಕಾಲವನ್ನು ಕಳೆಯುತ್ತ ತನ್ನ ಹತ್ತಿರ ಪಟ್ಟಮಹಿಷಿಯ
ಪಕ್ಕದಲ್ಲಿ ಸಿಂತಿಷ್ಟ ಈ ಪುಸ್ತಕವನ್ನು ಕಂಡು, ಮಂತ್ರಿಪ್ರವರರಾದ
ತಿರುಮಲಾರ್ಯರ ತಮ್ಮಂದಿರೂ ಇವಳ ಗುರುಗಳೂ ಆದ ಅಳಸಿಂಗರಾರ್ಯರು
“ ಇವಳು ಕಾವ್ಯಾಲಂಕಾರ ನಾಟಕಗಳ ಪವಣಿಗೆಯರಿವ ಬಲ್ಲವಳು, ಸರಸ
ಸಾಹಿತ್ಯದ ಪರದೇವತೆ ” ಎಂದು ಹಿಂದೆ ಹೇಳಿದುದು ಜ್ಞಾಪಕಕ್ಕೆ ಬರಲು,
ಅದನ್ನು ಪರೀಕ್ಷಿಸಬೇಕೆಂದು ಪಟ್ಟಮಹಿಷಿಯನ್ನು ಕುರಿತು “ ಇವಳಿಂದ
ಸರಸವಾದ ಕವಿತೆಯೊಂದನ್ನು ಕೇಳುವ ” ಎಂದನು. ಪಟ್ಟಮಹಿಷಿಯು
ಇವಳ ಬುದ್ಧಿಯನ್ನೂ ಹೆದರಿಕೆಯನ್ನೂ ನಿವಾರಿಸಿ ಬಹುವಾಗಿ ಪ್ರಾರ್ಥಿ-
ಸಿದ ಮೇಲೆ ಚಿಕ್ಕವ ಬಲಿಪಿಡದು “ ಹದಿಬದೆಯ ಧರ್ಮ ” ವೆಂಬ ಈ
ಗ್ರಂಥವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾಳೆ. ಈ ಹದಿಬದೆಯ
ಧರ್ಮದಲ್ಲಿ ಪತಿವ್ರತಾಧರ್ಮವನ್ನು ಸಾಂಗವಾಗಿ “ ಆದಿಕಾವ್ಯದೊಳು
ಐದನೆಯ ವೇದದೊಳು ಮನ್ವಾದಿ ಧರ್ಮಶಾಸ್ತ್ರದೊಳು ॥ ಭೇದಿಸಿ ಹಿರಿ
ಯರು ಹೇಳಿದುದನೆ ಕೃತಿಗೈದಾನುಕರಿಸಿಗೊಳಿಸಿದೆನು ॥ ” ಎಂದೂ,
“ ಶ್ರೀ ವೇದಸಾಗರ ಶ್ರುತಿಶಾಸ್ತ್ರಸಾರಾಚಾರ್ಯನಾ ಪ್ರತ್ಯಕ್ಷಧರ್ಮಮೂ
ರ್ತಿ ॥ ಶ್ರೀ ಶುಕ ವೇದವ್ಯಾಸ ವಾಲ್ಮೀಕಿ ಸ । ದಾಕರರನು ಪಡಿಗೊಂಡ ”
ಅಳಸಿಂಗರಾರ್ಯನ ಕೃಪಾತಿಶಯದಿಂದ ಈ ಮಹಾಕೃತಿಯನ್ನು ಹೇಳಿದ
ಹಾಗೂ, “ ಧರ್ಮರಹಸ್ಯವನರಿತವಳೆಂಬೊಂದು । ಹೆಮ್ಮೆಯೊಳುಸಿರ್ದ
ವಳಲ್ಲ ॥ ಧರ್ಮದ ನೆನಹು ಮರೆಯದಂತೆ ಕೃತಿಯಾಗೆ । ನಿರ್ಮಿಸಿ ನೆಲೆಗೊ
ಳಿಸಿದೆನು ॥ ಭಾವಿಸ ಬುದ್ಧಿಗಳಿತ ಹೆಮ್ಮೆಯೆನಗಿಲ್ಲ । ದೇವತೆಗಳ ವರವಿಲ್ಲ ॥
ಆಪ್ತದೇಶವನಿತ್ತದಾರ್ಯರು ತನಗಾಪಿಧದೊಳು ಹೇಳಿದೆನು ” ಎಂದು
ತನ್ನ ಕವಿತಾಸಾಮರ್ಥ್ಯದ ಹೆಮ್ಮೆಯನ್ನು ಅಡಗಿಸಿಕೊಳ್ಳುತ್ತಾಳೆ.
ಆದರೂ ಉಚಿತಪದಪ್ರಯೋಗ ಚತುರೆ ; ಅಂತರಂಗಾಭಿಪ್ರಾಯವನ್ನು ಸ್ಪಷ್ಟ
ವಾಗಿ ಓದುವವರಿಗೆ ತಿಳಿದುಬರುವ ಹಾಗೆ ಪದಗಳನ್ನು ಪೋಣಿಸಿ ವಾಕ್ಯ

ಗಳನ್ನು ಸೇರಿಸುವ ಸಾಮರ್ಥ್ಯ ಎಂದರೆ ಕವಿತಾಶಕ್ತಿಯನ್ನುಳ್ಳವಳು ಎಂಬುದನ್ನು ಈ ಗ್ರಂಥದಲ್ಲಿ ತಾನು ತೋರಿಸಿದ್ದಾಳೆ.

ಟೀಕಾಸಂಧಿಯಲ್ಲಿ ಪ್ರತಿಪಾದ್ಯವಿಷಯಗಳನ್ನೂ (೧೬-೧೮) ಗ್ರಂಥ ಪಠನದಿಂದ ಲಭಿಸುವ ಪ್ರಯೋಜನವನ್ನೂ, (೧-೪೧-೪೪) ಮತ್ತು ಗ್ರಂಥಾಂತ್ಯದಲ್ಲಿ ಗ್ರಂಥದ ಮಹತ್ವವನ್ನೂ ವಿವರಿಸಿದ್ದಾಳೆ.

ಇವಳ ಇತರ ಗ್ರಂಥಗಳೊಂದೂ ನಮಗೆ ಇನ್ನೂ ಸಿಕ್ಕಿಲ್ಲ.

ಈ ಗ್ರಂಥವು ಸಾಂಗತ್ಯವೆಂಬ ವೃತ್ತದಲ್ಲಿ ಬರೆದಿದೆ. ಈ ವೃತ್ತಕ್ಕೆ ಸಂಗತಿ ಎಂದೂ ಹೆಸರುಂಟು. ಸಾಮಾನ್ಯವಾಗಿ ಕನಕದಾಸನ **ಮೋಹನ ತರಂಗಿಣಿ** ಯಂತೆ ಇದನ್ನು ಹಾಡತಕ್ಕುದು. ಈ ವೃತ್ತದ ಲಕ್ಷಣವನ್ನು ನಾಗವರ್ಮನ ಛಂದಶ್ಶಾಸ್ತ್ರದಲ್ಲಿ ಹೇಳಿಲ್ಲ; **ನೇಮಿಜಿನೇಶ ಸಂಗತಿ**, **ಭರತೇಶ್ವರಚರಿತೆ** ಇತ್ಯಾದಿ ಅನೇಕ ಪ್ರಾಚೀನ ಗ್ರಂಥಗಳು ಈ ವೃತ್ತದಲ್ಲಿಯೇ ಬರೆಯಲ್ಪಟ್ಟಿವೆ. ಕನ್ನಡದಲ್ಲಿ ಪ್ರಾಯಶಃ ಪ್ರಚಾರದಲ್ಲಿರುವ ಹಾಡುಗಳಲ್ಲಿ ಅರೆವಾಸಿ ಗ್ರಂಥಗಳು ಈ ವೃತ್ತದಲ್ಲಿಯೇ ಬರೆಯಲ್ಪಟ್ಟಿವೆ.

ಈ ಗ್ರಂಥದಲ್ಲಿ ಮೊದಲು ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿಯನ್ನೂ ಬಳಿಕ ರಂಗನಾಯಕಿಯಮ್ಮನವರನ್ನೂ ಸ್ತುತಿಸಿ ಅನಂತರ ಸಂಕ್ಷೇಪವಾಗಿ ಮೈಸೂರು ಮಹಾರಾಜರವರ ವಂಶಾವಳಿಯನ್ನೂ ಈಕೆಯು ಹೇಳಿರುತ್ತಾಳೆ. ಪ್ರತಿ ಸಂಧಿಯಲ್ಲಿಯೂ ಪದ ೧ರಲ್ಲಿ ವಿಷ್ಣುವಿನ ಸ್ತುತಿಯನ್ನೂ, ೨ರಲ್ಲಿ ಲಕ್ಷ್ಮೀಸ್ತುತಿಯನ್ನೂ, ೩ರಲ್ಲಿ ಆಯಾ ಸಂಧಿಯ ಪ್ರತಿಪಾದ್ಯವಿಷಯವನ್ನೂ ತಿಳಿಸಿರುತ್ತಾಳೆ.

ಈ ಗ್ರಂಥದಲ್ಲಿ ಱ ೞ ಅಕ್ಷರಗಳ ಗೋಜಿಗೆ ಹೋಗಿಲ್ಲ. ಹಲವು ಕಡೆಗಳಲ್ಲಿ ಪದಗಳ ಹಳಗನ್ನಡ ರೂಪವನ್ನು ಬಿಟ್ಟು ಬಳಕೆಯಲ್ಲಿರುವ ಅವುಗಳ ಹೊಸಗನ್ನಡ ರೂಪವನ್ನೇ ಉಪಯೋಗಿಸಿದೆ.

ಚಿಕದೇವ ಮಹಾರಾಜನು ಕ್ರಿ. ಶ. ೧೬೭೨-೧೭೦೪ ರ ವರೆಗೆ

ಆಳಿದುದರಿಂದ ಕವಿಯು ಈ ಗ್ರಂಥವನ್ನು ಸುಮಾರು ೧೬೮೦-೧೭೧೦ರೊಳಗೆ ಬರೆದಿರಬಹುದು.

ಈ ಗ್ರಂಥವನ್ನು ಪರಿಶೀಲಿಸಿದರೆ ಆಗಿನ ಕಾಲದಲ್ಲಿ ಅಂತಃಪುರದ ಊಳಿಗವು ಹೆಮ್ಮೆಪಡತಕ್ಕ ಕೆಲಸವಾಗಿತ್ತೆಂದೂ, ಅಂತಃಪುರದಲ್ಲಿ ಊಳಿಗದಲ್ಲಿದ್ದ ಸ್ತ್ರೀಯರು* ಬಹುವಾಗಿ ವಿದ್ಯಾವತಿಯರಾಗಿದ್ದು (೧-೭) ರಾಣಿವಾಸದವರಿಗೂ ಹಲವು ಸಂದರ್ಭಗಳಲ್ಲಿ ಪ್ರಭುಗಳಿಗೂ ಸಮಯವರಿತು ಹಿತೋಕ್ತಿಯನ್ನು ಹೇಳುವಷ್ಟು ಸಾಮರ್ಥ್ಯವುಳ್ಳವರಾಗಿದ್ದರೆಂದೂ ತಿಳಿದುಬರುತ್ತದೆ.

ಈ ಗ್ರಂಥವು ಸಾಮಾನ್ಯವಾಗಿ ಎಲ್ಲರಿಗೂ ಮುಖ್ಯವಾಗಿ ಸ್ತ್ರೀಯರಿಗೂ ನೀತಿಯನ್ನು ಬೋಧಿಸುವುದಕ್ಕಾಗಿ ಹುಟ್ಟಿರುವುದರಿಂದಲೂ, ಇದರಲ್ಲಿ ಯಾವ ವಿಧವಾದ ಅನುಚಿತ ವರ್ಣನಾದಿಗಳು ಇಲ್ಲವಾಗಿರುವುದರಿಂದಲೂ, ವ್ಯಾಕರಣ ಶುದ್ಧವಾಗಿ ಉದ್ಗ್ರಂಥಗಳಲ್ಲಿ ಪರಿಗಣಿಸಲ್ಪಟ್ಟಿರುವುದರಿಂದಲೂ ಸರ್ವಪರಿಗ್ರಾಹ್ಯವಾಗಿದೆ. ಈ ಗ್ರಂಥವನ್ನು ತಿಳಿಯಲು ಸಹಾಯವಾಗಲೆಂದು ಹಳಗನ್ನಡದ ಕಠಿನ ಪದಗಳಿಗೆ ಅರ್ಥವನ್ನೂ ಶ್ರೀವೈಷ್ಣವಸಂತ ಸಿದ್ಧಾಂತವನ್ನೂ ಸಹ ತಿಳಿಸಿ ಟಿಪ್ಪಣಿಯು ಬರೆಯಲ್ಪಟ್ಟಿದೆ.

---

*ನೋಂತು ಚತುಷ್ಷಷ್ಟಿ ಕಲೆಗಳಂ ಪೆಣ್ಗಳ್ । ಜಾಣತೆ ಸೇರಿದುವೊ ಯೆಂಬಂತೆ ॥ ಸಂತಸದಿಂಗೆ ಸರ್ವಸರಸವಿದ್ಯಾಸಿ । ದ್ಧಾಂತವೇದಿನಿಯರೊಪ್ಪಿದರು ॥ (೧-೬)

## ಈ ಮುದ್ರಣದಲ್ಲಿ ತಿದ್ದಿ ಕೊಳ್ಳಬೇಕಾದ ಭಾಗಗಳ ಪಟ್ಟಿ

| ಪುಟ | ಸಂಧಿ | ಪದ | ಶೋಧಿತ ಭಾಗ |
|---|---|---|---|
| ೫ | ೧ | ೪೨ | ತನ್ಮ್ರಸಿಯಂದ |
| ೬ | ೨ | ೧೫ | ವೈಧಿಕರಂಗೆ |
| ೧೧ | ೩ | ೩ | ಬನ್ನಣೆ |
| ೧೨ | ೩ | ೧೧ | ವಲ್ಲ್ಮಡಿ |
| ೧೪ | ೩ | ೪೧ | ಗೃಪ್ಪದು |
| ೧೪ | ೩ | ೪೧ | ಗೆಳಸು |
| ೧೫ | ೪ | ೧ | ನಂದನ |
| ೧೬ | ೪ | ೧೦ | ಮರೆಕಿರಣೆ |
| ೨೦ | ೪ | ೫೦ | ಗುಣಸಂಬಂಧಿ |
| ೨೨ | ೫ | ೨೩ | ತೊಡವೆಗಳನು |
| ೨೫ | ೬ | ೬ | ಗಳಿದು |
| ೨೯ | ೬ | ೪೨ | ಕೈಯುಡಕೆ |
| ೩೦ | ೭ | ೧ | ಮಂದಾರು |
| ೩೦ | ೭ | ೩ | ನೊರೆವೆನು |
| ೩೨ | ೭ | ೩೧ | ಗೆಸ್ಟೈದೆ |
| ೩೨ | ೭ | ೩೧ | ನೆರೆದೊಂದೆ |
| ೪೧ | ೯ | ೨೪ | ನೇನು |

# ಹದಿಬದೆಯ ಧರ್ಮ

## (ಸಾಂಗತ್ಯಂ)

ಶ್ರೀಪದಪಮಲಗಂಜಸಿಧಿಗ ಕಿತ್ಯಸಿಗ ನಿ | ಸ್ಸೀಮ ಕೃಪಾಪಾಂಥಿಗೆ ॥
ತಾಮರೇಯಕರಾಕ್ಷಿಗೆ ಪತ್ತಿ ನಂದಂಗ | ಧಾಮಪಿಗಾನೆರಗುವೆನು ॥
ರಂಗಧಾಮನ ದಿವ್ಯಾಂಗಸಂಗತಿಯಿಂ | ಮಂಗಳದೇವತೆಯೆನಿಪ ॥
ರಂಗವಂದಿತ ಮಂಗಳಸ್ವೈಚಯಂತಿಗೆ | ರಂಗನಾಯಕಿಗೆರಗುವೆನು ॥
ತಿರುನಾರಾಯಣನಾ ಶ್ರೀಪನೊಡಗೂಡಿ | ಯಾದವರಿಂದವತರಿಸಿ ॥
ಯಾದವಕುಲವೇಳಿಗೆ ವೆತ್ತಿ ಕ್ಷೀರದಂ ಮೇದಿನಿಯೊಳು ಪ್ರೈವೆಂವಡೆದು ॥
ಆ ಯಾದವರಿಗೆ ಕುಲದೇವರೆನಿಪ ನಾ | ರಾಯಣನಾದಿಕಾರಣನು |
ಶ್ರೀಯೊಡಗೂಡಿ ಕರ್ಣಾಟದೇಶದೊಳ್ | ಶ್ರೀಯಾದವಾದ್ರಿಯೊಳಿರ್ದನು ॥
ಬಲಕೃಷ್ಣರಿಂದೆ ಪಲವು ಪೂಜೆಗೊಂಡಿರ್ದು | ಕುಲದೇವರ ಸೇವೆಗೆಂದು ॥
ಪಲವು ಯಾದವರಾಯರಾದ್ವಾರವತಿಯಿಂ | ದೊಲಿದೈತಂದರೀನೆಲಕೆ ॥
ಶ್ರೀನಾರಾಯಣನಡಿಗಳಿಗೆರಗಿ ಮ | ಹಾನಂದರಸದ ವೈಭವದೊಳು ॥
ಆ ನೆಲೆಯನು ಬಿಟ್ಟಗಲಲಾರದೆ ತಾ | ವೀ ನಾಡೊಳು ನೆಲಸಿದರು ॥
ಈ ಶೈಲಕೆರಡು ಗಾವುದ ತೆಂಕಣ ರಮ್ಯ | ದೇಶದ ನೆಲೆವೀಡುಗೊಳಿಸಿ ॥
ಈ ಶೂರರು ನೆಲಸಿದರದರಿಂದೆ ಮ | ಹಿಶೂರಪುರವೆನಿಸಿದುದು ॥
ಆ ದಿನವೊದಲು ಮೈಸೂರನಾಳಿದರಾ | ಯಾದವಕುಲವರ್ಧನರು ॥
ಶ್ರೀದೇವರಾಜಚಂದ್ರಮನವತರಿಸಿದ | ನಾ ದಿವ್ಯವಂಶವಾರ್ಧಿಯೊಳು |
ಭಾವಿಸೆ ಭೋಗಭಾಗ್ಯದೊಳೈಸಿರಿಯೊಳು | ದೇವೇಂದ್ರಗೆ ಮಿಗಿಲೆನಿಸಿ ॥
ದೇವರಾಜನ ಬಸುರಿಂದೊಗೆದನು ಚಿಕ್ಕ | ದೇವರಾಜೇಂದ್ರಭೂವರನು ॥

ಭೂವನಿತೆಯ ಪುಣ್ಯದ ಪುಂಜವಾನೃಪ ಭಾವನ ಪಡೆದುದೆಂಬಂತೆ ॥
ಈ ವಸುಧೇಶನಿಂದೊಗೆದೆಸೆದನು ಚಿಕ್ಕ । ದೇವರಾಜನು ತೇಜದೊಳು ।೧೦
ಶ್ರೀರಂಗಪಟ್ಟಣದೊಳು ರತ್ನಸಿಂಹಾಸ ನಾರೋಹಣವನಾಚರಿಸಿ ॥
ಧಾರಿಣಿಯನು ಧರ್ಮದೊಳು ಪಾಲಿಸುತ ವ । ರಾಧಿರಾಜನೆನಿಸಿ ರಾಜಿಸನು ॥

---

ಶ್ರೀಯುವತೀಶನಖಿಲಗುಣನಿಧಿ ನಾ । ರಾಯಣನಾದಿಕಾರಣನು ॥
ಆಯುರಾರೋಗ್ಯೈಶ್ವರ್ಯವನ ಚಿಕದೇವ ರಾಯನಿಗನುಗೊಳಿಸುವನು .
ಧರೆಯ ಪೊರೆವ ಧರ್ಮವ ಸಂಪಾದಿಸ । ಧುರವ ಗೆಲುವ ಗೈಮೆಯೊಳು ॥
ನರಪತಿ ಚಿಕದೇವರಾಜೇಂದ್ರಗೆ ಶೌರಿ । ನೆರವಾಗಿಹನು ಪ್ರೇಮದೊಳು ।
ಚಿಕದೇವರಾಜಚಂದ್ರಮನ ಪಟ್ಟದರಾಣಿ । ಸಕಲಸದ್ಗುಣಸಂಪನ್ನೆ ॥
ಅಕಲಂಕೆ ಯೆಳವಂದೂರ ದೇವಮ್ಮನಾ । ಸಕಲಸಂಪದದೊಡನಿರಲಿ ॥
ಇಷ್ಟಗುಣೆಯರಿಪ್ಪತ್ತು ಮತ್ತೆ ರಾಣಿಯ । ರಷ್ಟೈಶ್ವರ್ಯಲಕ್ಷ್ಮಿಯರೊ ॥
ಅಷ್ಟದಿಗ್ವಿಜಯಲಕ್ಷ್ಮಿಯರೊ ತಾನೆಂಬ ಸಂತುಷ್ಟಿಯೊಳೊಡನೆಯಿಹರು॥೪
ಅಡಪ ಕಾಳಾಂಜಿ ಪೊಂಗಟ್ಟಿಗೆ ಕುಂಚಕ । ವ್ಯಜನ ಗಂಡಬಿಜ್ಜಣಿಗೆಗಳಾ ॥
ಪಿಡಿದೋಲಗಿಸ್ಪವರಿಂ ಕಗಾಳ್ಗೆಯಂದಾ । ಪೊಡವಿಯಾಣ್ಮನ ಪೊಸ್ತಹರು ॥
ಪಾಡುವ ಕುಣಿವ ಬಾಜಿಪ ಬಿನ್ನಣಿವಾ ಕಾಡುವ ಪರಿಹಾಸಗೆಯ್ವ ॥
ನಾಡಿಕಾತಿಯರು ಗಣನೆಯಿಲ್ಲದೆ ಜೋಡು । ಗೂಡಿರುವರು ಕೂರ್ಮೆಯೊಳು ॥
ನೋಂತು ಚತುಷ್ಷಷ್ಟಿಕಲೆಗಳ ಪೆಣ್ಣಾ । ಬಂತು ಸೇರಿದುವೊಯೆಂಬಂತೆ ।
ಸಂತತಸಖಿಗೆ ಸರ್ವಸರಸವಿದ್ಯಾಸಿ । ದ್ಧಾಂತವೇದಿನಿಯರೊಪ್ಪಿಹರು ॥
ಪಲರಾಣಿಯರೂಳಿಗದ ಹೆಣ್ಗಳುವಾ ಕ್ಕೈಲದೊಳು ಹಂತಿಗೊಂಡೆಸೆಯೆ ॥
ನೆಲದಾಣ್ಮನೋಲಗದೊಳೊಪ್ಪಿದನಾ । ಬಲವೈರಿಗೆ ಪಡಿಯೆನಿಸಿ ।
ಓಲಗಗೊಳುತಿರ್ದುದಿಸನೆಬಲದ ಸು ಶೀಲೆಯರೊಳು ಕಡುಗಣ್ಣ ॥ .
ಸಾಲುವಿಡಿದು ಸುಳಿಸುಳಿಸಿ ಯೆನ್ನೊಳು ಸತ್ಯ । ಸಾಲೋಕನವನೆಸಗಿದನು॥
ಕರುಣಾಮೃತಾಬ್ಧಿಯ ಕಲ್ಲೋಲಗಳಂತೆ । ತರತರದೊಳು ಕವಿತಧನ ॥

ಸರಸಕಟಾಕ್ಷವನೆಸಗಿಯವನ್ನೊಳು ಮನ । ಗರಗಿ ಮನ್ನಿಸಲೆಳಸಿದನು ॥೧೦
ಎನ್ನಮನ್ನಿಸನೆಂದೆಣಿಸಿ ತನ್ನೆಡದೊಳು । ಪೊನ್ನಪುತ್ಥಳಿಯಂತೆಸೆವ ॥
ಮನ್ನಣೆವಡೆದ ಪಟ್ಟದ ರಾಣಿಯು ಮೆಲ್ಲಗೆ । ಮನ್ನೋಜಕಂತಿಂತುನುಡಿದಳು ॥
ಅರಸ ಕೇಳ್ ಪೊಸ್ನ ಸರಸಸಾಹಿತ್ಯದ । ವರದೇವತೆ ತಾನೆಂದು ॥
ಪರಮಾರ್ಥವಾದಿ ಯತಿಸಿಂಗರಾರ್ಯನು । ಪರಿಷದಿಯೊಳು ಬಣ್ಣಿಪನು ॥
ಒದಗಲಿಸುವರೊಲಿದು ಪೊಗಳ್ದೊಡಾ । ಪ್ಪೋದಗಲಿವರೋದುಗಳು ॥
ವೇದವಿದ್ಯೆಯೊಳು ನೆಲೆಸಿಪ್ಪಳೆಂಬುದು ಲೋಕ । ವಾದವ್ಯಸಿಕಳೆ ರಾಣಿ ಕೇಳು ॥
ಇವಳು ಕಾವ್ಯಾಲಂಕಾರನಾಟಕಗಳ । ನವಣಿಗೆಯರಿವ ಬಲ್ಲವಳು ।
ಇವಳ ಸಾಹಿತ್ಯದ ಸವಿಗೆಳಸುತ್ತಿನ್ನು ಕವಿಗಳು ಕದುಬುಗೊಂಡಿಹವು ॥
ನವಣಿಗೆಯೊಪ್ಪ ಪುರುಳು ಪೊಗರ್ವಡೆಯಂ ಗವಿಸೆಯಲಂಕಾರಗಳು ॥
ಕವಿದು ಪರಿಯ ರಸದೊಳ್ಪಿಂಪುಗಮ್ಮನೆ ಕವಿತೆಯೊಂದನು ಪೇಳಿಸೆಂದು ॥
ಎಂದ ರಾಯನ ನುಡಿಗಾನು ವಿನಯಂಗೂಡಿ । ಬಿಂದೆಗಡಿಕಿ ಪಟ್ಟದರಸಿ ॥
ಕಂದ ಬಾರೆನ್ನ ಚೆಲ್ವಿಕೆ ವಿದ್ಯೆಯು ಬಾ । ರೆಂದು ಮುಂದಕೆ ಬರಿಸಿದಳು ॥
ಕಣ್ಣಡಜಾಣೆ ನೀ ಬಾರೆಂದು ಕರವಿಡಿ ದೆನ್ನ ತನ್ನೊತ್ತಿಗೆ ಬರಿಸಿ ।
ಎನ್ನೊಳು ಸ್ನೇಹವಿಪ್ಪಡಿಲ್ಲಿದೆರಳಗೂಡಿ । ಮನ್ನಿಸಿ ನುಡಿವಳೆಂತೆಂದು ।
ಕಲಿತ ವಿದ್ಯೆಯ ಬಲ್ಲಿಗೆ ಕೇಳ್ವುದೃಸೆ । ಫಲವಿವನರಿತು ನೀನೆಂದು ॥
ಅಲಸದೆ ನಾಣ್ಚದಂಜದೆಯಳುಕದೆ ಪೇಳು । ಪಲವಗೆ ಕಬ್ಬದೊಳ್ಪುಗಳ ॥
ಇಂತು ಪ್ರೌಢದ ರಾಣಿಯು ನುಡಿಗೇಳಿಯೊ । ದಂತೆ ಚಿತ್ತದ ಬಲಿದಿಡದು ॥
ಸಂತಸವಿಂಗೆ ಸಭೆಯೊಳು ರಾಯಂಗೆ ಮಾ । ರಾಂತು ಬಿನ್ನವಿಸಿದಳಿಂತು ॥
ಅರಸ ಕೇಳೆನಗೆ ನಿನ್ನಡಿದಾಳಿಗನೊಂ ದರಸಿಯುಪಟಿಯೊಳ್ತಿಯೊಂದು ॥
ಪರಿಕಿಪೊಡಖಿಳಾರ್ಥಸಾಧನಂಗಳಿಗಿವು । ನೆರವಾಗಿಹವು ನೇಮದೊಳು ॥
ನಿನ್ನಡಿಯೊಲವಿರುತಿಪ್ಪುದೆನಗೆ ಬಿಟ್ಟ । ನಿನ್ನೋಲಗವೆನ್ನ ಧರ್ಮ ॥
ನಿನ್ನಾಣತಿಗೆಯ್ವುದೆನ್ನ ಮನೋರಥ : ವೆನ್ನ ಭಾಗ್ಯಕೆ ಸರಿಯುಂಟೆ ? ॥
ಸಲೆವೇದಂಗಳಿಂದೆ ಪಲವು ವಿದ್ಯೆಗಳಿಂದೆ । ಫಲಬಗೆವಾತಗಳಿಂದೆ ॥

ಬಿಲಿವಡೆದಿರ್ದನೆಂದೆಣಿಸುವಳಲ್ಲ ನಿ । ನ್ನೊಲವೊಂದನೆ ನಂಬಿಹೆನು ॥
ನಿನ್ನ ಗುಣಂಗಳ ನೆಲೆಯಿದೋಲವು ಹೋದುವು: ನಿನ್ನಾಳ್ಗಳು ಹೆಸರೊಳ್ಗಳೆ ॥
ನಿನ್ನೊಲವರಿತು ನುಡಿವ ನುಡಿ ನಲ್ನುಡಿ । ಯಿನ್ನಿವಳಿಗೆ ಬೇರುಂಟೆ ? ॥
ನಿನ್ನ ಕೃಪಾರಸದಿಂದ್ಯೆಸಗುವೆನು ಕ । ರ್ಮನ್ನು ಚಿಂತೊಸನ್ನಾದಂತೆ ॥
ನಿನ್ನಾಶಿವಡೆದೊಳ್ಪುವೆತ್ತು ಸಕಲ ಭಾ । ಗ್ಯೋನ್ನತಿಯೊಡಗೂಡಿಹೆನು ।
ನಿನ್ನಾಶೀರ್ವಾದಂತಿನೊಳ್ಬಂದುದಿತಗಳ । ನನ್ನಾತನ ನಡೆವಲ್ಲ ॥
ಚಿನ್ನಿಗೆ ಶಿರದೇವರಾಯನ ಸಂಚಿಯು । ಜೊನ್ನಯೆಂಬೆಳ್ಗವೆತ್ತಿಹೆನು ॥
ನಿನ್ನಾಣತಿಗೆಳ ನಿನ್ನ ಬಳಿಗೆ ನಂದು । ನಿನ್ನೊಳಗೆಗಳನೆನಗೆ ।
ನಿನ್ನವಳೆನಿಸಿ ನಿನ್ನೆಡೆಬಡೆದಿರ್ದೆನಿ । ಯಿನ್ನತಿಗಿನ್ನಿರಿಯುಂಟೆ ? ॥
ಆನಾವಳೆನ್ನಮುನ್ನಿರವಾವುದು ಮಂ । ತ್ರೀ ನಿನ್ನ ದಯಾವಾವುದಕಟ ॥
ನಿನೆಂಬೆನಿವಳೆ ಪೆಳವನೆಡೆಗಾ ಗಂಗೆ । ತಾನ್ನೈದೆ ಬಂದುದೆಂಬಂತೆ ।
ಎನ್ನ ಜನ್ಮಕೆ ಸಾಫಲ್ಯವಾದುದು ನಿನ್ನ । ಚಿನ್ನದಯಾಳುಗಡಿಂದೆ ॥
ನಿನ್ನೊಳು ಮುನ್ನೊಳು ಕರದವರಿಬರು । ಮುನ್ನಿತಿವಡೆದರಿನ್ನಿಂದೆ ॥
ಆವ ಜನ್ಮದೊಳಾನವ ಸುಕೃತಗಳ । ನಾವ ಬಗೆಯೊಳೆಸಗಿದೆನು ॥
ಈ ಏಳ್ದೆಳಗೆನೆಡೆದಿ ಯೊಡಲೊಳೆ । ದೇವರೊಳಗವೆಸಗುವೆನು ॥
ಒಲಿದು ತನ್ನೊಡವುಟ್ಟು ಸೊಸೆಮಗಳೆಂದೆಂಬ ಹಲರು ಮುನ್ನಿನ ಬಾಂಧವರು
ಕುಲದೇವತೆಯೆಂದು ಕೂರ್ತಂತಿನ್ನಿಷ್ಟ । ಫಲವ ಪಡೆವರೆನ್ನಿಂದೆ ॥ ೩೦
ಸುತ್ತಣದೇಶದರಸಿಯರ ಭೈತಲೆ । ಗುತ್ತುಮಭೂಷಣವೆನಿಸ ॥
ಮುತ್ತಿನ ಸರವೆನ್ನ ರನ್ನವಾವುಗೆಗಳ । ಸುತ್ತಲಂಬಣಾಭರಣದಿಂದು ।
ಏನೇಳುವೆನೆನ್ನ ಪುಣ್ಯಾನಂದವ । ನಾವ ಬಗೆಯೊಳರುಹುವೆನು ॥
ಭಾವಿಸೆ ಸೊಗದ ಸುಗ್ಗಿಯ ತನಿಸೊಕ್ಕಿನ । ನಾವರಿಪುದು ಮತ್ತೇನೆ ॥
ಒಡೆಯನಾನಿರದಂತಿರ್ಪುದಲ್ಲದೆ ನೇ । ಕೊಡವೆಗೆ ಬೇರಿರವುಂಟೆ ॥
ಕಡುಕರ್ಮೆಯಿಂದೆನ್ನ ಬಿಡುಗಾಣತಿಯನೆನ್ನ ಮುಡಿಯೊಳಾಂತೆನುಮತ್ತೇನು
ಅಡಿಯೊಡವೆನ್ನಕಪೊಡಿಗೆ ಕಟ್ಟುದ ಬಗೆ । ಈ ದಿವ್ಯಸಭೆಗೆ ಸಂಗತವು ॥

ಪಾದಪದ್ಮಯುಗದೊಳು ಬಳೆದ ಬಾಲಿಕೆಯೆಂ । ಪಾಪರದಿಂದಾಲಿಸುವುದು ॥
ಪದಿನೆಂಟು ಬಣ್ಣನೆಯೆಂದು ಬಸಣಿಗೊಂಡು । ಸವಗೆಟ್ಟು ಬಯಲಬಣ್ಣಿಸದೆ
ಮುದದೊಡನೆ ಹಿರಿದೇಳ್ಗೆವಡೆಯೆ ಪದಿ । ಬಡೆಯ ಧರ್ಮವ ಬಣ್ಣಿಪೆನು ॥
ಅರಸಿಯುರನಿಬರುಮಾದರದಿಂದೆನ್ನ । ಸರಸಕಾವ್ಯವ ಸವಿವಂತೆ ।
ಪರಮಪತಿವ್ರತೆಯರ ನಡತೆಯನಿಲ್ಲಿ । ಪುರುಳುಗೊಳಿಸಿ ಪೊಗಳ್ವೆನು ॥
ಧರ್ಮದ ತನಿಗಂಪು ತಳೆದೋರೆ ಕಾವ್ಯದ । ಪೆರ್ಮೆ ಪೇರ್ಮೆದು ಬಿತ್ತರಿಸೆ ॥
ನಿರ್ಮಲಸತಿಯರ ಧರ್ಮದ ಕೃತಿಯನಾಗಿ । ನಿರ್ಮಿಸಿ ಕೇಳಿಪೆನಿಂದು ।
ಬಲ್ಲವಿಂದಾನು ಕೇಳಿದುದಕೆ ಪೆರ್ಚಿಗೆಯಂ । ದಿಲ್ಲದಿಂತೆಚ್ಚರುಗೂಡಿ ॥
ಎಲ್ಲರುಮರಿವಂತೆಳನಾತುಗಳಿಂದೆ । ಸೊಲ್ಲಿಸುವೆನು ಸೊಗಸುವೊಲು ।
ಎಂದ ನುಡಿಯ ರಾಯನುಮರಸಿಯುಂದು ಮಾ । ನಂದವಡೆದು ಬಗೆಗೊಳಿಸೆ ॥
ಸಂದ ಸತೀಧರ್ಮವನು ಸಾಹಿತ್ಯದೊ । ಳೊಂದುಗೊಳಿಸಿ ಪೇಳಿಪೆನು ॥
ಆದಿಕಾವ್ಯದೊಳೈದನೆಯ ವೇದದೊಳು ಮ । ನ್ವಾದಿಧರ್ಮಶಾಸ್ತ್ರದೊಳು ॥
ಭೇದಿಸಿ ಹಿರಿಯರು ಪೇಳಿದುದನೆ ಕೃತಿ । ಗೈದಾನು ಕವಿಗೊಳಿಸಿದೆನು ॥೪೦
ಸತಿಯರೀ ಕೃತಿಯನಾಲಿಸಿದೊಡಂದಿಂದಿಗೆ । ಪತಿಭಕ್ತಿ ಬಣ್ಣವೇರುವುದು ॥
ಮತಿ ಮಸುಳಿಸದೆ ಮರವೆದೋರದಿಹವರ । ಪತಿಶಯವನಾಗೊಡುವುದು ॥
ಎಳವೆಣ್ಗಳೀಕೃತಿಗೇಳೆ ತಪ್ಪೆಸಿಯರ । ನೆಳಮೆಯೊಳಳವು ಗೆಡಿಸದೆ ॥
ಬಳುವಂದುಬಾಳುವರತ್ತೆಮಾವಂದಿರ । ನೊಳಪೊಗೈದೊಳ್ಪುವಡೆವರು ॥
ಮುನಿವಾಳ್ತಿಯರಿಯದ ಮರುಳುವೆಣ್ಣೀಕೃತಿ । ಯಂನೆ ಮನವೊಲಿದೋದಿ ಪೊಡೆ ।
ಜನನಿವಳನು ಪೋಲ್ತ ಬಾಳೆ ಜಗದೊಳೆ । ಲ್ಲನ ಬಾಳ್ಪೊರ್ಮ್ಮವಡೆವಳು ॥೪೧
ಮುನಿದು ಮುಂದಲಿಸಿ ಮೋಡಿಯೊಳ್ತು ಮೂರ್ಖನ । ಸೊನೆಗಾತಿಯೀ ಕೃತಿಗೇಳೆ ।
ಇನಿಯನ ನೊಗವ ನೋಡದೆ ಮುನ್ನ ನೋಟಿಸಿ ಮನಗರಗುವಳುನತ್ತೆನು
ಕೆಡುನಾಲ್ಗೆಯುಳಿಕಣ್ಣ್ಮಿಗೆ ಕಂಡನೆಗೊಂಬ । ಮಡದಿಯರೀಕೃತಿಗೇಳೆ ॥

ಎಡಬಲದವರೇಳಿಸದಂತೆ ಮನದನ್ನ । ರೊಡನೆಬಾಳುವರೆಡಕದೊಳು ॥೫॥
ಬಗೆಯ ಪ್ರೀತಿಗೆಯೊಂಬಳೆಂಬುದನರಿಯದ । ಮುಗುದೆಯರ್ಗೆ ಕೃತಿಗೇಳೆ ॥
ನಿಗಮದೊಳೊಗೆದ ನೇಮಂಗಳ ತಿಳಿದೇ । ಜಗಕೆ ಪಾವನೆಯರೆನಿಪರು
ಅತ್ತೆನಾದಿನಿಯರೊಳುಕಡೆ ಕಾದುವ । ಸತ್ತೆಯರ್ಗೆ ಕೃತಿಗೇಳೆ ॥
ಉತ್ತಮಗುಣಗಳಿಂದೊಗುಗೆಯ್ದುವರೊಳು । ಹತ್ತುಗೆನೆರೆಬಾಳುವರು ।
ಒಪ್ಪದೊಪ್ಪದೊಳು ಮುಜ್ಜುಗಿಸುವ ಸತಿಯು । ಶಿಪ್ಪರುಮೀಕೃತಿಗೇಳೆ ॥
ಬೇರ್ಪಡಿಸದೆ ಪ್ರೀತಿವ ಬೇರ ಪತಿಯ । ಪ್ಪೀರ್ಪರೊಂದೆನಿಸಿಯೊಪ್ಪುವರು
ಇದು ಪಾತಿವ್ರತ್ಯಧರ್ಮತತ್ತ್ವದಸಾರ । ಐದೆ ಸಂಜೀವನ ಮಂತ್ರ ॥
ಇದು ಪರಮಾರ್ಥ್ಯಹಿತೋಪದೇಶದ ತಿರುಳ್ । ಇದನು ಸತಿಯರೋದುವುದು ॥
ಇದನೋದಿಪುದೊಳ್ಪಿಂದಹಿರಿಯರ್ಮದ । ಹದನರಿತಾಚರಿಸುವುದು ॥
ಇದನು ಕೇಳಿಪುದಿದರಿಂದೊಳಗಾಗುವುದು ಹರಿ । ಬದಿಯರೆನಿಸಿ ಬಾಳುವುದು ॥

ಚೆನ್ನಿಗ ಚಿಕ್ಕದೇವರಾಯನ ಸಂತತಿ ।
ಹೊನ್ನನ್ನುಸುರದ ಕಬ್ಬದೊಳು ॥
ಉನ್ನತಿವಡೆದೊಗೆದುದು ಪೀಠಿಕಾಸಂಧಿ
ಸನ್ನುತಗುಣಸಂಬಂಧಿ ॥೧೧॥

---

## ಎರಡನೆಯ ಸಂಧಿ

ಮಂಗಳಗುಣಗಣನಿಧಿಗೆ ನಿರ್ಮಲನಿಗೆ । ತುಂಗಮಹಿಮಂಗೆ ಮಾಧವಗೆ ॥
ಸಂಗತಜನಸತ್ಫಲದಗೆ ಭಕ್ತ್ಯಾನು । ರಂಗಧಾಮನಿಗೆರಗುವೆನು ॥
ಅಂಗೋದ್ಭವನ ತಾಯಿಗಿಂಗದಿರನ ತಂಗಿ । ಗಿಂಗಡಲಣುಗಿಗಿಂದಿರೆಗೆ ॥
ರಂಗಧಾಮನ ರಾಣಿಗೆ ರಾರಾಜಿಪ । ರಂಗನಾಯಕಿಗೆರಗುವೆನು ॥
ಪತಿಯೊಳು ಪರಭಕ್ತಿಗೆಯ್ವುದು ಲಕ್ಷ್ಮೀ । ಸತಿಯಾಣತಿಯೆಂದು ಬಗೆದು
ಪತಿಯನೆ ಪರದೇವತೆಯೆಂದು ಭಜಿಸುವ । ಸತಿಯರ ಸನ್ನುತಿಸುವೆನು ॥

ಪತಿಭಕ್ತಿಯೊಂದು ಶ್ರೀಪತಿಭಕ್ತಿಯೊಂದಿದ । ರತಿಶಯಕೆಣೆಯಿಲ್ಲ ।
ಮತಭೇದವೆಂಬುದು ಮಾಧವಭಕ್ತಿಗಿದಕಾ । ಮತಭೇದವು ಮಗುಳಿಲ್ಲ ॥
ಅವರವರೊಡನಂತರಂಗದೊಳಾಜ್ಞ್ನ । ಪಾದವ ಭಜಿಪ ಭಾವೆಯರ ।
ಪಾದಧೂಳಿಗಳಿಂದೆ ಪಾವನವಹುದೀ । ಮೇದಿನಿಯೆಂಥ ಪಿರಿಷ್ಪುದೇನು ॥೫
ಪತಿತರ ಪಾವನನೆನಿಸುವ ಬಲ್ಮೆಯೊ । ಳತಿಶಯವಡೆದ ತೀರ್ಥಗಳು ।
ಸತಿಯರ ಪಾದಸಂಸ್ಪರ್ಶದೆ ತಮ್ಮದು । ಷ್ಕೃತವ ಕಳೆಯಲೆಳಸುವುದು ॥
ತಡೆಯುವೆಲ್ಲೆಡೆಯೊಳು ತಾನು ಬೀಸುವೆನೀ । ಧಡರನೇಳಿಸೆನೆಂದೆಳಲು ॥
ಸಡಗರದಿಂದೆ ಸಾಧ್ವಿಯರಡಿಸೋಂಕಿದ । ಪುಡಿಯು ಮುಡಿಯೊಳಾಡುವುದು ॥
ತೇಜಗಳೆಡೆಬಿಡದೆ ತೀರುತಿರುವೆ ತ । ನ್ನೋಜಯುಡುಗದೆ ಭಾಸ್ಕರನು ॥
ಈ ಶಾಂತಿ ಸಾಧ್ವಿಯರೆಸಕದೇಳಿಗೆಯಿಂದೆ । ತೇಜವಡೆದು ತಿರುಗುವನು ।
ಮುಳಿಗರಿವುದು ಬಿಳಿಸೆರಿಪ್ಪುವಿಳಿ ತಳ । ಲೀಸು ಪೋಗದೆ ತಡೆದಿಹುದು ॥
ಮಳೆಯಿಲ್ಲದ ಪತಿವ್ರತೆಯರ ನಡತೆಯ । ಬಳೆದೊರೆಂಬರು ಬಲ್ಲವರು ॥
ಪರಮಪತಿವ್ರತೆಯರ ಪಾದದರ್ಶನ । ದೊರೆಕೊಂಡುದೆ ಪುಣ್ಯದಿವಸ ।
ಪರಿದಿವರನು ಬಲಸರೆ ಭೂಪ್ರದಕ್ಷಿಣ । ವಿರಚನೆನ್ನೇವಕ್ಷೇಪನು ॥೧೦
ತನ್ನನಿಯಮ ತಾಯಿ ತಂದೆಯ ಕುಲಗಳ । ಸುಸ್ಥಿತಿಗೆಯ್ದುತ್ತನಡೆದು ।
ಮನ್ನಣೆವೆತ್ತ ಸಾಧ್ವಿಯರ ಮಹಿಮೆಗಳ । ನನ್ನುತಿಸುವೊಡೆನ್ನಳವೆ ॥
ಈ ಸುಚರಿತ್ರೆಯರೆಸಗಿದನ್ನವನುಣ । ಲಾಸೆವಡುವರು ಪಿತೃಗಳು ।
ಆ ಸುಖದೊರೆಕೊಂಡೊಡವರಿಗಪ್ಪುದು ತೃಪ್ತಿ । ಸಾಸಿರ ವರುಷಪರ್ಯಂತ ॥
ಸತಿಯರ ಕೈಸೋಂಕಿದನ್ನವ ಸವಿವುದ । ರತಿಶಯವಾಹಲೆನ್ನಳವೆ ॥
ಅತಿಕೃಚ್ಛ್ರಚಾಂದ್ರಾಯಣಸಾಂತಪನಾದಿ । ವ್ರತನಿಯಮಾದ ಫಲಗಳೆಲ್ಲ ॥
ಇವರಿದ್ದೆಡೆ ಪುಣ್ಯತೀರ್ಥ ಪುಣ್ಯಕ್ಷೇತ್ರ । ವಿವರಿಪ್ಪ ಮನೆ ದೇವಭವನ ।
ಇವರೆ ಪ್ರತ್ಯಕ್ಷದೇವತೆಯರು ದಿಟವೆಂದು । ವಿವರಿಸುವರು ವೇದವಿದರು ॥
ಉದಯಕಾಲದೊಳೆದ್ದೊಲಿದಿಷ್ಟದೈವದ । ಪದಗಳ ಪಾಡುವಂದದೊಳು ॥
ಪತಿವ್ರತೆಯರ ಪೆಸರ್ಗೊಂಡು ಪೊಗಳ್ವುದು । ವಿದಿತನೈಸಲಿ ಸ್ವೈರಕಳಿಗೆ ।

ಪತಿಯ ಸಾಮ್ರಾಜ್ಯ ಭಕ್ತಿಯ [illegible]ಗಿಸದರೆ । ಗತಿಯಿಂದು ಕಡುಪಿಡಿದಿರ್ಪ॥
ಸತಿಯರಿರ್ಪೆಡೆಯೊಳು ಕೃತಯುಗವೊಂದಲ್ಲ । ದಿತರಯುಗಕ್ಕಿಂಬಿಲ್ಲ ।
ಪರಮಸತಿವ್ರತೆಯರ್ಪ ಬಳಿಯೊಳಾ ಸಿರಿರಾಣಿ ಸೇರಿ ಬಂದಿಹಳು ॥
ಸರಸತಿ ಸಾವಿತ್ರಿಗಾಯತ್ರಿಯರು ಮಹಾ ಪರಿಸರದೊಳು ಬಳಸಿಹರು ॥
ಪಲವು ಸುಕೃತವಿಂತು ಪರಿಣತಿವೆತ್ತುದೊ । ಕುಲದೇವಿಕ್ಕ ಗುಂಪು
ಕೂಡಿದುದೊ ॥

ಸತಿಪರಿಶುದ್ಧಿ ಸಾಕಾರವಾದುದೊಯೆನೆ। ಕುಲಪಥ ಕುರುಹುಗೊಂಡಿಹಳು
ಪತಿಭಕ್ತಿರಸವಿಂತುಬರಿದುದೊಪರಿಶುದ್ಧ ಮತಿಗಿಂತುಮೈದೋರಿರ್ಪುದೊ
ವ್ರತದೇಳ್ಗೆಯಿಂತು ಚಿತ್ರವಡೆದುದೊಯೆನೆ । ಸತಿಯರು ಜನವಡೆದಿಹರು
ಜಗದೊಳಪಾಂಸುಲೆಯರ ಚರಿತಕೆ ಸರಿ । ಯಿಂಗಿಲ್ಲ ವಿಶ್ವಧರ್ಮದೊಳು ॥
ಬಗೆಯುಪಿತೆಸಗಬಲ್ಲವರಿಗೆಂದೆಂದಿಗು । ಮೊಗದೋರವು ಮೋಸಗಳು ॥
ಈ ಕಾಲಮಾಕಾಲಮೀದೇಶವಾದೇಶ । ಮೀಕುಲಮಾಕುಲವೆನದೆ ॥
ಏಕರೀತಿಯೊಳೆಸಗುವ ಧರ್ಮವಿದಕಿನ್ನು ಲೋಕದೊಳಗೆ ಬೇರುಂಟೆ । ೨೧
ಗುಣಗಣದೊಡಲ ದಂಡಿಸುವಾಯಸವಿಲ್ಲ ಹಣವವೆಚ್ಚಿಸುವ ಪಾಡಿಲ್ಲ ।
ಗುಣವಂತೆಯರೆಸಗುವ ಪತಿಶುಶ್ರೂಷೆ । ಗೆಣೆಯಹ ತಪವಿನ್ನೊಳವೆ ॥
ಪಲಸಾಸಿಗೆ ಹರಿಹರು ಬಳಲಿಯುಲ್ಲಿ । ಫಲನೀಡ ಮುಳುಗಿ ಮುಂಗೆಡದೆ ।
ನೆಲೆಪೆಸಗುವ ನಲ್ಮೆಂಡಿರ ನಡತೆಗೆ ಪಲನೇಮಗಳು ಹಾಸಟಿಯೆ ॥೨೩
ಮನೆಯ ತೊರೆದು ಮನವಾಳ್ಕೆಯನ್ನುಳಿದುಂತ ನ್ನನುಕೂಲದಾಸೆಯನಳಿದು
ಬನದೊಳು ಗೆಯ್ವ ಬಹುಯತಪಗಳು ಕುಲ । ವನಿತೆಯರವಗೆ ದೊರೆಯೆ ।
ಮನೆಯ ಧರ್ಮತ್ರಯ ಮನವಾಳ್ಕೆಯ ಧರ್ಮ । ನಿನ್ನಯನೊಳಗ ದೇವಪೂಜೆ
ಮನನದಿವನ ನೆನೆವುದೆ ಸಾಧ್ವಿಯರಿಗೆ । ಮುನಿಗತಿಯರ ಮೋಡಿಯೋಸು॥
ಇನಿಯನ ಸೇವೆಯೊಳಿರೆಯಿಲ್ಲದ ಧರ್ಮ । ಮನವಾಳ್ಕೆಯೊಳರ್ಥಕಾಮ ॥
ಮನವನ್ನರೊಳು ಮಾಧವನ ಭಾವಿಸೆ ಮೋಕ್ಷ । ವೆನೆ ಸತಿಯರಿಗೇನು॥
ಪಲವು ಧರ್ಮಂಗಳ ಬಳಿಯುಪ್ಪಾಯವಾಸ ಫಲವ ಭೋಗಿಸ್ಪುದಾನಂದ ॥

ಕುಲಪತಿ ಧರ್ಮನ ಕೊಳಿಸಗುವೃಷಾ । ಫಲಭೋಗಗಳ ಪಾಟಿಯಲ್ಲಿ ॥
ಚೆಲುವನೇನುಬಿಡದು ಕಣ್ಣಸಗೊಂಡು ಮುನಿವರ । ರೊಡನಿಸುವುಗ್ರತಪಗಳಾ ।
ಪುಡದಿಯೊನಿಯೂರ ಮನೆವರಿತೆಸಗುವ ನೆಡತೆಗಳಿಗೆ ಪಡಿಯಲ್ಲ । ೨೮
ಆರೂಢಿವೆತ್ತ ಮಹಾಭಾರತದೊಳ್ । ಗಾರಣ್ಯಕಪರ್ವದೊಳು ।
ನೂರತೊಂಬತ್ತೆಂಟನೆಯಧ್ಯಾಯದೊ । ಳಾರಯ್ಯೆ ಕಥೆಯೊಂದುಂಟು ॥
ಸಾಂಗವೇದವನೋದಿ ಸಕಲಧರ್ಮದ ತ । ತ್ವಂಗಳನರಿತಾಚರಿಸಿ ॥
ತುಂಗಮಹಿಮೆವೆತ್ತು ದೋಷವಳಿದು ಮುನಿ । ಪುಂಗವನೋರ್ವನೆಸೆದನು ॥
ಮನೆಯೊಳು ಮರುಕವನುಳಿದು ತಪಮಗ್ನ । ಮನದಿ ವನವಾಸವಸೇರಿ ॥
ತನುವ ದಂಡಿಸಿ ಘೋರತಪವನೆಸಗುತಲ್ಲಿ । ಮುನಿಪುಂಗವನೆನಿಸಿ ಮೆರೆದನು ।
ಒಂದು ದಿವಸ ವೇದವೋದುತೆ ಬೇಸಗೆ ಯಿಂದೆ ಬಳಲಿದ ಬಿಸಿಲಿನೊಳು ॥
ಬೆಂದುರಿ ಬೆಮರುತೆ ಬಿಸುಸುಯ್ಯುತ್ತಲಿದು । ನಿಂದನು ಮರದ ನೆಳಲೊಳು
ಆ ಋಷಿವರನಂತಿರ್ಪಾವೇಳೆಯೊಳಾ ಭೂರುಹದಗ್ರಶಾಖೆಯೊಳು ।
ಸೇರಿದ ಬೆಳ್ವಕ್ಕಿ ಬೀರುವ ಧ್ವನಿಯಿಂಗೆ । ಕ್ರೂರವಾಗಿರೆ ಕೊನರಿದನು ।
ಆವರಿದಸಿಯಾಪ ಬಳಿಯೊಳು ಪೋಗ್ಯಿದು । ದಾಸರಿಸರಿಪನಾರ್ಕಿದು ॥
ಕೋಪವೇರಿಸಿ ನೋಡೆ ಕಣ್ಣುತಾಪಸನಂ । ದಾಪಕ್ಷಿಗಮವಡಗಿದುದು ।
ಹರಣವಳಿದು ಧರೆಗುರುಳಿದ ಪಕ್ಷಿಯ । ನರಿಯುತಿಷ್ಟ್ನಿ ಖರತಪಸಿ ॥
ಇರದೆ ತಾನೆಸಗಿದ ತಪಗಳ ಸತ್ವಕೆ । ಸರಿಯಿಲ್ಲೆಂದೆಣಿಸಿದನು ॥೩೦.
ಬಳಿಕ ಹಸಿದು ಪಾರ್ವರ ಬೀದಿಯೊಳ್ ಪೋದು । ನಿಳಯದ ಪೊರೆಯ್ಯ ನಿಂದಲ್ಲಿ ॥
ಬಳಿಬಿಡೆನೆನಗುಣಬಡಿಸೆಂದೆಲ್ಲಿದರ । ಕುಲಪಾಲಿಕೆಗುಸುರಿದನು ॥೩೧
ಒಲಿದೋಪಕ್ಷಿಯೆಂದೊಳ್ಳಸರಿಸವಾ । ಕುಲಸತಿಯುಕ್ತಗೂಡಿ ॥
ನಲವಿನಿಂದವನಿಗನ್ನವನೀಯುವೆನೆಂದು ಕೆಲದೊಳು ಕುಳ್ಳಿರಿಸಿದಳು ॥
ಅನಿತರೊಳಲ್ಲಿಗವಳ ಗಂಡನೈತರೆ । ಮನವೊಲಿದಿದಿರೆದ್ದು ನಡೆದು ॥
ವಿನಯದಿಂದುಚಿತೋಪಚಾರವನೆಸಗಿ ಬಳಿಕ । ಮನದನ್ನನ ಮನ್ನಿಸಿದಳು ॥
ಪತಿಸೇವೆಯೊಳಿಂತು ಪಸಿದ ಪಾರ್ವನ ಮರೆ । ದತಿವಿಳಂಬವನಾಚರಿಸೆ ॥

ಸತಿಯರ ಧರ್ಮದ ಸಾರವನರಿಯದೆ । ಖತಿಗೊಂಡು ಮುನಿಗಳಿಸಿದನು ॥೩೯
ಅತಿಘೋರತಪವನೆಷ್ಟುಪಡಲು ನೀನರಿಯದೆ । ಮತಿಗೆಟ್ಟು ಮರುಳಾಗದಿರು ॥
ಪತಿಶುಶ್ರೂಷೆಯು ಬಳಿಕ ಫಲಿಸದಿಲ್ಲಿ । ಯತಿಧರ್ಮದಿರವಿದು ಬೇರೆ ॥೪೦
ಎಂದು ಗರ್ವದ ಸೊಕ್ಕಿನಿ ನುಡಿದ ಮುನಿ । ಯಂದವನಾಕ್ಷೇಪಿಸುತಲೆ ।
ಅಂದು ತನ್ನಾಣ್ಮನೊಳನುನಯಿಸದೆಷ್ಟು । ಕಂದು ನುಡಿದಳಂತೆಂದು ॥೪೧
ಬಳಲಿದೆ ಸಾಕಿನ್ನು ಬಡಿಸಿದನ್ನವನುಂಡು । ತಳುವದೆ ತಪವನಾಚರಿಸು ॥
ಬಳುವಕ್ಕಿಯು ಬೇಳುಗೆಡಹಿದ ಸಿಂಗವು । ಬಳಿಯೊಳು ಬಣ್ಣವಡೆಯದು ॥
ಮರುಳೆ ನೀನೀಮಹಾತ ನಾರಿ ಧರ್ಮಸೂಕ್ಷ್ಮದೊಳ । ಮಿರವನೀನರಿತವನಲ್ಲ ॥
ಪರಮಪತಿವ್ರತೆಯರ ಬಗೆ ಬೇರಿದು । ಹಿಂತಿರಾದ್ಯರ ಹವಣಲ್ಲ ॥೪೨
ಇತರ ಚಿಂತೆಯನುಳಿದೇಕಚಿತ್ತದೊಳಾತ್ಮ । ಪತಿಪಾದಭಕ್ತಿಯೊಳಿಸಿರಾ
ಸತಿಯರೊಲಿದು ಪರಸಿದುದೆಯನುಗ್ರಹ । ಖತಿಗೊಂಡು ನುಡಿದುದೆ ಶಾಪ
ಪ್ರತಿಮಾನಸಪ್ರಶ್ನಯತಿಗಳರದೆಗೈ । ವತಿಘೋರತಪದಾಚರಣೆ ॥
ಸತಿಯರ ಧರ್ಮಕೆ ಸರಿಯಿಲ್ಲೆಂದುಗೀ । ಶ್ರುತಿಯುಗಸ್ಮೃತಿಯೊಳಾಡಿದನು ।
ಆ ತ್ರಿಮೂರ್ತಿಗಳಾನಂತ್ರಿತಜಲಸೇಕ । ಮಾತ್ರದಿ ಶಿಶುವು ಶಿಶುವಾಗೆ ॥
ಅತ್ರಿಯ ಸತಿಗನಸೂಯಾದೇವಿಗೆ । ಪುತ್ರರಾದರು ಪೂರ್ವದೊಳು ॥೪೩
ಪಾತಿವ್ರತ್ಯದೇಳ್ಗೆಯು ಹಂಚಿಸೆನೆಂ । ದೋಷಿತು ಬಾಧೆಯನುಸಿರ್ದಪನೆ ।
ಸೀತೆ ಬೆಂಕಿಯ ಪುಗೆ ಶೀತಳವಾಯಿತು । ವಾತಾಪುಡಿಯು ಮತ್ತೆ ಬೇರೆ ॥
ಹರನ ಸಾಹಸಕಂಜದೆ ಜಲವಗಲಲು । ಸ್ವರ್ಗದ ಪದುಬರಿಸ ಪೋದಂದು
ಪುರದೊಳಗಿರ್ದ ಪ್ರಾಣಾಂಗನೆಯರ ಪಾ । ತ್ರಿವ್ರತ್ಯದ ಸಲಿಗೆಯಿಂದೈಸೆ ॥
ಧರ್ಮಗತಿಯ ತಾರತಮ್ಯವ ತಿಳಿವೊಡೆ । ಕರ್ಮವ ಬಿಟ್ಟು ಬೇಸರದೆ ।
ನಿರ್ಮಲಮತಿಯಾಗಿ ನೀಂ ನಡೆ ಮಿಥಿಲೆಗೆ । ಧರ್ಮವ್ಯಾಧನ ಬಳಿಗೆ ॥೪೪
ಎಂದೇಕಪತ್ನಿ ನುಡಿಯೆ ಕೇಳಿ ಮುನಿ ಮನ । ದಂದವಳಡಿಗೆರಗಿದ ॥
ಅಂದಿನ ಗರ್ವವಳಿದು ಮಿಥಿಲೆಯ ಬಳಿ । ಸಂದನು ಸಂತೋಷದೊಳು ॥೪೫
ಈ ಪಾತಿವ್ರತ್ಯದೇಳ್ಗೆಯನಾಲಿಸೆ । ಪಾಪಗಳೆಲ್ಲಂ ಪಾರುವುವು ॥

ಶ್ರೀಪತಿಯಿಂತವರೆನ್ನ ಸೇವಕರೆಂದುರೆ : ಕಾಪಿಡುವನು ಕರುಣದೊಳು ॥೪೧

ಚೆನ್ನಿಗಕೇಶವದೇವರಾಯನ ಸಂಚಿಯ ;
ಹೊನ್ನಮ್ಮಸುಸಿದ್ಧ ಕಬ್ಬಿಗರೊಳಂ ॥
ಮನ್ನಣೆವಡೆದೊಂದರ ಮುಂದಣ ಸಂಧಿ ।
ಸನ್ನುತಗುಣ ಸಂಬಂಧಿ ॥೪೨

---

## ಮೂರನೆಯ ಸಂಧಿ

ಶ್ರೀಭೂಮಿನೀಳಾನಾಥನಿಗನುಪಮ ವೈಭವನ್ಯಕ್ಕಂಬ್ರಾಪತಿಗೆ॥
ಸ್ವಾಭಾವಿಕಶುಭಗುಣನಿಧಿಗಂಬುಜ । ನಾಭನಿಗಾನೆರಗುವೆನು ॥೧
ಶ್ರೀವನಮಾಲಿನವನ್ನಗನಗರೂಪದ ವಾಸ । ದೇವನ ವಿಭವಂಗಳನು ॥
ಆಪಥದಿಂದಲಪೇಕ್ಷೆಸುಸಂಸುವ ಟ । ಕ್ಷ್ಮೀವಧುವನು ವಂದಿಸೆನು ॥೨
ಪತಿಪಾದಭಕ್ತಿಯುಳ್ಳ ಬನ್ನಣಚೆತ್ತ । ಸತಿಯರೆನಿಸುವ ।
ಸತತಶುಶ್ರೂಷೆಯ ಬಗೆಯನೀಗ ಸಂ । ಗತಿಗೈದುದನು ಪೇಳ್ವೆನು ॥೩
ಪತಿಯೆ ಪರಮಗುರು ಪತಿಯೇ ದೇವತೆ । ಪತಿಯೇ ಸದ್ಗತಿಯೆಂದು ॥
ಪತಿಯ ಪಾದಾಂಬುಜದೊಳು ಭಕ್ತಿಗೆಯ್ವುದು । ಸತಿಯರ ಧರ್ಮದ ಸಾರ ;
ಪತಿಯೊಲವರಿತು ಪತಿಯ ಸೇವೆಯೊಳಿದ್ದು : ಪತಿಯಾಜ್ಞೆಗಳನೆಸಗಿ ।
ಪತಿಯಾಣತಿಯ ಬಂದಿರೊಳಡಗಿಪ್ಪುದು । ಸತಿಯ ಧರ್ಮದ ಸರ್ವಸ್ವ ॥೪
ವ್ರತಹೋಮನಿಯಮೋಪವಾಸಪ್ರಸಂಗಗಳಿಂ । ಪತಿಸೇವೆಯದಧರ್ಮಗಳು॥
ಸತಿಶುಶ್ರೂಷೆಗೆ ಹೊಣೆಯಲ್ಲೆಂದಿದ ಧರ್ಮವರಿತಾಚರಿಪುದು ॥೫
ಪ್ರತಿಮೆಯ ರೂಪದ ಪಂಕಜನಾಭಗೆ । ನತಿಗೆಯ್ದು ವಲಸೇವಂತೆ ॥
ಪತಿಯ ರೂಪದ ತನ್ನ ಕಾಳಿಗೆ ಬಂದಕ್ಕೆ ಪತಿಯ ಪಾದವ ಭಜಿಸುವುದು ॥
ಹಗಲಿರುಳೆನ್ನದೆ ಪತಿಯಾಣತಿಯೊಳು : ತೊಗದಿರುವದೆ ಮೊನೆಗೊಳದೆ ॥

ಬಗೆಬಗೆಯುಡೆ ತನ್ನ ಭಾಗ್ಯದ ಫಲವೆಂದು। ಬಗೆದು ಭಕ್ತಿಯೊಳೆಸಗುವುದು॥
ಪ್ರಾಯವನನುಗೊಳಿಸದೆ ವೈಮನಸದೆ । ಕಾಯುವ ಸ್ನೇಹವಚನಗಳ ।
ಆಯಾಸದಿಂದಳವಳಿಯುದೆ ಪತಿಯನು । ಪ್ರಾಯದಿಂದುಪಚರಿಸುವುದು । ೯
ಒಲಿದು ಪತಿಯು ಮನದೊಳವನಾರೈದು ತಾ । ನಲಿಸಿಕೆಗೊಳ್ಳದನುಸರಿಸಿ ।
ಕುಲಸತಿಯರ ಧರ್ಮ ಕೆಡಸದಿಡೆ ಸ್ನೇಹವ । ನೆಲೆಗಾಣಿಸಿ ನೆಗಳುವುದು ॥೧೦
ಇದೆ ನಿನ್ನ ಪತಿ ಬಂದನೆಂಬ ನಲ್ನುಡಿಗೇಳಿ । ಮುದವನೈದಿ ಮೊಗಸಿಂಪಡೆದು ।
ಕದಂಬಿಯವನ ಸೇವೆಗನುವಪ್ಪ ವಸ್ತುವ । ನೊದವಿಪುದುವುರ್ಗೆಗೊಂಡೊಡನೆ
ಇಂತು ನೋಡುವೆನಿಂತು ಮಾಡುವೆನಿಂತೆಸಗುವೆ । ನಿಂತು ಸೇರುವೆನಿಂತಿರುವೆ ।
ಇಂತು ಮನ್ನಿಪೆನಿಂತು ಮನಗರಗಿಸೆನೆಂದು । ಚಿಂತಿಪುದೇಕಚಿತ್ತದೊಳು ।
ಮನೆವಾಳ್ತೆ ವೈಯ್ಯಲಿಸಿಕೆ ಮಕ್ಕಳ ಮುದ್ದು ಬಿನದಂಗಳನು ಬಿಟ್ಟಿದ್ದು ॥
ದನಿಗೇಳದ ಮುನ್ನ ತಾನಿದಿಗೊರಗಿದನ । ನನುವರಿತನುಸರಿಸುವುದು ॥
ಸೋಗೆ ಮುಗಿಲ ಕಂಡು ಸೊರಪ್ಪವಂದದೊಳನು । ರಾಗದೆ ಪಥ ಲಹರಿಯೊಳು
ಬಾಗಿಲನೊಳಪೊಕ್ಕು ಬಂದನೆಂಬುದುಮತಿ ನೇಗದೊಳಿದಿರುಗೊಳುವುದು
ತಳುವದುತ್ಸುಕತನಗಸ್ತ್ರ ನೆಗ್ಗದಂತರ । ದೊಳಿದು ತೊಡೆದು ಮಂಗಲದೊಳು ।
ಬಳಕ ನಡೆದು ಬಂದ ಬಳಲಿಕೆಗಳಿದು । ತೊಳವಾತುಗಳನೊಡರಿಪುದು ॥
ಮಸಿವಲಸಿಕೆಗಳ ಪಿಂದು ಕೆಲದಿ ನಿಂದು । ನಸುನಾಣ್ಣುಕ್ತ ನಲವಿನೊಳು ॥
ಒಸೆದಾಲವರಿತೆಯ್ಯನುಚಿತೋಪಚಾರವ । ನೆಸಗುವುದೇಕಚಿತ್ತದೊಳು॥
ಆವಸರದು ಪೇಳಿದುದಾಗ ಬಗೆವರ್ಪ । ದಾಹಿಥಗಳನಾರೈದು ।
ಭಾವಿಸಿ ತಿಳಿದುಟ್ಟುತೊಟ್ಟು ಬಗ್ಗೆಗೆಯಿಂದ । ಭಾವವ ಬಂದಿಗೊಳುವುದು
ದಾಕ್ಷ್ಯದೇವತೆಯಿವನೆಂದು ಪತಿಯೊಳು ಪಿ । ತೃಭಾವವ ಬಗೆಗೊಳಿಸಿ ।
ಕಷ್ಟಕಾರ್ಪಣ್ಯವ ಕಾಣಿಸು ಕನಲದೆ । ತುಷ್ಟಿನಡಿಪುದೊಲವಿಂತು ॥೧೧
ಹಿತವಿದು ಶಾಸ್ತ್ರವಿಹಿತವಿದು ಮನಕೆ ಸಂ । ಮತವಿದೆಂದರ್ಥಮರ್ಮವನು ॥
ಮತಿಯೊಳಗೆಣಿಸಿ ಮನದನ್ನನ ಸೇವೆಗು । ಚಿತವಸ್ತುಗಳನೆ ಚಿಂತಿಪುದು ।
ಮನೆವಾಳ್ತೆಯೆಸಗುವ ಮರ್ಯಾದೆಯನು ತ । ನ್ನನಿಯನಿಗಿಂತೆಂದರುಹಿ ॥

ಮನದೊಳವರಿತೊಡಬಟ್ಟ್ಯದನೋಡರಿ । ಮನಭಾರದುಳಿನು ನಾರಿಪ್ಪುದು ॥
ಗ್ರಾಸವಸನಪರಿಕರವಿಲ್ಲದಿರೆ ತ । ಟ್ಯಾಸುರದೊಳು ಗಾಳುಗೆಡದೆ ॥
ಓಸರಿಸುತೊತ್ತಯ್ಯನೇಕಾಂತದೊಳೊಮ್ಮೆ । ಬೇಸರಿಸದೆ ಬಿನ್ನವಿಪ್ಪುದು ॥
ಗಪ್ಪಗದೊಂಕುಗಳ ಕೇಳದು ಗರ್ವವ ಬಿಟ್ಟು । ತನ್ನ ಸಗ್ಗಳವನು ಹೆಚ್ಚಿಸದೆ ॥
ತನ್ನ ಬಾಳಿಕೆಬಡತನದ ಬಗೆಯನೆಲ್ಲ । ಬಿನ್ನವಿಪ್ಪುದು ವಿನಯದೊಳು ॥
ಮುನಿದಿನಿಯನ ಕಡುಮೊನೆವಾತಿಗೆ ನೊಂದು । ಕನಲದೆ ಗಾಡುವಡೆಯದೆ ॥
ತನುಮನಗಳ ತನ್ನ ಬಸಗೈದು ಧೈರ್ಯವ । ಕೊನರಿಸಿ ತಂಪುಗೊಳಿಪ್ಪುದು ॥
ಪನಣೆಲ್ಲದ ಹಲವಗೆವಾತನಾಡದೆ । ಕವಿಕೋಡುಗಳನು ಕಾಣಿಸದೆ ॥
ಘನವಿಲ್ಲದೆ ನೆಗ್ಗೆನಲಿಕೆದೊರಬದೆ । ಸವನಿಸುಪ್ಪುದು ಸಂತಸವನು ॥ ೨೪
ಅರೆ ಬೊಪ್ಪಿರಿಪಾರ್ಭಟೆಯನಾಟಿಸದೆ । ಪಾಠರದೆ ಪರಪರಾಯವನು ॥
ಪೋಲದೆ ಪುರ್ಪ್ಪ ಗಂಟಿಕ್ಕದೆ ಕ್ರುಧಿಯದೆ । ನೇರಿ ನೇವೆಯನೆಸಗುವುದು ॥ ೨೫
ನೋಯಿಸಿ ನುಡಿಸದೆ ನೋಡದುಚಿತಗಳ । ಬೇಯುವೆಸಗು ಬೇಸರಿಸದೆ ॥
ಆಯುವರಿತು ತರಲಾಯದ ಪತಿಯೊಳ । ನೋಯಗೊಳದೆ ಸುಖಿಸುತ್ತುದು ॥
ನೆರತೊಂದು ನೆವದೊಳಬಿಸುವೇರಿದ ಕೋಪ । ದುರುಪಿನಿಂದೊದರುವಪತಿಗೆ
ಕೆರಸಂದು ತಾನಿದಿರುತ್ತರವೀಯದೆ । ನೆರವೆಗೆಪ್ಪುದು ಸ್ಥಿತಿವಡೆದು ॥ ೨೬
ಪತಿಯುಬ್ಬಿಗೆವೊನ್ನಬಂದೊಡೆ ಸುದರಿಂದೆ । ಖತಿಗೊಂಡುಗಲುಗುಪಿಸದೆ
ಇತರರರಿಯದಂತೇಕಾಂತ್ಯಸಮಯದೊ । ಳತಿಭಕ್ತಿಯಿಂದಾಪ್ಪುವುದು ॥
ಅನುಚಿತಕಾರ್ಯಮನವನೊಡರಿಸೆ ಕಂಡು । ನಿನಗಿದು ನೀತವಲ್ಲೆಂದು ॥
ನೆನೆಯಿಸನಲ್ಲದೆ ನೇಮುಪ್ಪುದಿಳ್ಳೆಂದು । ವಿನಯವೆರಸಿ ಬಿನ್ನವಿಪ್ಪುದು ॥ ೨೭
ಅತಿಭೀತಿಯಿಂದನುಗೆಟ್ಟು ಚಿಂತೆಗೆಯದೆ । ಮತಿವಿರಿ ಮೇಲುವರಿಯದೆ ॥
ಇತರಜನರು ತನ್ನ ನೇಹಿಸಿ ನಗದಂತೆ । ಪತಿಸೇವೆಗೈದು ಬಾಳುವುದು ॥ ೨೮
ಪಿರಿಯರ ಮಂಗಳ ಬಿಜ್ಜಗಲಿವೆನೆಂದು । ವರರೂಪವತಿ ತಾನೆಂದು ॥
ಧನಮುಪಾವನೆಯೆಂದು ಬರಿದೆ ಬರೆಯುವನು । ಸರಿಸುವುದಾತ್ಮವಲ್ಲಭನ ॥
ವ್ಯತಪೆಸಗುವೆನೆಂದು ಸಂಭ್ರಮ ಬಂಧಿತನೆಂದು । ಧತಿಕಳವಿಂದವನಗ್ರಡೆ ॥

ಪತಿಯು ಪಡಿಗಪಾತ್ರೆಗೆಗಳ ಹಿಡಿದು । ಸ್ತುತಿವಡೆವುದು ನಾರಿಯರು ॥೩೫
ಗರತಿಗೆ ಲಕ್ಷಣವೆಂದು ಗೆಲ್ಲಗೊಂಡುಂಬುದೆ । ಪರಿಚಾರವೆಂದು ಪಳಿಯದೆ ॥
ಹಿರಿದು ಕಿರಿದುಗಳ ಭೇದವನರಿಸದೆ । ನಿರವಿಸಿದುದನೆಸಗುವುದು ॥೩೬
ಮನೆಯೊಳು ಪೊಕ್ಕು ಮುದ್ದಿಸಿದೊಡೆಯಪತಿಗಳಿಂ । ಸೊಡರಿಗೆ ಶುಷ್ಕ-
ರಸಿದೊಡೇನು ॥

ಒಡೆಯನಿಷ್ಟಪ್ರತಿಪೂರ್ಣದೊಡವೆಗುಚಿತವೆಂದು ನಡೆವುದು ನಲ್ಮೆಯಿಂದೊಲಿದು
ತನ್ನ ತವರುಮನೆಗೆಲ್ಲ ತಾನೊಡತಿಯೆಂ- ಬುನ್ನತಿವಡೆವುದರಿಂದೆ ॥
ತನ್ನನಿಯಸನೊಳಗಿದವಳಪ್ಪುದು ಸರಿ । ಪಸ್ತುತೆಯೆಂದು ಬಗೆವುದು ॥
ಆರೆಯು ತಂದೆತಾಯರಾದೊಡವೇನುಂಟು । ಚಾರಿಗನಾದೊಡವೇನು ॥
ಅರಾದೊಡವಪಾತ್ರಪತಿಗಾಗದವರೆಸು । ದೂರವನಿರಿಸಿ ತೊಲಗಿಪುದು ॥೩೭
ಛಲಬಿಡಿದೊಂದನೆಳೆಸಿ ಚಾರುವರಿಯದೆ । ಕಲಬಿಡಿದೊಂದರೊಳಿರದೆ ॥
ನೆಲೆಸಿದ ತೀರ ತಪ್ಪದ ಪ್ರೀತಿ ತಗದಿದೆ । ಗಲಗಾಳದನುಸರಿಸುವುದು ॥
ಕೊಣಬಾದೊಡನೇನು ಕೊರ್ತ್ರಿಯಾದೊಡವೇನು । ಹಿನದವನಾದೊಡ-
ನೇನು ಜೇರೆ॥

ಇನ್ನಿತು ನೇರಾಂತವೊಳಗಿಪಂಥನು ತನ್ನ ಮನದೊಳ್ ಮರೆಸಾಳುವುದು
ಸೆಜ್ಜವನೆಯು ಸೇಸೆಯೊಂದನುಳಿದುಮಿ । ಕನ್ನಡ್ಡಗಗ್ಗನವೇಳೆಯೊಳು ।
ಸಜ್ಜಾತಿಸತಿಯುಂಬಿನಿಯರ ಸನ್ನಿಧಿಯೊಳು । ಲಜ್ಜೆವೆರಸಿ ರಂಜಿಪುದು ॥೩೮
ಪರದೇವತೆಯೆಂದು ಭಕ್ತಿಗೆಯ್ವುದು ಬಲು । ದೊರೆಯೆಂದುವಚರಿಸುವುದು
ಗುರುವೆಂದು ವಿನಯಗೊಡಪ್ಪುಗವಿನಯನೊಳು । ನೆರವೆಂದು ನೆರೆನಂಬುವುದು
ಮುಳಿದಲ್ಲಿ ಮುಳಿದೆಳಸಿದುದನೆಳಸಿಯುಲ್ಲ । ಗಳೆದುವೆಲ್ಲವನಲ್ಲಗಳೆದು ॥
ಬಳಿವಿಡಿದಿನಿಯನ ಪಾದಾರವಿಂದದ । ನೆಳಲಂತೆ ನೇಸಂದೊಳಿಹುದು ॥೪೦
ಕೇಳಿಗೊಳುವುದು ಸೇವೆಗೈವುದ ನಲ್ಲನ । ಬಳಸಲುವುದು ಭಜಿಸುವುದು ॥
ಒಳಗುನೇಳುವುದೊಡನಾಡುವುದೊಲಿದೊಲ್ಮೆ । ಗೆಳನುವುದೇರಿಸುವುದು ॥
ಗಣಿಸುವುದನ್ನೆರಿವೆಯು ಕೌಶಲಗಳ । ಗಣಿಸುವುದವರ ಗುಣಗಳ ।

ಎಣಿಸುವುದವನೊಲಿದೆಸಗುವ ನಲ್ಮೆಯ । ತಣಿಸುವುದಿಂತು ಚಿತ್ತವನು ॥
ಕೇಳುವುದವನ ಕೀರ್ತಿಯನಾಲಿಪರಿಗೆ । ಹೇಳುವುದವನ ಪೆರ್ಮೆಯನು ॥
ತೋಳ್ಗೆಗೊಳುವುದವನೊಳು ಮೋರೆವೋರೆ । ಬಾಳುವುದಿಂತು ಭಾವೆಯರು
ಈ ತೆರದೊಳು ನಡೆದಿನಿಯನ ಮನಕೆ ಸಂ ಪ್ರೀತಿತೋರಿಸುವ ಹೆಣ್ಣಿರಿಗೆ ।
ಸಾತಿಶಯ ಸೌಖ್ಯದ ಬಗೆ ಬಣ್ಣಿಸಲರಿದು ವಿ । ಖ್ಯಾತಿ ಬಳೆದು ಬಿತ್ತರಿಪ್ಪುದು ॥೪೫
ತಳುವದಡವಿಯೊಳು ತನ್ನ ತಪ್ಪಿಸಿಹೋದ । ನಳನೊಳು ನಲ್ಮೆಯುಳ್ಳೆಸಗಿ
ಇಳೆಯ ಪೆಣ್ಣಿರೊಳಿಣೆಯಿಲ್ಲದೆ ಕೀರ್ತಿಯ । ತಳೆದೆಸೆದಳು ದಮಯಂತಿ ॥೪೬
ಕಾನನದೊಳು ಕಡುಕಷ್ಟವಡೆದು ನೊಂದು । ಬೇನೆಗಳಿಗೆ ಬೇಸರದೆ ॥
ಸಾನುರಾಗದೊಳನುಸರಿಸಿ ತನ್ನಿನಿಯನ । ಜಾನಕಿ ಜನದ ಪರೆದಳು ।೪೭
ದುಷ್ಟತತೋಳಿಯೊಳಕ್ಷತಹಾಸದೊಳಂದು । ಘಾತಂಗುಂದದೆ ಪಾಂಚಾಲಿ ॥
ಓತು ಪಾಂಡವರನೊಲಿಸಿ ಹದಿಬದೆಯರ । ಖ್ಯಾತಿವಡೆಯನಿಸಿದಳು ॥೪೮
ಇಂತು ವಸಿಷ್ಠನೊಳ್ದರುಂಧತಿ । ಯಿಂತತ್ರಿಯೊಳನಸೂಯೆ ॥
ಅಂತಗಸ್ತ್ಯನೊಳು ಲೋಪಾಮುದ್ರೆ ಪೆಸರ್ವೇ । ಸಂತತರೆಲ್ಲ ಸಾಧ್ವಿಯರು
ಇಂತು ನಡೆದು ಪತಿಗಂತರಂಗದೊಳಪ್ಪು । ಕಾಂತೆಯರಿಗೆ ಕೆಯ್ಗೊಡಲೆ ॥
ಸಂತಾನಸೌಭಾಗ್ಯಸಂಪತ್ತುಗಳನು ಶ್ರೀ । ಕಾಂತನು ಕೈಸೇರಿಸುವನು ।

ಚೆನ್ನಿಗಚಿಕದೇವರಾಯನ ಸಂಚಿಯು ।
ಹೊನ್ನಮ್ಮನುಸಿರ್ದ ಕಬ್ಬದೊಳು ॥
ಮನ್ನಣೆವಡೆದೆಸೆದುದು ಮೂರನೆಯ ಸಂಧಿ ।
ಸನ್ನುತಗುಣಸಂಬಂಧಿ ॥೫೦

---

## ನಾಲ್ಕನೆಯ ಸಂಧಿ

ನಂದನ ಪೋಷಕ ಸದನ ಸನಕ ಸ । ನಂದನವಂದಿತಚರಣ ॥
**ಮಂದರಧರ ಮಾಧವ ಗೋವಿಂದ ಮು । ಕುಂದ ಭೀವನೆ ನಲವನ್ನು**

ಎಂದೆಂದು ನಿನ್ನಯ ನೋಟದ ಹೊರೆಯಿಲ್ಲದ । ಚಂದದಿಂ ಪಿರ್ದೆಯೊಳು ನಿಂದ
ಇಂದು ಸೋದರಿಗಿಂದೀವರನಾಂದಿ ಕಿ : ಗಿಂದಿರೆಗಿಂದು ವಂದಿಪೆನು ॥೨

ಅತ್ತೆ ಮಾವನು ಮೊದಲಾದ ಪೂಜ್ಯರೊಳನು ವೃತ್ತಿಗೆ ಯಾತ್ತತ್ತಲ್ಲಿಷೆ ।
ಚಿತ್ತವರಿತು ಸೇವೆಯಗೆಯ್ವ ಸತಿಯರ ವೃತ್ತವ ಚಿತ್ತೈಸುವೆನು ॥೩

ತನ್ನ ಪೆತ್ತವರು ಹಿಂಗಿಲು ತನ್ನವರೊಳು ತನ್ನ ಪೆತ್ತವಂಗೆ ಹಿಂಗಿಲು ।
ತನ್ನಿನಿಯನ ಪೆತ್ತವರೆಂದವರನು । ಮನ್ನಿಸುವುದು ಮರುಕದೊಳು ।೪

ಗಂಡನ ಬಳ್ಳಿಯೊಳತ್ತೆ ಮಾವಂದಿರ । ಗಂಡನವರ ಬಳ್ಳಿಯೊಳು ।
ಅಂದಲೆಯುದೆಯನಾಚದನನುಸರಿಪುವ । ಪೆಂಡಿರ ಜಸ ಪೆರ್ಚುವುದು ॥೫

ಅತ್ತೆ ಮಾವಂದಿರೊಳದಕವೆನಿಸಿ ಸತಿ । ಚಿತ್ತದಿರವ ಸರಿಗೊಂಡು ।
ಪೆತ್ತತಾಯನು ಸೇವಿಸುವುದಿಳೆಯೊಳ ಗುತ್ತಮನಾರಿಯರೊಳದು ॥

ಎಂತು ಕಾಪಿಟ್ಟೊಡವೇನು ಬೆಸಸಿದೊಡ । ಸಂತತ ರಂಗದೊಳಸುಗೆಡದೆ ॥
ಚಿಂತಿಸಿಯುಳಿಲದೆ ಸಿರಿಮುಡಿಗೊಳ್ವತಿ । ಸಂತೋಷದೊಳು ಸನ್ನುತಿಪುದು
ಪೊತ್ತು ಪೊತ್ತಿಗೆ ಪೋಗಿ ಪೊಡಮಟ್ಟು ನಸುನಗೆ । ಗುತ್ತಮನಾಣತ್ತ
ನಲಿವಿನೊಳು ॥

ಚಿತ್ತನೊಳುವಚಿಸುತ್ತ ದರವರೊಳಿ : ದಿತ್ತ ದರಿಂದೆ ತಣಿವುದು ॥೭
ಉತ್ತರಕುತ್ತರವಿತ್ತು ಬರಾಜದೆ । ಯೊತ್ತಿ ಸುಡಿಯ ಮೊತ್ತರಿಸದೆ ।
ಸುತ್ತವರ ತಾತ್ಪರತಿಯ ಸುಸ್ತಕದೊಳು । ಪೊತ್ತು ಪೂಜಿಸುತೆಸಗುವುದು
ಅತ್ತತ್ತ ನೋಡದೆಯವಮತಿಗೆಯ್ಯದೆ ಸುತ್ತಯಾಗದೆ ಸುರತಿಪದೆ :
ಅತ್ತೆಮಾವಂದಿರಾಣತಿಯನಾಲಿಪುದೇಕ । ಚಿತ್ತದೊಳೀಕ್ಷಿಸುತ್ತಿಯರು ॥
ಕೂಗಿ ನುಡಿಯದೆ ಕೊಟ್ಟುದೆ ಕೋಪವೆಸಗದೆ । ಮಾಗದವತದೆ ಮೋಡಿ
ಗೊಳದೆ ॥

ಲೋಗರು ಚಿತ್ತಮೆನ್ನಲೊಯ್ಯನೊಯ್ಯನೆಯನು । ಬಾಗಿ ನುಡಿಪುದವರೊಡನೆ
ಮುದುವರೆಯರಿಂದು ಮುಂದುಗೆಟ್ಟುದು । ಚದುರರಲ್ಲೆಂಬ ಜರೆಯದೆ
ಇದು ಹಿತವೆಂದವರಿತ್ತುಪದೇಶವ । ನದೆಗೊಳಿಸುವುದೆಸಗುವುದು ॥೧೦

ಪಾಡುವರಿಸರೆಂದು ಪರಿಹರಿಸದೆ ಜಾಣ್ಮೆ । ನಾಡದೆ ಮನವಾಕ್ಕಾಯವನು ॥
ನಾಡುವುದವರ ಸಮ್ಮತದಿಂದೆ ಸತಿಯರೊ । ಳಾಡು ಜೋಡಿಲ್ಲೆನಿಸುವುದು ॥
ಮಾನಗೊಳದೆ ನಿಲ್ಲಿಗೆಯಿಂಜಲಿಂದನು । ಮಾನಗೆಯ್ಯದೆ ಮನವೊಲಿದು ॥
ಬೇನೆ ಬಿಪ್ಪರೆ ನೇಸದೆ ಬೇಸರದೆ ಸ । ನ್ಮಾನದೊಳುಪಚರಿಸುವುದು ॥೧೪
ಹೆಮ್ಮೆಗೊಳ್ಳದೆ ಹಳವಳಿಯದೆ ಮಾವನ । ಸಮ್ಮುಖದೊಳು ನಾದಿಸದೆ ॥
ನೆಮ್ಮನಾತಾಡದೆ ಪಕ್ಕಳಿಸದೆ ಚಿತ್ತ । ಸಮ್ಮತಿಯರಿತೆಸಗುವದು ॥೧೫
ಆವ ವೇಳೆಯೊಳಾವುದನುಗೊಳಲೆಳಸಿದ । ರಾವೇಳೆಯೊಳವನೆಲ್ಲ ॥
ಸಾವಧಾನದೊಳು ಸಂಗಳಿಗೊಳಿಸುವುದಿಷ್ಟ । ದೇವತೆಯೆಂದೆಣಿಸುವುದು ॥
ಒತ್ತಿನೊಳಿರ್ದ್ದುಳವಾತಡಿಗಳನೊಯ್ಯ । ನೊತ್ತುವುದೊಂದುವೆರೆವುದು ॥
ಸುತ್ತಿಗಲಸಿದ ನೊಲ್ಲಿಸದೆಸಗುವುದಿಂ । ತತ್ತ್ಯಯನಸುವಳಿಸುವುದು ॥
ಬೀಸುವುದೊಮ್ಮೆ ಪಿಡಿದು ಬಿಜ್ಜಣಿಗೆಯ । ಹಾಸುವುದೊಮ್ಮೆ ಹಾಸಿಗೆಯ ॥
ಸೂಸುವುದೊಮ್ಮೆ ಪನ್ನೀರ ಸುಗಂಧವ । ಪೂಸುವುದೊಮ್ಮೆ ಪೂಸುವುದು ॥
ತಾನೆ ನೀರೆರೆದು ಮೀಯಿಸುವುದು ಮತ್ತೊಮ್ಮೆ । ತಾನೆ ತೊಡಿಗೆ ತೊಡಿಸುವುದು ।
ಏನೆಸಗುವೆನೆಂದಿದಿರೊಳಿರ್ಪ್ಪಳವ । ಸಾನಂದದೊಳು ಸವುನಿಪುದು ॥೧೭
ಭೂಷಂಗೆ ತೊಡಿಗೆಯಲಂಪಿನೀಕದೊಳತಿಶಯ । ವಡುವೆನೆಂದೊಡಲ ಮರೆಯದೆ ॥
ಪಡಿಯದೆನೆಂದು ಬಗೆಯದನವರಿಗೆ ತಾನು । ಕಡಮೆಯೆನಿಸಿ ಕಾಣಿಸುವುದು ॥
ಕುತ್ತವೆನಿಸಿ ಕೋಪಗೊಳದೆ ಕೊಪ್ಪನರಿವು । ತತ್ತಗರೆಂದಿರ್ದಗೊಳಿಸಿ ॥
ಅತ್ತಿಗೆನಾದಿನಿಯರೊಳಂತರಂಗದ ಪತ್ತುಗೊಳಿಸಿ ಬಾಳುವುದು ॥೨೧
ಅಂದಂದಿಗಿನಿಯನ ಮೆಯ್ಯಾರೈಕೆಯ । ನೆಂದೆಂದಿಗು ಬೇಸರದೆ ॥
ಒಂದು ನಾವೆಯೊಳೇರಿದವರಂತೆ ಸವತಿಯು । ರೊಂದೆನಿಸಿಪ್ಪುದೊಪ್ಪದೊಳು ॥
ಪೋರದೆ ಪುರುಡಿಸದೊರ್ವ್ವರೊರ್ವ್ವರೊಳನು । ಸಾರಮನಿಸಿ ಸಮ್ಮತದೊಳು ॥
ಓರಗೆಗೆಳದಿಯರೊಂದುವೆರಸುವದು । ಕ್ಕೋರಗಿತಿಯರ್ಗೊಂದಿಹುದು ॥೨೨

ತಂದೆತಾಯುಮಂ ಬಿಟ್ಟು ತನ್ನ ಸ್ತ್ರೀಗೆಡೆಯಾಗಿ । ಬಂದ ಸೊಸೆಯರ ಬಾಧಿಸದೆ
ಅಂದಂದಿಗುಡಿಗೆತೊಡಿಗೆಯನೂಟವಿಂತಹಗ । ಳಿಂದ ಸಂತಸಗೊಳಿಸುವುದು ॥
ಬಸವಳಿಸದೆ ಪಳಿಯದೆ ಭಂಗಪಡಿಸದೆ । ಹಸಗೆಡಿಸದೆ ಹದುಗಿಸದೆ ॥
ಬಸಿರೊಳು ಬಂದ ಪೆಣ್ಮಕ್ಕಳ ಮರುಕದ । ಸೊಸೆಯರಿಬ್ಬರೊಳೆಸಗುವುದು ॥
ಬಸಿರ ಸಿಟ್ಟಿಸಿಯುಂಬಡಿಸುವುದೊಳಿತುಂಡಿ । ಯೆಸಕದನಿತಾ ಬಿಸಿಸುವುದು ॥
ಬಸಿದು ಸಿಂಗರಿಸುವುದೊಳಿತು ನೋಡುವುದಿಂತು । ಸೊಸೆಯರ ಸೊಗ
ಬಡಿಸುವುದು । ೨೬

ಒಲಿದು ಬಸಿರಿಯಾದಾವುದ ಬಯಸುವ । ಳಲಸದೆಯದನಿತ್ತವಳ ॥
ಫಲವಗೆಯೊಳು ಪವಡಿಸುವವಳಿಚ್ಛೆಯ । ನಲಿಸಿ ಸಂತಸಗೊಳಿಸುವುದು ॥ ೨೭
ಅಕ್ಕತಂಗಿಯರಣ್ಣತಮ್ಮಂದಿರು ತನ್ನ । ಮಕ್ಕಳು ನೆಂಟರಿಷ್ಟರೊಳು ॥
ಕಕ್ಕಸಗೊಂಡು ಕಸಲಿ ಕಾದದೆ ಮಿಗೆ । ಯಕ್ಕರಸಂಗೊಳಿಸುವುದು ॥ ೨೮
ತಾಯ ತಂದೆಯ ದೆಸೆ ಗಂಡನ ದೆಸೆಯಿಂ । ದಾಯೆಂದೊಲಿಯಂತೊಳಿಸುವ ॥
ತಾಯಬಾಂಧವರ ಕಣ್ಣೊಳಗೆಂದು ಕಾಣ್ಬುದ ಸೊಸೆಗೊಳ್ಳದೆ ಸುಖಿಸುವುದು
ಬುದ್ಧಿಗಲಿಯಲರಿಯದ ಹಸುಮಕ್ಕಳ । ನುಡ್ಡಿಸಿ ಮುದವೀವುದು ॥
ಬುದ್ಧಿಗಲಿವ ಕಾಲದೊಳು ಪೊಯ್ದು ಬೈದು ನಲ್ಬುದ್ಧಿಗಳನೆ ಬೋಧಿಸುವುದು
ಒದಗಲಿವ ಮಕ್ಕಳಿಗೂಟವಿಂತಹವ । ನಾದರದಿಂದನುಗೊಳಿಸಿ ॥
ಓದಿಸುವರು ಕೊಂಡು ಬೈದೊಡಮವರನು । ಮೂದಲಿಸದೆ ಸಮ್ಮತಿಪುದು
ಬಸಿರೊಳು ಬಂದ ಕುವರನಾದೊಡಮೇನು । ಪೊಸವರೆಯದ ಪುರುಷನನು
ಒಸೆದು ಸಿಟ್ಟಿಸಿಯೊಡಲೋಜೆಯೊಳ್ಪುಗಳ ಬ । ಳ್ಸಲಾಗದು ಭಾವೆಯರು
ಗುರುಹಿರಿಯರು ತಂದೆತೋದರನಾಗನು । ಪೊರೆವರಸಾದೊಡಮೇನು ॥
ಬರಿಸ ಪನ್ನೆರಡಾದ ಬಳಿಕಾರೊಳನೊಂದು । ನೆರೆಸದೆ ನೆರದೆಗೆಡಿಹುದು ॥
ಬಸಿದು ಬಳಲಿ ಸರಿದೇಸಿ ಬಾಯಿಬಿಡೆ ತಂ । ಡಸಮಯವೆಂದಪ್ಪುಪಸದೆ ॥
ಬಸುವಾತನೊಳು ಬೇಯಿಸದಿದ್ದ ಪಾತ್ರದ । ನೊಸೆದೀವುದೊಳುಪಾತಿನೊಳು
ನೆರೆಮನೆ ಪಮಪ್ಪನೆ ಗರತಿಯರೊಳಿನೊಮ್ಮೆ । ಬರೆ ತನ್ನ ಮನೆಯ ಬಾಗಿಲಿಗೆ

ಕರೆಮಾಡರಿಸಿ ಕೈಲಾಸ ತೆರದಿ ಸ . ತ್ಕರಿಸಿ ಭರದಿ ಕಳುಹುವುದು ॥೩೫
ತನ್ನ ಮನೆಯ ಮದುವೆಯೊಳು ಮಂಗಳದೊಳು । ತನ್ನ ಬಾಂಧವರೆಲ್ಲರನು
ಅನ್ನಪಾನಂಗಳಿಂದಾದರಿಪುದು ಮತ್ತೆ । ಪೊನ್ನುಡಿಯಿತ್ತು ಪೂಜಿಪುದು
ಮೊನೆಗಾತಿ ಮುಂಗುಡಿ ಮುಂಸುಣ್ಣಿಯಾಗಲಿ ನೆರೆ ಮನೆಗರತಿಯು ನೀಕರಿಸದೆ
ಮನೆಗೆ ಬಂದೆಡೆಯೊಳು ಮನ್ನಿಸಿ ಮನವೊಲಿ । ದನುವರಿತಾದರಿಸುವುದು ॥
ಅರಿಯದೊಳಗವೆಣ್ಗಳು ತಪ್ಪುಗೆಯ್ದಡೆ । ಗೆಳೆಗಿಯೊಡನೆ ಮನಗರಗಿ ॥
ಮರೆತದನೆಲ್ಲವ ಮತ್ತೆ ಕೊಳಿಸಗುವ । ಮಂದುಕವೆರಸಿ ಮನ್ನಿಪುದು ॥೩೬
ಮೊಳದವರೊಳು ಮೊಗಗಂದಿ ಮುಗ್ಗಿದಯಾಡಿ । ಮಳೆವನದೊಳು ಪೋಕು ಗೊಳದೆ ॥
ಮುಳುಗಿಯೆತ್ತಣವರೊಳು ಮೂದಲೆಯನಗದೆ ಪೊಳುವೆಂಡಿರೊಳ್ಪು ವಡೆವುದು ॥೩೭
ಕಂತಕಂತವದೊಳು ಕದುವ್ವೈಸ್ಯವಡೆಯುದು । ಪ್ರದಡೆಯನಿಸಿ ತಾಸಿರದೆ ॥
ಗಂಡನ ಘನತೆಯಂತಂತು ಪತ್ರಿಯು ಕೈ । ಕೊಂಡೆಸೆವುದು ಕೋವಿದೆಯರು
ಕೇಣಗೊಂಡವರೆಂತು ಕೆಣಕಿ ನೋಡಲಿ ಮತ್ತೆ । ಮಾಣಲಿ ಮುನ್ನತೆ ಯೊಳ್ವರು ॥
ಊಣಯಪಿಲ್ಲದಂತೊಳುನಡೆಚೆಯೊಳಿರ್ದಾ । ಕಾಣಿಸುವುದು ಘನತೆಯನು ॥
ಬುಸವಿಯರೊಳು ಪಾತಕಿನಿಯರೊಳು ಮ . ತ್ತಸತಿಯರೊಳು ಕಳೆಗೊಳದೆ
ಪೊಸತಿಲ್ಲ ಪೊರಗಡಿಯದೊಳು ಪೆಂಡಿರ । ಜನವಳ್ಳು ಜಗದ ಮಬುಗಪುದು ॥
ಮಾಲೆಗಾತಿಯು ಮಡಿವಳತಿಯು ಕಣತಿಯು । ಕೂಲಗಿತಿಯು ಸೂಳೆಯನು ॥
ಆಲೋಚನೆಯಂತರಂಗಕೆ ಬಿಡಸದೆ । ಮೇಲರಿತಿಹುದು ಮೇರೆಯೊಳು ।
ಬಸಿರಿಯ ಬಾಣಂತಿಯು ಬೇನೆವಡೆದರ । ಹಸುಮಕ್ಕಳ ಹಯಸುಗಳ ॥
ಬಸವಳಸದೆ ಬಳಲಿಸದೆ ಬಯ್ಯದೆ ಬಗೆ । ಯೊಸೆದುಚಿತದೊಳೋಪುವುದು ॥
ನೀತಿವರ್ತನಗಳ ನಿಯಮಿಸ ಸಿರಿಯರ । ಮಾತುಗಳನು ಮನಗೊಳಿಸಿ ॥
ಈ ತೆರದೊಳು ನಡೆದವನಿಯೊಳಧಿಕ ನಿ । ಖ್ಯಾತವನೆಪ್ಪನು ಕಾಂತೆಯರು ॥

ತಡೆಯುದಿಳನೆಯೊಳು ತಂದೆತಾಯಿಗಳಿಗೆ । ನಡುವರೆಯಾದೊಳು ಸ್ವಸ್ತಿಗೆ॥
ಕಡುವುದುಪಾದಕಾಲದೊಳು ತನ್ನುಜುಗರ । ಗಡಕನೊಪ್ಪುದಬಲಿಯರು ॥
ಈ ರೀತಿಯೊಳಿರ್ಪುದೇಕಪತ್ನಿಯರಿಗೆ । ನಾರಾಯಣಸಾಕ್ಷ್ಯವೆಂದು ।
ಆತ್ಮಿಯು ತಿಳಿದಾಚರಿಸುವೊಡನೆ ಶ್ರೀ । ಸೇರುವುದಿಷ್ಟಸಿದ್ಧಿಗಳು ॥೪೯
ಅರಿತಾಚರಿಸಿಯಖಿಲಶಾಸ್ತ್ರತತ್ವವ । ನರಿಯದವರಿಗರಿಯಿಸುತ ।
ಮೆರೆವ ಸದ್ಗುರುಗಳ ಮೆಲ್ಲಡಿದಾವರೆ । ಗೆರಗಿ ಭಕ್ತಿಯೊಳೆಸೆಗುವುದು ॥
ಕೀಳುದೇವತೆಗೆರಗದೆ ಕಿರಿಯರ ಮಾತ । ಕೇಳದೆ ಕೀಳಿಗೀಳಿಯದೆ ॥
ಮೂಲೋಕವ ಪೊಡೆಯನೊಳಿಟ್ಟೀರ್ಪುದ । ನಾಳುತನವಸಾಧರಿಪುದು ॥

ಚೆನ್ನಿಗಚೆಲುವರಾಯನ ಸಂಚಿಯ ।
ಹೊನ್ನನಪ್ಪನುಸಿರ್ದ ಕಬ್ಬದೊಳು ॥
ಉನ್ನತಿವಡೆದೊಗೆದುದು ನಾಲ್ಕನೆಯ ಸಂಧಿ ।
ಸನ್ನುತಗೇಹಿಸಂಬಂಧಿ ॥೫೦

---

## ಐದನೆಯ ಸಂಧಿ

ಅಮರ್ದರ್ಗಗಡೆವ ಸಮಯದೊಳಲ್ಲಿ ನೆರೆದಿ । ರ್ದಮರರಂತಿಷ್ಟರವರೊಡನೆ ।
ಕಮಲಿಗದೆಯಸಿಂಬುಗೊಳಿಸಿದ ಪುರುಷೋ । ತ್ತಮನಡಿಗಾನೆರಗುವೆನು ॥
ಕಡೆಪುಡಸ್ರಾದು ಚಾಜಿಹ ಬಿಡುಗಣ್ಣರ । ಗಡಣಂಗಳ ಕಡೆಗಣಿಸಿ ॥
ಒಡನೆ ನಾರಾಯಣನಂಘ್ರಿ ಸೇರಿದ ಸಿರಿ । ಮಡದಿಯಡಿಗೆ ವಂದಿಸುವೆನು ॥೧
ತಂದೆತಾಯಿಗಳೊಡಪುಟ್ಟಿದರಕ್ಕತಮ್ಮ । ವಂದಿರು ಸಕಲಬಾಂಧವರು ॥
ಕುಂದದೆ ವಲ್ಲಿಂಬಿಡಿದ ಕೊತ್ತಸಂಚರಿ । ಸಂದವಸನವಾಗಿಸುವೆನು ॥೨
ಹೆಣ್ಣುಹೆತ್ತವರ ಬಳಗ ಬಳಿವುದು ಬೇಗ । ಹೆಣ್ಣುಹೆತ್ತವರು ಹೇರ್ಗಾವರು ॥
ಹೆಣ್ಣುಹೆತ್ತುದರಿಂದೆ ಹೆಸರೆನಿಸಿತು ಸಿರಿಗೆ । ಬಣ್ಣವೇರಿತು ನಾಲ್ಕಡೆಲು ॥೩

ಪೆಣ್ಣಿಂದೆ ಪೆಸರ್ಗೊಂಡನು ಹಿಮವಂತನು । ಪೆಣ್ಣಿಂದೆ ಭೃಗು ಪೆರ್ಚಿದನು
ಪೆಣ್ಣಿಂದೆ ಜನಕರಾಯನು ಜಸವಡೆದನು । ಪೆಣ್ಣಾಸಿಂಧುವಿಸಲೇಕೆ ಪೆರರು ॥
ಸಿರಿರಾಣಿಯು ಸೀತೆಯು ರುಕ್ಮಿಣಿಯು ಶ್ರೀ । ಹರಿಯೊಡನೊಂದೆ ಹಂತಿಯೊಳು
ಇರಿಸಿ ಪೂಜೆಯನೊಡರಿಸುವರು ಹಿರಿಯರು । ಪರಿಕಿಸೊಡಿವರು ಪೆಣ್ಣ್ಗಳೆ॥
ಪೆಣ್ಣಲ್ಲವೆ ತನ್ನನೆಲ್ಲ ಪಡೆದ ತಾಯಿ । ಪೆಣ್ಣಲ್ಲವೆ ಪೊರೆದವಳು ।
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು । ಕಣ್ಣುಕಾಣದ ಗಾವಿಲರು ? ॥೭
ಕುವರನಾದೊಡೆ ಬಂದ ಗುಣವೇನದರಿಂದೆ । ಕುವರಿಯಾದೊಡೆ ಕುಂದೇನು
ಇವರಿರ್ವರೊಳೇಗೆವಡೆದುದಂದ । ಸವನಿಪುದಿಹಪರಸೌಖ್ಯ ॥೮
ಕುಲಪುತ್ರನೋದಿ ತಿಳಿದು ನಡೆದಲ್ಲದೆ । ಕುಲವನುದ್ಧರಿಸಲರಿಯನು
ಕುಲಪುತ್ರಿಯೊಳುಗುಣವರಸಿಗಿತ್ತ ಮಾತ್ರಕೆ । ಕುಲಕೋಟಿಯನುದ್ಧರಿಪಳು॥
ಬಸಿರೊಳೊಗೆದು ಬಳೆದೇತರಿಂದೊಳ್ಳ । ಸಿಸುಗಳೆಡೊರೆದನೇನು ಬಳಿಕ॥
ಒಸೆದಿತ್ತವನೊಡಬಡುವಳು ಕಣ್ಗೆ ಗಂಡು । ಪಸುಗೆಗೊಂಬನು ಬಳ್ಳಿಯೊಳು
ಪುಟ್ಟಿದ ವಂಶದೊಳು ಪೋದ ಪುರುಳುಗೊಂಬ । ದಿಟ್ಟ ಗಂಡುಗಳಂತಿರಲಿ ॥
ಕೊಟ್ಟವರಿಂದೆ ತಣಿವ ಕುವರಿಗೆ ಮನ । ಮುಟ್ಟಿಕೊಡುವುದು ಕೋವಿದರು
ಎನ್ನ ಪಿತ್ರವರನ್ನೀವರೆಮ್ಮೊಡವೆಗ । ಳೆನ್ನದೆಂದಿರವಿಲ್ಲದಿರ್ಪ ॥
ಕನ್ನೆಯನನ್ಯರಿಗೀವನ್ನೆವರಮುರಿ । ಮನ್ನಿಸುವುದು ಮಮತೆಯೊಳು ॥
ಅಂತು ಸಿಟ್ಟಿಸಿಗಂಡುಮಕ್ಕಳಿಂದತಿಶಯ । ದೆಂತದನೊಳಿಸಿವ ಹೆಣ್ಣಳನು ॥
ಪೊರನೋಟದಿಂದೆ ನೋಡದೆ ಪೇಳೆನಿಸದೆ । ಮರುಕವೆಳಸಿ ಮನ್ನಿಪುದು ।
ನವುಳಗೊಳಿಸಿ ನಲವಿಗೆ ವಸದನಗಳ । ಪುದುಗಿಸಿ ಪೊನ್ನೊಡಿಗೆಗಳ ॥
ಮದುವೆಗೆ ನೆರೆದ ಪೆಣ್ಮಕ್ಕಳಸಿಪ್ಪವ । ರೆದೆಗೊಳುವಂತೆಸಗುವುದು ॥೧೩
ಸುಗುಣನಾದವನು ಸಚ್ಚರಿತ್ರನಾದವನು ಕನ್ನೆ । ಗೊಗೆಸುವ ಸೊಬಗನಾರೆಂದು
ಬಗೆದು ಭಾವಿಸಿ ಪೆಣ್ಣನೀವುದು ವಂಶದೊ । ಳೊಗೆದೊಳುಗುವರಿಗೊಳಿದು
ಅಲಿಗೆಯ್ಯದವನಂತಿಯೆಸಗದ ಸ್ವೈರವ । ಬಲಿಸದ ಬಗೆದೆ ಪಳಿಯದ ॥
ಕೊಳಿಪ್ಪೆಗಳಿಂದೆ ಕೋಟಲೆಗೊಳಿಸದ ಸ । ತ್ಕುಲಕೀವುದು ಕುವರಿಯನು॥

ಹಣಹಾಸೆ ಸಂತೋಷದ ವಸ್ತುಗೆ ಸೇರೆ । ದಿನಕೆಗಳಿಂದದೆಗರಗಿ ।
ಗುಣಶೌರ್ಯಸತ್ಕುಲರೂಪುಗಳಿಂದಿಹ ನಡೆ ಎಣಿಕೆಯುಲಾಗದು ಹೆಣ್ಣು ॥೨೦
ಜಡನಿಗೆ ಜಾತಿಹೀನನಿಗೆ ಚಂಚಲನಿಗೆ । ಕಡುಮೂರ್ಖನಿಗೆ ಗಾವ್ಯನಿಗೆ ।
ಬಡತನದೊಳು ಬಲುಬವಣೆಗೊಂಬವನಿಗೆ । ಕೊಡಲಾಗದು ಕುವರಿಯನು
ಬಾಳಿ ಬದುಕಿ ತಣಿವಿಲ್ಲದ ಕನ್ಯಂತೆ ಬಾಳಲೆಳಸುವ ಬಾಲಕಿಯು ।
ಬೀಳುಗುವರನಿಗೆ ಬೆಲೆಗೆಯ್ದರೆಂಬುದ । ಕೇಳಿ ಕಿವಿಯು ಮುಚ್ಚುವುದು ॥
ತನ್ನ ಮನೆಯೊಳುಂಡು ತವರುಮನೆಯ ಸಂ । ಪನ್ನವೆಕ್ಕೆಂಬ ಹೆಣ್ಣಳಿಗೆ ॥
ಹೊನ್ನ ತೊಡಿಗೆ ಹೊಸದುಗುಲಂಗಳನಿತ್ತು । ಮನ್ನಿಸುವುದು ಮನವರಿತು ॥
ಬಡವರಾವೆಮಗೆಲ್ಲಿ ಬಣ್ಣದೊಡವೆಯೆಂದು । ಕಡುದೈನ್ಯವಾಡಿ ಕಳೆಯದೆ ॥
ಬೇಡದೆ ತೊಡದೆ ತಾವ್ಬೇಡು ತನುಜೆಯು । ಗಾಡುತೊಡುವುದವನೆಗೊ
ಡುವುದು ।೨೧

ತನ್ನ ತವರುಮನೆಯುವರಿತ್ತ ಹಿತ್ತಳೆ । ಹೊನ್ನೆಂದು ಬಗೆದು ಹೆಗಳುವ ॥
ಕನ್ನೆಯರೊಳು ಕಡುಗೂರ್ತೆಯನೊಡರಿಸಿ । ಹೊನ್ನರನ್ನದೊಳುಪ್ರಾಜಾವುದು
ಹುಟ್ಟಿದಂದದೆ ಬಂದು ಹೊಕ್ಕಂದಿಗಾಗಿಯು ನೆಟ್ಟನೆ ನಿಂದಿಸದಂತೆ ॥
ಕಟ್ಟಿದ ಹಲಕೆಲದೊಡವೆಗಳನು ಕೈ । ಬಿಟ್ಟು ಕುಡುವುದು ಬೇಸರದೆ ॥
ಬೇಡಿಬೇಡಿದ ವಸ್ತುವ ಹೆಣ್ಣುಗಳಿಗೆ ನೀಡುವ ನೇಮಗಾರರಿಗೆ ।
ಷೋಡಶದಾನದ ಫಲ ಸುಲಭದೊಳು ಕೈ । ಗೂಡುವುದೆಂಬರುತ್ತಮರು ॥
ಅನ್ನಪಾನದೊಳಾಭರಣವಸನದೊಳು । ಮನ್ನಣೆಯೊಳು ಮನವೊಲಿದು ॥
ಕನ್ನೆರನ್ನೆಯರು ಪರಕೆಗೆಯ್ಯಲಾ ಮನೆ । ಯುನ್ನತಿವಡೆದೊಪ್ಪುವುದು ॥
ಆದರಿಂದೆ ಹೆಣ್ಮಕ್ಕಳನಾದರಿಪುದು । ಮುದವೇರಿಪುದು ಮುದ್ದಿಪುದು ॥
ಮಧುವೆಮಂಗಲದೊಳು ಮನವೊಲಿದವರಿಗೆಂ । ದೊಡವಿಟ್ಟುದುಚಿತದ
ಸ್ತ್ರಹನು ।೨೨

ಸಣ್ಣಬಣ್ಣದ ಸೀರೆಯು ಪೂಸರವನಿಂ । ಬಣ್ಣಫಲವು ಭಕ್ಷ್ಯಗಳ ॥
ಕಣ್ಣುವಿಡಿದುದನು ಕಳುಹಿಸುವುದು ತನ್ನ ಹೆಣ್ಣಿರ್ದ ಮನೆಗೆ ಬೇಸರದೆ ॥

ಅಂದುದಿಗೆ ನೆನೆನೆನೆದು ಸ್ನೇಹದೊಳಿನ್ನು । ಕಂದನೆಂತಿರ್ದಪನೆಂದು ॥
ಬಂದ ಬಂಧುವರ ಬಿಚ್ಚಿಸಿ ಕೇಳುವುದು ಮನ । ದಂದು ಮನಸಿನರಸಪ್ಪುದು
ಬರಿಸುವುದೊಂದೂರೊಳಿರ್ಪಗಳನುಪಚಾರ । ವೆರಸಿ ಕಾರಣಿಕರ್ಮಗಳಿಗೆ ॥
ನೆರೆಯೂರೊಳು ಬಾಳುವ ನಿಜಜನನಿಯ । ಕರೆಯಿಸುವುದು ಕಾಲವರಿತು ॥
ತಂದೆಯ ಮನೆಯಿಂದೆ ತಂದೆಸ್ನೇಹಪ್ತ್ರವ । ನೆಂದೇಳಿಗೆಗೊಳುವಂತೆ ॥
ಬಂದ ಬಂದಾಗ ಬರಿದೆ ಕಳುಹದೆ ಪೆತ್ತ । ಗೊಂದರೆಯೊಡವೆಗುಡುವುದು ॥
ಮುಂದಿನಾಳ್ದನೊಳಿಪ್ಪ ಪ್ರೇಮಗಳ ದೂರ । ತಂದ ತನ್ನಾಗಿಯೊಡನೆ ॥
ಬಂದುವುಂದಣಿಸದೆ ಹೀಯಾಳಿಸಿ ಮಗೆ । ನಿಂದಿಸಿ ನೀಕರಿಸುವುದು ॥೨೧
ಅವಿವೇಕದೊಳು ತನ್ನಾಣ್ಮನ ನುಡಿಗೇಳ । ದವನುತಿಗಳನಾಚರಿಸ ॥
ಕುವರಿಗೆ ಪಲಿಗೆಯ ಕೊಟ್ಟು ಕೊಬ್ಬಿಪ ತನ । ಧವನ್ನೈಸ ಪೆತ್ತಾಗಡವರು ॥
ನುಳಿವ ನೋಡಿಯೊಳಿರ್ದ ನೋನೆರೊಡಕಾಡುವ । ಪಳಿವ ಪಲವು ನಾಡುಗಳಿಗೆ
ಆಳುವ ಮನವನಧಿಕಿಸಿಯೊಂಗಿರಾಗಿ । ಯುಸಿರ್ಮಗಳಿಂತಿ ನಡೆವುದು ॥
ಸತ್ತ ಪೆಣ್ಣುಗಳ ಸೇರಿಸಿ ಮಾರದು । ನ್ಯತ್ರಯಸ್ಪಂತೆ ಮನ್ನಿಸದೆ ॥
ಸುತ್ತುಗೆಳೆಸದ ಕಳಿಸಿ ಗೃಹದೊಡ । ನೊತ್ತು ನುಡಿವುದುಚಿತವನು ॥
ತಂದ ಕೇಳಿಸಿಯು ಕಸರಿ ಕಾಡಿದೊಡದ । ಬಂದ ನೀನಳವೆಂದು ॥
ಬಂದತಿಯೊಂದೂಡೆದೊಡನೂದನುಳಿದು ನು । ತೆಪ್ಪಂದದಿನಿತೆದೊಡ
ಬಡಿಸು ॥

ಇನಿಯನೊಲಿದು ನಿಶ್ಚಯಿಸಿತು ನುಗೆ । ಸನುಮಾನಗೈದು ಸಂತವಿಸಿ ॥
ಎನಗೊಳಗಾದನೆಂದೆಣಿಸಿ ದ್ವೇಷವುಳಿಯದೆ । ಮನುಜಯದಿಂದನುಸರಿಸು ॥
ಸುಲಿಕೆ ಹೊರಗು ಕೊಟ್ಟು ಸೊಕ್ಕೆಂಬುದನದಿ । ತೆರೆಗೆ ನೀನೆಪ್ಪು ಬಯಸದೆ ॥
ಅಲೆಗೆಯ್ವನಲ್ಲನೊಳಡಕನಾಗಿರ್ಪಮ್ಮ । ಕುಲದೇಶಿಗೆಯ ಕೊನರಿಡಿಸು ॥
ನುಳಿಸು ಜೇನರ ನೋಡಿಯುಲಿಸಿಕೆ ನೊಸೆ ಮನ । ದಳಲಂಜಿಕೆ ಮರು
ಕದೊಳು ॥

ತಿಳಿತಿಳಿದಿನಿಯನಿಂಗಿತ ಭೇದಂಗಳ । ನಳುಕದುಳಿದನುಸರಿಸು ॥೨೮

ಕನಸಿನೊಳಾದೊಡಮಿದಿರುವಾತಾಡದೆ । ಕನಲದೆ ಕೆಳೆಹವೆಸಗದೆ ॥
ಮನೆಯೊಳಗಿರುವೆಮ್ಮ ಮಂದಿಗೆ ಬಿಸಿದೆ । ಮನದನ್ನನ ಮನವೊಲಿಸು ॥
ಅತ್ತೆಮಾವಂದಿರಿಂಗಳುಕಿಯುತ್ತಿರುಗೊಡಿ ಚಿತ್ತವಿಂತು ಸೇವೆಯೆಸಗು ॥
ಅತ್ತೆಗೆಮಾದನಿಯಮದನುವರ್ತಿಸು । ಚಿತ್ತವರವ ಪೆರ್ಚಿಗೊಳಿಸು ॥೪೦
ಸವತಿಯೊಳು ಸಂಗಾತಿವೆಂಗಳವೋಲು । ನೆವವಿಲ್ಲದ ಸೇಹವೆಸಗು ॥
ಅವರವರಂತಿರುತು ನುಡಿದ ಮಾತುಗಳಿಗೆ । ಕಿವಿಗಳನಿತ್ತು ಕೇಳದಿರು ॥೪೧
ನಾಗಳೆ ನಿನ್ನಿನಿಯನ ಮನೆಯವರೆಲ್ಲ । ಪಗೆಸಾಧಿಸಿ ಬೈದೊಡದಕೆ ॥
ಬಗೆಯೊಳು ತಾಳುಮೆಯನು ಬಲಿದವರೊಳು । ಮೊಗವಂಟದೆ ನೋಡನ
ವೆಸಗು ॥೪೨

ಪೇರ್ಮೆಸಿರಿಯಿಂದ ಹಿಗ್ಗಿ ಬೀಗಿ ನಿನ್ನ । ಪೋರೆತಾಯಿಯ ತಿರದಿರು ॥
ನೇರ್ಪಿಯೊಳಗನೆಸಗುವ ಸೇವಕರನು । ಸೈರಣೆಗೊಂಡು ಸಂತಯಿಸು ॥೪೩
ಎಂತುನಡೆದೊಡಿನಿಯನಿಗಿಂಬುದೋರುವುದಂತುನಡೆದೊಡೇಳ್ಗೆಯಹುದು
ಎಂತು ನಡೆದೊಡೆಲ್ಲರುಮಿದು ಲೇಸೆಂಬ । ರಂತಿರು ಸಂತೋಷದೊಳು॥೪೪
ಇಂತು ಪೆಣ್ಮಕ್ಕಳಿಗೆದೆಯೊಳು ನೆಲೆಗೊಳ್ವಂತೆ ಬುದ್ಧಿಯನು ಪೇಳ್ವುದು
ಸಿಂತಳ ಸಲ್ಲಂಡಿದ ಪರ್ವಗಳನೋ । ರಂತೆ ಬಗ್ಗಿಸಿ ಪೊಗಳುವುದು ॥
ಅಣ್ಣತಮ್ಮಂದಿರೆನಿಬರೊಡಪುಟ್ಟಿದ । ಪೆಣ್ಣನು ಸೇರುವೆಗೊಳಿಸಿ ॥
ಬಣ್ಣಬಂಗಾರದ ಬಗೆಬಗೆಯುಂದಿತ್ತು । ತಣ್ಣನೆ ತಣಿಸಿ ಬಾಳುವುದು ॥೪೬
ಸಿರಿಕಿರಿಯೆಯ್ದಿಯ್ದ ಪಿರಿಯ ಕಿರಿಯವ್ವೆಯು । ರೆರೆಹೊರೆಯುನಿತನಣೆಸದೆ ॥
ಪರಮವಾತ್ಸಲ್ಯವ ಸವಿಸಿ ಪೆಣ್ಣಳ । ಪೊರೆವುದೌರಸಪುತ್ರಿಯಂತೆ ॥
ಸೋದರಮಾವಂದಿರು ಸೊಸೆಯರಿಗೆ ಪೇ । ಳಾದ ವಸ್ತುವ ಕೈಗೊಡನೆ ॥
ಆದರದಿಂದಾಶೀರ್ವದಿಪುದಲಸದೆ ಸಂ । ಪಾದಿಪುದಿಹಪರಗಳನು । ೪೭
ತಂದೆಗೊಡನೆ ತಾಯೊಡನೆ ತನ್ನೊಡನೆಯು ಮೊಂದು ಬಸಿರೊಳೊಗೆದವರು
ಕುಂದದೆ ಬಾಳುವ ಕುವರಿಗೆ ಕುರುಪುಗೊಂ । ದೊಂದರೆಯೊದವಗೊಡುವುದು
ಕುವರಿಯನಿಂತು ಕೊನೆಯೊಳು ಸಲಹಿ ಮಕ್ಕಳನಿತ್ತೊಳಗುವರೆಗೆ

ಸನೆಯಂದ ಧರ್ಮವ ಸಂಪಾದಿಸಿ ಮಾ ಧನನ ಸುಜನವ ಬಿಡಿಸುವುದು ॥೫೦

ಚೆನ್ನಿಗಚೆಳದೇವರಾಯನ ಸಂಚಿಯ
ಹೊನ್ನ ಮನ್ನಿಸಿದರ್ ಕಟ್ಟುದೊಳು ॥
ಉನ್ನತಿಸಡೆದೊಪ್ಪಿದುದೈದನೆಯ ಸಂಧಿ
ಸನ್ನುತಗುಣಸಂಬಂಧಿ ॥೫೧

---

## ಆರನೆಯ ಸಂಧಿ

ಆವನಿಗೆ ಕೆಯ್ಯುವ ಭಾಗ್ಯವುವು ಕಳೆಗೊಳು । ಭಾವೀಕಿಯುರಿಗಳಿಗೆ ॥
ಸಾವಿಗೆ ಪಂತಕನಟ್ಟು ತೋರಿದನಾ । ದೇವಮಾನು ವಂದಿಪೆನು ॥೧
ಕಥಲಿಕೆಯೊಳು ಮುಳುಗಿದನಾವಳಿಗಾಗಿ । ಕಡಲ ಕಡೆದು ಬಳಲಿದನು ॥
ಕಡೆಯೊಳು ದಾಸಿಗ್ಯದನು ಶೌರಿಯ ಸಾಸಿರ । ಮುಡದಿಯುಡಿಗೆ ವಂದಿಪೆನು ॥
ಎಳಜವ್ವನದೊಳೆ ಚೆಜನ್ನನದೊಳು ಮ । ಕ್ಕಿಳೆವ ಜನ್ಮನದೊಳಿನಿಯಳ ॥
ಒಳಗಂತುಮಚೆಯಸುವ ಸಲ್ಲಲಿಗವ । ಕೊಳಗಮ್ಮ ಬಗೆಯ ಬಣ್ಣಿಪೆನು ॥
ಎರವೆಕ್ಕನಿತಿಲ್ಲದೆ ಒಬ್ಬರೊಬ್ಬರೊಳೊಡ । ವೆರದಿರ್ಪ ಸತಿಪತಿಗಳಿಗೆ ॥
ದೊರಕೊಂಬುದು ಸಂಸಾರಸುಖದ ಸುಗ್ಗಿ । ಸರಿದೊರಾಸಂದ ಪಬ್ಬವುದು
ಪತಿಸತಿಯರ ಸೌಖ್ಯದಿಂದೆ ಸಂಸಾರ । ವತಿಶಯವಡೆದು ತೋರುವುದು ॥
ಇತರೇತರನ್ನೈರದಿಂದಿದ್ದರಿಗೆ ಧು । ಗತಿಯಂತೆ ಕಂಗೊಳಿಸುವುದು ॥೩
ಒಳಿತೋಟಿಯೊಡವಿನ ಗಂಡನೆಂಡಿರ ಮನೆ । ನೆಳಲ ನೀರವು ಸೀತಿಪಿದು ॥
ಬಳಿಕ ಮಾತಿನಸ್ಮ ಬಿಸಿಯೊಳು ಬಂದ ಮ । ಕ್ಕಳುಮಲ್ಲಿಗೆಯು ಸಡೆವರು
ತೋಟಿಗೊಳುವ ದುಷ್ಟದಂಪತಿಗಳು ಬಾ । ಕಾಟಗಳಿಂದನುಗೆಟ್ಟು ॥
ಬೂಟಸಿದ್ದಿಗೆ ಒಂದರೊಳು ಸುಖವಿಲ್ಲದೆ । ಕೋಟಲೆಗೊಂಡು ಕುಗ್ಗುವರು
ದಂಪತಿಗಳ ಹಗೆತನದಿಂದಿದ್ದರ । ಸೊಂಪಿನ ಜೀರ್ಣ ಹರಿವುದು ॥

ನೊಂಪುಗೆಡುವುದು ಸೊಬಗು ಸಂಸಾರದ । ಚಂಪು ಸತತ ಬಾರುವುದು ॥
ಕಡುನಯಕಾಂತರನೆಡೆಯೊಳು ಕಡೆಗಣಿಸುವ । ಬಿಡುನುಡಿಗಳ ಬಿತ್ತರಿಸುವ ॥
ಬಿಡದೆ ಕಾಡುವ ಗಂಡನೆಂದಿರನೇತಕೆ । ಪಡೆದನೆಂಬ ಪದ್ಮಭವನು ॥
ಹಿರ್ದ್ವೇಷದೊಳ್ಳರಸೊಡಿಬಕದೊಡಬಿಸದ । ಗರ್ವಿತ ದಂಪತಿಗಳನು ॥
ಇರ್ಪದನರಿ ನುಂಗದೆ ಪೋಗುವದರಿಂದೆ । ಸರ್ಪಂ ಸಹಿಯೊನಿಸುವುದು ॥
ತಿಳಿದವರಿಂದಿಪ್ಪುವುದು ದಿಟ್ಟನೆಂದಿರ । ಬಳಸಂದೊಡಬಡಿಸುವುದು ॥
ತಿಳಿಪುವುದೆಡೆಗೊಳಿಸುವುದಿಂಪುದೋರುವು । ದೊಳಗುಗ್ಗುಡೊಂದುವೆರಿಸುದು ।
ಬಲುನೆಯನೊಳಕೊಂಡು ಸಾಂಗತ್ಯಯೋಗಿಸುವದಕೆ । ಚಲವೋರುವೆಳೆ
ನಸದ ॥

ಕುಲಸತಿಯೊಳು ಕೋಪಿಸದೆ ಕೋಟಲೆಗೊಳ । ದಲಸದೆಯನುಸರಿಸುವುದು
ಬಿಸೆಂದವಿಯುದಿನಸೊಬಗೊಳಿಸಿಯಳಿಲ್ಲ । ಸಸಾನಗೊಂಡಿರೆ ಮುಚ್ಚರಿಸದೆ ॥
ಮೋನದೊಳಿರದೆ ಮೋಡಿಯ ಕಾಣಿಸದೆ ಸೆ । ನ್ನತ್ತುಸದಿ ಮನಗರಗಿಪುದು ॥
ನಲ್ಲರಿಗೊಲಿದು ಸಾಮ್ರಾಜ್ಯದ ಮುದ್ದುಮೆಚ್ಚಿನ । ಮೆಲ್ಲಿದೆ ಕಲ್ಪದೆಯೊಳಿಸೆ ।
ಬಲ್ಲನನವಳ ಬಲುನೆಗೆಯ್ದು ಬಳಲದೆ । ಚಲ್ಲಾಡುವುದು ಕಾರ್ಯದೊಳು
ಸಿಟ್ಟಿನ ಕಲಿವಾಗುವ ಸೇಡದೊಳು ಮನ । ಮುಟ್ಟಿ ನುಡಿ ಸಿಟ್ಟಿಸುವ ॥
ದಿಟ್ಟದಿಟ್ಟಿಗಳೊಡವೆರೆಯ ಸಾಡ್ಯಾನರೊಳ । ಗುಟ್ಟು ಬಿಡುವಿಸುವುದು ॥
ಪೂರಲೆಳೆ ನೋಲುವರಿವ ಮನದ ಪಿತಿ । ಪಿರಿಯಳಂಜಿಕೆಗೊಂಬ ಮೆಯ್ಯ
ಪರುಷ ಪುರುಷರನಸ್ತೊಳು ನೆಗಡೆಳ । ನೀರೆಯು ನೆಲೆಯ ತಿಳಿವುದು ॥
ಮರಕೊಂಡು ಜಂಕೆರುವೆಡೆಯನುರಾಗ ನೆಯ್ದು । ಪಿರಿಗೊಂಬ ಸಿರಿ
ಪೂರ್ವಗಳ ॥

ಕಂಡುನೋಡುವ ನೋಟದ ಕುಪರಿಯ ಬಗೆ । ಯಂದಿಕೆಳಿಕೆದೊಳರಗುವುದು
ಕೊಂಕುಗಳಿವ ನೋಟಕಣಿಯಲಿಸುವ ಪು । ಬಂದಿಗೆ ಸಿಲುದ ಫಿಲಾಷ ॥
ಬಿಂಕವಡೆವ ನಡೆವತಿಕ್ರನೆಂದಿರ । ಸೋಂಕಸ್ಪುದಪರೊಟವಂತು ॥
ಪೋದೆಯಳಿಸುವದ್ದೀ ಪುಸಿಯೊನಿಸುವ ನಡು । ಮಾದವೇರುವ ಮನದಿದ್ವ

ಪದುಳಗೊಳುವ ಪಡೆ ಬಗೆಗೊಂಬ ಬಾಲೆಯ । ಬೆದರಿಸದೊಳಬುಡಿಸುವುದು
ಸಣ್ಣನೆಸೆವ ನಡುಸಸ್ನಾಹವದು ನೆರೆ । ಬಣ್ಣನೇರುವ ಬಡಬಾಸೆ ॥
ಬಣ್ಣಿಗೆಗೊಳುವ ಬಗೆಯ ಪೊಸವರಿಯದ । ಹೆಣ್ಣಿನೊಲುಮೆಯ ಸೆರೆಯಪ್ಪುದು
ಗಾಡಿಗರಿವ ನಡೆ ಗಸ್ಸನೇರುವ ನುಡಿ । ನೋಡಿದೊರುವ ಮುದ್ದುನೋಟ ॥
ಮಾಡುವ ಉಬ್ಬೆಯೆಸೆವ ಮುಂಬ್ಬುವಣ್ಣಗಳ । ಸೀಡುಗೊಳುವುದಿರವರಿತು ॥
ಇಂಗಿತಗಳಿನಿದಿಂಡಲೆಳಸುವ ನೋಟ । ಪಂಗಹಾರದೊಳೆಸೆವಂಗ ॥
ವ್ಯಂಗ್ಯವ ಕಲಿಪೊಳ್ನುಡಿ ಬಗೆಗೊಳೆ ಕೋವು । ಬಾಂಗಿಯ ಕೂರ್ಕೆರಗಿಪ್ಪುದು
ಗಲಗೆಸಗದೆ ನಾಬಂಗೊಳಿಸದೆ ಸಿಂಗೆ । ಕಲಹದ ಗಂಟುವಡಿಸದೆ ॥
ಬಲುಮೆಗೆಯ್ವುದೆ ಬಾಲೆಯ ಬಣ್ಣಾವಾತಿಸಿಂ । ದೊಲಿಸಿಯೊತ್ತಿಗೆ ಬರಿಸುವುದು
ನಸುನಾಣ್ಣು ಮೆಳವೆಂಡಿರ ನೆಲವೇರಿಸಿ । ಬಸಗೆಯ್ವುದೆ ಬಲ್ಮೆದೋರೆ ॥
ಪೊಸಪೂವಸರಗೆಯ್ದು ಮುಡಿಯಂದೆ ನಲಿಗಿಸಿ । ರಸದೆಗೆವೆಸಕವೆನಿಪ್ಪುದು ॥
ಬೆದರುವ ಮುದ್ದುವೆಣ್ಣಿಗೆ ಪೇತಿಗಳವಂತೆ । ಪದುಳಗೆಯ್ವುದೆ ಬಲ್ಮೆದೋರೆ ॥
ಸೊದೆಯುಂಡು ಸೊರ್ಕಾವ ಪೊನ್ನವಕ್ಕಿಗೆ ಬಸು । ಗದಿರನೂಡುವಗ್ಗ್ವಮೆ
ಯಂತೆ ॥ ೨೫ ॥

ಅರಿಯದ ಪೆಣ್ಣಾನಾದರಿಸಿಯುಂಬಕ್ಕೆಗಳ । ಪರಿವುಗ್ಗೆಯಂದೆ ಬಲ್ಮೆದೋರೆ ॥
ತರಿಸಂದು ಮಳೆಗೆಬಾಯ್ದೆರೆವ ಚಾದಗೆಯೊಳು । ಬರಸಿಡಿಲೆರಗಿರ್ಪಂತೆ ॥
ಮುಗುಡೆ ನಾಚಿಕೆಗೊಳೆ ಮುಟ್ಟಿ ತಿಳುಪದೆ । ಪಗೆಸಾಧಿಸಿ ಬಲ್ಮೆದೋರೆ ॥
ಬುಗುರೊಳು ಬಾಡಿಪ ಬೀಜೆಗೊನಗೆಗೊಂಬ । ಬಗೆಯೆನಿಪ್ಪುದು ಭಾವಿಪೊಡೆ
ಎರಗಿಯೆರಗದೆಳೆವೆಣ್ಣನೆರಗಿಸದೆ । ಬರಿದೆ ಮುನಿದು ಬಲ್ಮೆದೋರೆ ॥
ಎರೆವ ತಣ್ಣೀರನೆಳಸುವೆಳವಳ್ಳಿಗೆ । ಕರಿಳಗೆಂಡವ ತಳೆವಂತೆ ॥ ೨೬
ತರಳಮುಗ್ಧಭಾವವರಿತು ತರುಣಿಯೊಳೊಡ । ವೆರಸಿ ಬಿನದವೆಸಗುವುದು ।
ತರವರಿಯದೆ ತಲೆಯೊಳು ಪೊತ್ತು ಲಾಲಿಸೆ । ಪರಿಭವಗೈದು ಪಳಿವಳು ॥
ತಿಳಿಯುದಿನಿಯುಳಿನುವನಂ ತೀವರದ । ಕ್ಲೇಳವಳಿಸಾದಿಪರಿಯದೆ ॥
ಒಳಗರಿತೊಯ್ಯನೊಯ್ಯನೆ ಸೇರ್ದುತಿನಿಯನ । ಬಳಸಲುವರಂ ಬಾಲೆಯರು ॥

ಎರವಿನಿಸಿತಿಲ್ಲದಂತೆಳವರೆಯುದ ಹೆಣ್ಣು । ಸರಿಗೊಂಡು ಸರಸವಾಡುವುದು ॥
ಸರಿಯೊಲ್ಲೆಂದುಳಿದಿರೆ ಮರವಡುವಳು ಮರದ ಬೊಂಬೆಯಮಾಟದೊಳು ॥
ಒತ್ತಿಗೆ ಬರಿಸುವುದೊನ್ನೊಂದು ಬಿನದವಾ । ಚಿತ್ತ ಭೀತಿಯು ಬಿಡಿಸುವುದು
ಮತ್ತೆ ಮೆಯ್ಯಳಿಯೊಳು ಮನ್ನಿಸುವುದು ಚಿತ್ತವೃತ್ತಿಯು ನೆರೆಯಂತಿಡುವುದು
ಬಿನದವಾತನು ಬೆಸಗೊಳ್ಳ ಪಿರಸಾರದೆ . ಮುನಿಯದೆ ಮೋಡಿಯೊಳಿರದೆ
ಇನಿಸು ನಾಚಿಕೆಗೊಂಡಿರಗಿದ ಮುಕೊಸ್ಕ್ರಗ । ದಿನಿಯುಳನೆದೆಗರಗುವುದು ॥೩೩
ಮುಂಜೆರಗನು ಪಿಡಿದೊಡನೆ ಬಾಗಿದ ಮುಖ . ಕರಿಚದ ಹದುಗುವೊಡಲಿನ
ಅಂಜುವ ಮನದೆಳವರೆಯುದ ಕೀರೆಯು । ವಂಚಿಸದನುಸರಿಸುವುದು ॥೩೪
ಸರಸವೆನಗಿ ಕೈಸಾರ್ಚಿದೊಡನೆ ಮಗೆ । ನೊರೆದೇಳುವ ವೈನನಿರೆ ॥
ಮುರಿಗೊಳುವಂಗದ ನೋಳಿಸ ಬೆಮರ ಕಂಟ , ತರುಣಿಯು[1] ನೆದೆಗರಗುವುದು
[2] ಒದವಿ ಕೈಸೋಂಕಿದೊಡನೆ ಹದುಗುವ ಮೆಯ್ಯ । ಕೆದಂಬುವ ಸೆಳಕರಣದ
ಬೆದರುವ ಕಣ್ಣಬೆಚ್ಚುವ ಮನದೆಳೆಯಳ । ನೆದೆಗರಗುವುದಿಚ್ಚೆಯುರಿತು ॥
ಪಿಡಿವ ಮುಂಗೈಯು ಜಾರಿದು ಮುರಿದಲಸುವ ಕುಡುವುರ್ಬುಗಳ ಗುಡಿ
ಗೊಳಿಸ ॥

ಬಿಡುಬೀಸಂದೊನ್ನೊಂದು ಬೆಚ್ಚು ಬಿನ್ನವಿಪಳೆ । ವಡವಿಯನೊಡಬಡಿಸುವುದು
ಜಡೆಯ .ತುರುಬ ಪಿಡಿದೊಡನೆ ಘರಿಕ್ಕನೆ । ನಾಡಮುರಿದೆಸೆವೊಳುನೋಗದ
ಅಡಮಾಯುವ ಕೂರುನೋಟದ ಕೋಪುರಿಯು . ನೊಡಬಡಿಸುವುದೊಲಿಸು
ವುದು ॥೩೬

ಸೋರ್ಚಲೆಳಸಿ ಸಾರ್ವ ಪ್ರೋಂಚಿಕೆಮೆಯ್ಯ ಕೊಂಕಿದ ನಿಡುವುರ್ಬುಗಳ ॥
ಘೋರ್ಂಕಳುವ ನವಿರ್ಗಳೆಳವರೆಯುದ । ಬಿಂಕಗಾತಿಯು ಬೆರಸುವುದು ॥
ಕನಲಿ ಕಲ್ಪಿರ್ದ ಮುವಕೆಂದಳ್ಗಳೆಯುದೆ ಮುನಮುರಿಯುತೆ ಮುಚ್ಚಿಸದೆ :
ಅನುನಯುವಚನದಿಂದನುಗೊಳಿಸುವನಿಗೆ । ಮನವಿಪರಿತವಡದಿಯುರು ॥
ನರೆಜವ್ವನದ ನೀರೆಯೊಳಿರವೆಣಿಸದೆ । ಮರೆವಾಟ. ಮುನವುರಿಯುಸದೆ ॥

---

[1] ಕರುತೆರಗುವುದು. [2] ಒದವಿ.

ಎರಕವೆರಸಿ ಮಾನಿನಾಳ್ತಿಯ ಭಾರವ ಹೊರಿಸಿ ಪ್ರಸಂಗವಡಿಸುವುದು ॥
ಆಯಿತಾಯಿತುಯೆಂದವಲ್ಲಿಗೆಯ್ದಿ ತ ನ್ನಾಯವನವಳಿಗರುಹದೆ ॥
ಆಯಸವೀಯುವನವಳೊಡನಾಲೋಚಿಸಿ । ಕೈಯೆಡಕಡೊಳೆದಿಸುವುದು ॥೪೮
ಎನ್ನವಳಿಂದೆರಕದೊಳೀವುದು ಪೊನ್ನ । ರನ್ನವ ಪೊಸಮುಗುಲಿಗಳ ॥
ತನ್ನ ಶಕ್ತಿಯ ವಂಚಿಸದೆ ಮನದನ್ನಳ । ನುನ್ನತಿವಡಿಸುವುದೊಲಿದು ॥೪೯
ತನ್ನ ಪೆರ್ಚುಗೆಯೊಳು ಪೆರ್ಚುಗೆಗೊಂಡುರೆ ತನ್ನ ಕುಂದಿನೊಳು ಕುಂದುವಳ
ತನ್ನ ಮನಕ್ಕೊಳಗಿರುವುದೆನಿಸುವ ಮನ । ದನ್ನೆ ಮನ್ನಿಪುದೊಲಿದು ।
ಉಡಿಸಿರೆ ಮಡಿಯುಡದುಣಿಸಿರೆ ಸವಿಯುಣ । ತೊಡವೆಯ ತೊಡಿಸಿರೆ ತೊಡದೆ
ಎಡೆವಿಡದಿನಿಯನಡಿಯ ನೆಳಲನು ಪಿಡಿ । ಪಿಡಿವ ಮಡದಿಯ ಮನ್ನಿಪುದು
ನಿನ್ನದೆನ್ನದು ನೀನಾನು ನಿನ್ನವರವ । ರೆನ್ನವರೆಂಬರುಗಳೆಂದು ॥
ತನ್ನಿನಿಯಳ ತನ್ನೊಡವೆ ವೆಚ್ಚಗಳನ ಭಿನ್ನಗೆಯ್ಯದೆ ಬೆರಸುವುದು ॥
ಮನದೊಳು ಮನ ನೆನಹಿನೊಳು ನೆನಹು ಮತ್ತೆ ತನು ತನುವಿನೊಳೊಡ
ವೆರಸಿ ॥
ಅನುಗೊಳಿಸೆ ಪಾಲುನೀರುಗಳಂತಿನಿಯನು । ಮಿನಿಯಳುಮೇಕವೆನಿಪುದು ॥
ಎಳಜೌವನ ಮೊದಲಿಂದುವರೆಗನ್ನ ಬಳಸಂದು ಬಾಳದಳೆಂದು ॥
ಇಳಿಜೌವನದೊಳಗಿರುವ ಪೋರಪಿಯಿಂದ । ನೊಳುನೇಹವನೊದವಿಪುದು ॥
ಎಣಿಕೆಗೈವೊಡೆ ರೂಪು ಜೌವನವಿದೇನು । ಗುಣವಿಲ್ಲದ ಕುಲಸತಿಗೆ ।
ಗುಣಾಕರಂಗೊಂಡಿರೆ ಕೂರ್ಕೆಂದೆಂದಿಗು । ಮಣೆದಿಚ್ಚ ದೇಕವೆನಿಪುದು ॥
ಎರವಿಲ್ಲದೇಕವೆನಿಸಿ ಧರ್ಮದೊಳು ನೆರ । ಪಿಸುವ ಸತಿಪತಿಗಳಿಗೆ ॥
ಪುರುಷೋತ್ತಮನಡಿಗಳ ಪೂಜೆಯಿಂದಿಹ । ಪರಸುಖ ಪಡೆಗೊಳುವುದು

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸಿರ್ದ ಕಬ್ಬದೊಳು ॥
ಉನ್ನತಿವಡೆದೊಪ್ಪುದು ಆರನೆಯ ಸಂಧಿ
ಸನ್ನುತಗುಣಸಂಬಂಧಿ ॥ ೫೧

## ಏಳನೆಯ ಸಂಧಿ

ವೃಂದಾರಕಜನಕೆ ವಾಂಛಿತಫಲಗಳನೀವ । ಮಂದಾರತರುಗೆ ಮಾಧವಗೆ ॥
ಕುಂದುಗಳಿಲ್ಲದೆ ಗುಣಾಕರಗೊಂಡ ಮು । ಕುಂದನಿಗಾನು ವಂದಿಸೆನು ॥೧
ಪುರುಷೋತ್ತಮನೆಡೆಯೊಳು ಪ್ರಮುದಂಗಿರ್ದನ । ಸಿರವರಿತೆಲ್ಲ ಲೋಗದೊಳು ॥
ಕರುಣಾಮೃತವ ಕರೆಗಣ್ಣಿಸಿ ಹರಿಸುವ । ಸಿರಿರಾಣಿಯಡಿಯ ಸೇವಿಸೆನು ॥
ನೆರೆಯೂರಿಗೆ ಪೋಗಿ ನಲ್ಲನೈತರದಿರೆ । ಬರವ ಬಯಸಿ ಬಸವಳಿವ ॥
ವಿರಹಿಣಿಯರ ನಡತೆಯ ಚಿತ್ರಗಳ । ನೊರೆವನುಚಿತವೆಂಬಂತೆ ॥೩॥
ಸೋಗೆಗೆ ಮುಗಿಲ ಸೂರ್ಯನ ಸರಸೀರುಹ । ಸಾಗರವೇಳೆ ಚಂದ್ರಮನ
ಕೋಗಿಲೆ ಸುಗ್ಗಿಯ ಕೂರ್ಪಂತೆ ಸತಿಯನು । ರಾಗದಿನಿಯನ ಹಾಸಿಸಳು ॥
ನೆನೆವಳವನ ನೆರೆಸೊಗಸೊಳುವಗೆಗಳ । ನೆನೆವಳವನ ವೈಸಿರಿಯ ॥
ನೆನೆವಳವನ ನೇಹದೆಸಕದಿರವನಿಂತು । ನೆನೆನೆನೆದಿಂಬುಗೊಳುವಳು ॥೫
ದೇವರಿಲ್ಲದ ದೇಗುಲದ ಚಿತ್ರದಂತೆ । ಭೂವರನಿಲ್ಲದೂರಂತೆ
ಜೀವಿತೇಶ್ವರನ ವಿರಹದೊಳು ಶಿಜ್ಜೆಯ । ಭಾವಿಸಿ ಬಣ್ಣಗುಂದುವಳು ॥
ಕೆಲದೊಳು ಕೆಳದಿಯರಿರೆ ಸ್ವೈರಸದೊಂದು । ಕೆಲಸದ ನೆವದಿಂದೆ ಕಳುಸಿ ॥
ಒಲಿದೋವನೊಳಗ್ಗೈತಮೊಪ್ಪುವ ನೆನೆನೆನೆ । ಧಳುಸಿ ವೈಮುರಿದೊರಲುವಳು
ತಲೆವಾಗಿಲೊಳು ದಾರಿಗರ ನೋಡಲೀಸದೆ । ನೆಲೆವಾಡವೇರಿ ನಿಟ್ಟಿಸದೆ ॥
ಒಲಿದಿನಿಯನ ನಲ್ಮೆಗೆಯ ನೆನಹಿನೊಳು । ನೆಲೆನಿಂದು ನೋವುಗೊಳುವಳು ॥
ಹರಿಹರಿಯುತೆತೊಡವುಗಳ ಪ್ರಸರಗಳ । ಸರಿಮುಳಿದಣ್ಣು ಬಯಸದೆ ॥
ಗರತಿಯರಿದನುಳಿದಿರಲಾಗದೆಂಬಲಂ । ಕರಣಮಾತ್ರವ ಧರಿಸಿಹಳು ॥೯
ಮಂಗಳಕರಮಾತ್ರವನಲ್ಲದೆ ಪಿಂಕ್ಕ । ಶಿಂಗರಗಳನು ಚಿಂತಿಸದೆ ॥
ಸಂಗಾತಿಯರ್ಗಳ ಸರಸಭಾಷಣವ ಮ । ನಂಗೊಳಿಸದೆ ಮರುಗುವಳು ॥೧೦
ಸ್ನಾನಸುಗಂಧಮಾಲ್ಯದ ತಂಬುಲಗೆಯ ಕೆ । ಚ್ಚಾಳುದ ಕಾಡಿಗೆಗಣ್ಣುಗಳ ॥

ಬಾಯ ಸವಿಗೆ ಬಯಸದೆಯನ್ನಪಾನದಿ । ಕಾಯಧಾರಣೆಯೆಸಗುವಳು ॥೧೧
ಜನನಿ ಸಖ್ಯಳುಮನೆವಾರ್ತೆಯೊಳು ತನ್ನ । ಧನಧಾನ್ಯವಾದುಬೇಯುವೊಳು
ತನುವಿನಾರೈಕೆಗಳೊಳು ತಾನೆರಗದ । ಮನದಿಂದೆ ಪರುಳೆನಿಸುವಳು ॥೧೨
ಎನ್ನ ತನ್ನವರೆಂದವರಿವರನು ನಿಂಗೆ । ಮನ್ನಿಸಿ ಮನೆಗೆ ಬರಿಸದೆ ॥
ಮನ್ನಿಸಿ ಕರೆವರ ಮನೆಗೆ ಪೋಗದೆ ಮನ । ದನ್ನದ ನೆನಹುನೋಳ್ದಳು ॥
ಎಷ್ಟುಬಲವವರಂತಿಂತು ನುಡಿವರೆಂದು । ತಡೆದು ತನ್ನಿಚ್ಛೆಯೊಳಿರದೆ ॥
ಎಡೆವಿಡದಿನಿಯನ ನೆನೆದು ನೇಮದೊಳಿರ್ಪ । ಮಡದಿಗೆ ಮತ್ತೆಣೆಯುಂಟೆ
ನಗುವರು ನಗಲಿ ನಾಚುವರು ನಾಚಲಿ ನಿಂಗೆ । ಮೊಗದಿರುಹುವರು ತಿರುಹಲಿ
ಬಗೆಯದದನು ಭಾವಿಸಳು ತನ್ನಿನಿಯನ । ನಗೆಮೊಗವ ನಡೆನುಡಿಗಳನು ॥
ನರಗೊಂಡ ಪ್ರಭಾನ ನೆಲಿಸಿಂದ ಸಿಡುಗಣ್ಣ । ನರಕೆಗುಂದಿದ ಕರಣಗಳ ।
ಒರೆವ ಕಣ್ಣೀರೊಷ್ಪುದಿಂದೆಳ್ಳುಗೆಳದಿಗೆ । ಮರುಕವ ಮನಗೊಳಿಸುವಳು ॥
ಕೆಂದಳಿಗೈನದೆಳೆದೊಳಗಿಟ್ಟ ಗಲ್ಲದ । ಕಂದಿದ ಮೊಗದಾವರೆಯ ॥
ಸಂದಣಿಸುವ ನಿಟ್ಟುಸಿರ ನೆಲೆಯೊಳ್ । ದ್ವಂದಗೆಡಿಸದಾಳಿಯನು ॥೧೩
ಕವಿವ ಕುರುಳಕಟ್ಟುಸಡಲಿದ ಚೂಪ್ರಸ । ವಿವಿಯಿಕ್ಕದೆಸಕಂಗಣ್ಣುಗಳ ॥
ಸವಿಯುದ ನೆನಹಿನ ಸ್ಪಷಿಂ ಕೆಳದಿಗೆ । ಸವನಿಸುವಳು ಸಂಕಟವನು ॥ ೧೪
ಕವಿಮೊಗದೊಳು ನಿಂದು ಬಾಯಿಟ್ಟು ಕರೆದೊಡ । ಮೊಡಲನಲಗಿದೊಡ
ಮುಡಿಕೆ ॥
ಒಡನೆಚ್ಚರದೋಳ್ವೆಯುಂದೆ ಕೆಳದಿಯರ । ಗಡಣವ ಕೈಗೆಡಿಸುವಳು ॥೧೫
ಎಲೆಯುಕ್ಕು ಸಿಂಗೋಳಕರಿಂತು ಪೊಂತಿನೆಯುಂ । ಬಲಗೇಳ್ದೊಡನುರವಣಿಸಿ ।
ಕೆಲದಲ್ಲಿ ನಿಂದವರೊಳು ಕೇಣವೆಸಗುತ । ನೆಲಗೆಡಿಸುವಳು ನೇಹಿಗರ ॥
ಇನ್ನಿನಿಯನ ಪಾದಸೇವೆಯಿಲ್ಲದೆ ನಾ । ನೆನ್ನೆಗಪ್ಪಿಂತಿರ್ಪನೆಂದು ।
ತನ್ನೊಳು ತಾನೆ ತವಕಗೊಂಬ ಸತಿಯು ಮ । ಹೋನ್ನತಿಗೆಣೆಯುಂಟೆ ॥
ಒಲಿದು ನಲ್ಲನ ವಿರಹದೆಕೆರಲುವ ಕುಲ । ಲಲನೆಯ ವಿರಹವೇದನೆಗೆ ।
ನಳಬಗೆಯುಗ್ರತಪಂಗಳೆಡಲ್ಲಿಂ । ದುಳಿವೆವು ಪೊನ್ನನೋಂದಗಳು ॥

ಇರವೆಸಗಂಡನ ದಾಸ್ಯಸೇವೆಯನಿಯಮದಿಂದೆ । ಪರಿಹರಿಸದ ಪಾಪಗಳು ॥
ವಿರಹದ ತಾಪಶೋಕಿಯಿಂದೆ ಬೆಂದಳವ್ವದಿಂ । ಧರೆಯೆನರಳಿಸಲೇಕೆಪಡರು ॥
ಈದೇಹದಂಡನವೈಸೆ ಪಾರ್ವತಿ ತ್ತ್ । ವೇದವಿಹಿತಮಾರ್ಗದೊಳು ॥
ಆದಾರಿಯೊಳಾತ್ಮಗಳೆ ಸಂಕಟಗೊಂಬ । ವೇದನೆಗೇಕೆಯಾವುದಿನ್ನು ॥
ಬಸವಳಿದೊಡಲ ಪಾಪಿನೊಳೇಕೆ ಹಿಡುವ । ಳು ಸುರಸುರೆಂದೊಡಲುವಳು ॥
ಮುಸುಕಿಡುವಳು ಮುದುಡುವಳು ಕೈಕಾಲ್ಗಳ । ಬಿಸುಸುಯ್ದು ಬಿಕ್ಕಿ
ಕೇಳುವಳು ॥೨೫

ಅರಿಯದೆ ತನಗಂಡನ ಮುಟ್ಟಿಸಿದಂತೆ । ಹುರುಳಿಸ ಗಿಡು ಸೋಂಕಿದಂತೆ ॥
ಬಿರುಬುಗೊಂಬಳು ಬೆದರುವಳಳುವಳು ಬೇ । ಸರುವಳು ಬೇನೆವಡೆವಳು ॥
ಒಂದಡೆಗೆಳಗೆಯೆ ಸೊಂದು ಜರಿಸದ । ಕೆಂದು ಜಾವವ ಯುಗದಂತೆ ॥
ಒಂದಿರುಳನು ಕಳ್ದು ಕಾಲದಂತಿಣಿಪಳು । ಮುಂದುಗೆಡುವಳು ಮೋಹಿಪಳು
ಬನದೊಳ್ ಬೆಸೆಗೆಟ್ಟು ಪರಿವಂತೆ ಕಳ್ತೆ । ಮನೆಯೊಳು ಕಣ್ದೆರೆವಂತೆ ।
ಇನಿಯನಗಲಿ ಕಾಸಿರುವುಗಾಣದೆ ಮಗೆ ಯೊಸಗೆಯುತಳವುಗುಂದುವಳು
ಎಂದಿಗೆನ್ನಿನಿಯನನಿದಿರುಗೊಂಬುವೆನು ನ್ಯಂದಿಗೆ ಹತ್ತಿಸಾರುವೆನು ॥
ಎಂದಿಗವನ ಪದನೊಗದೊಳು ಸಂದಪೆ । ನೆಂದಿಗೆನಿಸದೆ ಜಾನಿಸಳು ॥೨೬
ಎಂದಿಗವನ ನುಡಿಗಳ ಸವಿಸವಿದಾ । ನಂದದೊಳಿಳ್ದು ತೇಲುವೆನು ॥
ಎಂದಿಗೆನ್ನರಸನನನಗಾಸರುಹುವೆ । ನೆಂದು ಬಯಸಿ ಬಳಲುವಳು ॥೨೭
ಎಂದಿಗೆನ್ನದೆ ತಣಿವಂತಿಲ್ಲ ಸೇವೆಯು । ನೊಂದದನುಳಿಯದೊಡರಿಪೆನು ॥
ಎಂದಿಗವನೊಳೊಡನೆರದೊಂದಪ್ಪಿಸುವೆ । ನೆಂದೆರೆದೊಳಗೆಣಿಸುವಳು ॥೨೮
ಇಂದಿನೊಳೀಗಳೆನ್ನಿನಿಯನೈತರದೇ । ಕೆಂದು ಕದಂಬ ಶಾಪಿಸಿ ॥
ಬಂದು ಮಡದಿಯನುಳ್ಳ ಮನೆಯು ದೇವರ ಬಲ । ವಂದು ನೋಂಪಿಯ
ನೋಂತುವಳು ॥೨೯

ಅತ್ತಿಬದೆಯಿಂದೆ ಬೇಸನೆಲೆಸಲು । ರೊತ್ತಿನೊಳಿಳಿವ ನೌನವ ॥
ಸುತ್ತ ನೌಸವನವ ತುತ್ತ್ ಕುಂಬಳಿಯ ಕ್ಷೆಂ । ಬತ್ತಿ ಕೇಳುವಳನಿಂದ ॥

ಬೆಸಗೊಂಬಳನಿಯುನಾವೆಡೆಯೊಳಿರುವನಾ । ದೆಸೆಯಿಂದೆ ಬಂದ ಬಂದವರ ॥
ಬೆಸಗೊಂಬಳು ಯೋಗಿಸುವರ ಯೋಗಿಪುರುಷರ । ಬೆಸಗೊಂಬಳು ಬಿಜ್ಜವಳರ
ಬೆಸಗೊಂಬಳೆನ್ನವಲ್ಲಭನೆಲ್ಲಿದನೆಂದು ಬೆಸಗೊಂಬಳೆಂತಿರ್ಪನೆಂದು ॥
ಬೆಸಗೊಂಬಳೆಂದಿಗೆ ಬಂದಪನೆಂದಿಂತು । ಬೆಸಗೊಂಬಳು ಬೇಸರದೆ ॥೩೫
ಇಂದಿಗೋಷಗೆಲಿಗೋಚಾವಕೀಗಳಿಗೆಗೆ । ಬಂದಪನೆಂದವರುಸಿರೆ ॥
ನಂದದಹಿಕಮುಖದಿಂದೆ ನುಡಿದೊಳಾ । ನಂದದಿ ನಲವೇರುವಳು ॥೩೬
ಉಕ್ಕಿ ಸೂಸುವ ಸೊಗಸಾಲಿನೀರ್ಪೊನಲಿಂದೆ : ಪುಕ್ಕುಮೀರುವ ಸರದಿಂದೆ ॥
ಸೊಕ್ಕುವ ಮನದಿಂದೆ ಸಾತ್ತ್ವಿಗೆಳದಿಯರ । ಚಿಕ್ಕಸಬೆರಗುವಡೆಸಳು ॥೩೭
ಈಗಲೇ ಬರ್ಪನೆಂಬುದನಾಲಿಸಿ ಕಲೆ । ಬಾಗಿಲ ತೆರೆಯುಲೆಳಸುತೆ ॥
ಬೇಗದೊಳವನ ಸೇವೆಗೆ ಬೇಕಾದುದ । ಶ್ರಾಗಳೆಯುನುಗೊಳಿಸುವಳು ॥೩೮
ನೊಡಲೊಳು ಮುಂದುವರಿವ ನೋಟದಿಂದೊಡ । ನೊದಗುವ ಹರ್ಷಾಶ್ರು
ಬಿಂದೆ ॥
ಮುಡಿದೊಳು ಮುಂದೇಳುವ ನಪರಂದೊಡ : ನದಿರುಗೊಳುವಳನಿಯುನನು
ಬಾಗಿಲ ಬಳಿಗೆ ಬಂದಪನೆಂಬುದುಮಂದು । ರಾಗರಸದ ಲಹರಿಯೊಳು ॥
ಏಗ್ಗೆಪನೆಂಬುದನರಿಯುದವನಾಗಿದಿ । ರಾಗಿ ನಿಟ್ಟಿಸಿ ನಿಂದಿಹಳು ॥೪೦
ಪುಷ್ಟಿಪದದಿಂದೆ ಪುರುಳಂಗಾಣದವರು ನೆಟ್ಟನೆ ನಿಧಿಯು ಕಂಡಂತೆ ॥
ಕಟ್ಟಿರಕದೊಳನಿಯನ ಕಾಣುತೆ ಮರ । ವಟ್ಟು ಮೈಮರೆತು ನಿಟ್ಟಿಸಳು ॥
ಯೋಗದಕಾಶದಿಣತಿಯೊಳು ತನಗಿದಿ । ರಾಗಿ ನಿಂದಿರ್ಪ ದೇವತೆಯು ॥
ಯೋಗಿಗಳೆದೆಗೊಳಿಪಂತಿನಿಯನೊಳನು । ರಾಗವೆರಸಿ ನಿಟ್ಟಿಪಳು ।
ಕಾಣದ ಪಲವಗಲಿಂದೆ ಕಣ್ತೆರೆಯಾದ । ಮಾಣಿಕ ಮೈದೋರಿದಂತೆ ॥
ಪ್ರಾಣವಲ್ಲಭನ ಪಾದಾರವಿಂದಂಗಳ ಕಾಣುತೆ ಕಪಿದು ನಿಟ್ಟಿಸಳು ॥೪೨
ಪುಳಕದ ನೆವದಿಂದೆ ಪೊಣ್ಮುವ ಹರ್ಷದ : ಬೆಳಗೈಗೆ ನೀರೆರೆವಂತೆ ॥
ತುಳುಕುವ ಸೊಗಪಾಲಿ ನೀರ್ದೊರೆಯುನು ತಂ । ದೆಳವುತವನ ನಿಟ್ಟಿಸಳು ॥
ಬಳಿಕ ಪುನವ ಬಲಿವಿಡಿದಿಪಿಯನ ಪಾದ । ನಳಿನಂಗಳಿಗೆ ಪತಿಗ್ಗೈದು ॥

ಪೊಳಲನಗುವ ಹಸ್ತಾಗ್ರದಿಂದಂಗುಟ ಗಳನು ತೊಳೆದು ಪೂಜಿಪಳು ।
ಕೆಲದೊಳಿರ್ಪಳು ಗೆಲ್ಲಗೊಂಬಳು ಸೇಹವ । ಬಲಿವಳು ಬಣ್ಣವೇರುವಳು ॥
ಒಲಿದು ನಿಟ್ಟಿಸಿಕೊಡನೊಡಲ ಸುರತಕೆ ಸಲಿ । ನಲಿವಳು ನಲವೇರುವಳು ॥
ಪೊರವಂಟ್ಟು ಪೋದಂದು ನೋಡಲಿಂದುವರೆಗೆ ತ । ನ್ನೆರೆಯುಸಿರದಿರವೆಲ್ಲವನು
ಎರಕವೆರಸಿ ಕೇಳುವಳೆದೆಯೆಡೆಯೊಳು । ಮರುಗುತೆ ಮಸಗೊಳಿಸುವಳು ॥
ಎರವಿಸಿತಿಲ್ಲದೆಂದಿನ ಸೇಹದೊಳೊಡ । ವೆರಸುವಳೆದೆಗರಗುವಳು ॥
ಸರಿಸರಿಯಾಗವನು ಸಟ್ಟಿ ತಣಿವಳು । ಪರಮಾನಂದವಡುವಳು ॥೪೮
ಜಾಸಿಸುತಿಸಿಯುನ ಚರಿತವ ಬಿರಹದೊ । ಳೀನೇಮುವ ನೆಲೆಗೊಂಡ ॥
ಮಾನಿನಿ ಹಪರದೊಳು ಮಂಗಲಮನ । ತಾನಂದಪೇವನಚ್ಯುತನು ॥೪೯

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸಿದರ್ ಕಬ್ಬದೊಳು ॥
ಮನ್ನಣೆವಡೆದೊಪ್ಪಿದುದೇಳನೆಯ ಸಂಧಿ
ಸನ್ನುತಗುಣಸಂಬಂಧಿ ॥೫೦

---

## ಎಂಟನೆಯ ಸಂಧಿ

ಆವನಿಚ್ಛೆಯೊಳವತರಿಸಿದುದಾದಿಯೊ । ಳಾವನಿಂದೊಳ್ಪನಡೆದುದು ॥
ಆವನೊಳಡಗುವುದಖಿಳಚರಾಚರ । ದಾವಿಷ್ಣುಗಾನೆರಗುವೆನು ॥೧
ಶ್ರೀವಿಷ್ಣುವಲ್ಲಭೆಯೆನಿಸಿ ಸಕಲ ವೇ । ದಾವಳಿಯೊಳು ಜಸವಡೆದ ॥
ಪಾವನಚರಿತೆಯ ಪದ್ಮಸದ್ಮೆಯ ಲ । ಕ್ಷ್ಮೀವನಿತೆಯ ವಂದಿಸೆನು ॥೨
ಲೋಕಶಾಸ್ತ್ರನನಾಲೋಚಿಸಿ ತಿಳಿದದ । ಧೈಕಮತ್ಯವನಳವಡಿಸಿ ॥
ಪಕೆಪತಿವ್ರತೆಯರಗುವ ದಿನಚರ್ಯೆಯ । ಕೋರಿಕೆ ತಪ್ಪದೆ ಸೊಲ್ಲಿಸುವೆನು ॥
ಅರುಣೋದಯದ ಸಮಯದೊಳೆದ್ದು ಶ್ರೀಹರಿ । ಗುರುಚರಣಕೆ ಕೈಮುಗಿ

ಪರಮಭಕ್ತಿಯೊಳೊಲಿದಿನಿಯನೆಚ್ಚರುವನ್ನು । ಮರುಕವೆರೆದು ಕಾದಿಹುದು
ಸಡಿಲಿದ ಮುಡಿಯ ಸೈಪಿಡುತೊಂದರೊಳೊಂದು । ತೊಡಕಿದ ರನ್ನಸರಗಳ
ಬಿಡಿಸುತೆಚ್ಚರುವನ್ನೆವರಮಿನಿಯನ ಕೆಲ । ಗಡೆಯೊಳೊಲಿದು ಕಾದಿಹುದು
ಎದ್ದು ನಿಟ್ಟಿಸುವಿನಿಯನ ನೋಟಕೆ ತನ್ನ । ಮುದ್ದುಮೊಗವ ಮುಂಗೊಳಿಸಿ ॥
ನಿದ್ದೆಯೊಳೆಸಗಿದ ನಿಖಿಲಾಪಚಾರವ । ತಿದ್ದುವುದಿನವಾತಿನೊಳು ॥೭
ಅಡಿಗಳಿಗೆರಗಿಯಾಣತಿಗೊಂಡು ಪೋದವು । ಹಿತ್ತಲನೊಳಗದ ಹೆಣ್ಣುಗಳಿಗೆ
ಬಿಡುಗೆಲಸಂಗಳ ಬೆಸಸಿಯಷ್ಟಂತೆ ತಾ । ನೊಡರಿಪುದೊಳುಗಜ್ಜವನು ॥
ಕರುತುರುಗಳ ಕಾಪಿಡುವ ಕರೆವ ಪಾ । ಲ್ಗರೆವ ಕಾಸುವ ಕೌಶಲವ ॥
ಅರಿಯದ ಹೊಸಹೆಣ್ಣುಗಳಿಗಾಬಗೆ । ಯರಿವಂತನುಗೊಳಿಸುವುದು ॥೮
ದೇವಪೂಜೆಯ ದೇವರಿಗೆರಗುವುದತ್ತ । ಮಾವಂದಿರಡಿಗೆ ಮಣಿವುದು ॥
ಭಾವಂದಿರಡಿಗೆ ವಂದನೆಗೆಯ್ವುದು ತನ್ನ । ಭಾವಶುದ್ಧಿಯ ಬಳೆಯಿಪುದು ॥
ಮನವೊಲಿದುಣಿಸಿ ತೊಡಿಸಿ ತಿಲಕಂಗಳ । ನನುಗ್ರಹದಾದರವೆರಸಿ ॥
ಮನೆಯೊಳಿರುವ ಮಕ್ಕಳನೆಲ್ಲರನೊ । ದ್ಯನಿಸಿ ಬರಡಿಗೆಯೊರಗಿಪುದು ॥೧೦
ಕಳವು ಕಪಟಗಳ ಕಲಿಯದಂದದಿ ಪು । ಣ್ಯಳಸವಿಗಡಿಗಳುಕಿಪುದು ॥
ಎಳವೆಯುಷ್ಟೇಹಿಗೊಂಡ ಸುಗುಣದುರ್ಗುಣಗಳ । ಕಳೆವುದರಿಂದ ಕಡೆಕಡೆಗೆ
ಬೆಳೆದು ತನ್ನಿನಿಯನ ಸಿರಿ ಬಡತನ । ದೇಳಿಗೆಯಂದದಿಗೊಳಿಸಿ ॥
ಬಾರದ ವಸ್ತುವ ಬಯಸಿ ಬಾಧಿಸದೆ ಕೈ । ಸಾರಿಸದಕೆ ಸಮ್ಮತಿಪುದು ॥
ಹಸಗೆಡದಂತೆ ಹಕ್ಕಿಗಳು ಕುಟುಕದಂತೆ । ಪಶುಗಳು ಬಾಯಿಡದಂತೆ ॥
ಕಸವುಗದಂತೆ ಕಾಪಿಡುವುದು ಧಾನ್ಯವ । ಬಸವಳಿವುದು ಜಾಣ್ಮೆಯೊಳು
ಸಾವಧಾನದೊಳು ಸಂಪಾದಿಸಿ ಮನೆಯೊಳು । ತೀವಿದ ದಿವ್ಯವಸ್ತುಗಳ ॥
ದೇವತಾರೋಗಣೆಗೆಂದೆರೆಯುವ ಭಕ್ತಿ । ಭಾವದಿ ಪರಿಶೋಧಿಪುದು ॥೧೨
ಬಳಲಿಗದವನ್ನು ಬಣ್ಣಗೆಡದವನ್ನು । ಮೊಳೆದೋರಿಮುಗ್ಗಿದವನ್ನು ॥
ಕಳೆಯುಳಿಯದ ಮನ್ನ ಕಂದಿಕುಂದದ ಮನ್ನ । ಬಳಸುವುದಿಳೆವಸ್ತುವನು
ಸೀಸಲಳಿಯದಂತೆ ವಿಧಿವರಿಪುದುಗಾವ । ಬೇಸುವರನು ಬೆಸಸುವುದು ॥

ಈ ಸುವಸ್ತ್ರವನಿಂತನುಗೊಳಿಸುವ ಬಗೆ । ಲೇಸೆಂಬವೊಲೆಸಗುವುದು ॥
ಕೆಲಗಂಧುಬೇಳುಗೆಣಸುದಂಟುಕುಶಿಕ । ಯೆಲೆಪಿಂಡಿಗಾಯುಗಳೆಂಬ ॥
ಫಲವಗೆ ತಾಕಿದೊಳುಚಿತಾನುಚಿತವ । ನೆಲೆಯರಿವುದು ನೇಮದೊಳು ॥೧೭
ಕೊಳೆತ ಕಂದಿದ ಬಲಿತಿಂದುಳಿದ ಮೀಸ । ಳಳಿದಲ್ಲದವರು ತಂದಿತ್ತ ॥
ಪುಳಿತವೊಲ್ಲದ ನೆಲದೊಳು ಪುಟ್ಟಿದ ಶಾಕಂ ಗಳನು ಕಳೆದುಬಿಸುಡುವುದು
ಆಚಾರದಿಂ ಧರ್ಮದನುಷ್ಠಾನದೇಳಿಗೆ । ಯಾಚಾರದಿಂದಾಯುಷ್ಯ ॥
ಆಚಾರದಿಂದಿಹಪರವದರಿಂದೀಸೆ । ದಾಚಾರವತಿಯೆನಿಸುವುದು ॥೧೯
ಅದರಿಂದ ಷಣ್ಮಾಚಾರಂಗಳಿಗೆ ಮೀಹ । ವಾದ ಬಗೆಯೊಳದನಂತು ।
ಅದರವೆರಸಿ ಮೀವುದು ಮೊದಲೊಳು ಮಿಕ್ಕ । ವೇದವಿಧಿಯನೆಸಗುವುದು ॥
ಇಳಿದು ನೀರೊಳು ಮೀವುದಿದಕಾರದವರು ಮಸ್ತ । ಕೊಳೆವುದು ಮಂಡೆಯ
ನುಳಿದು ॥
ಚಳಿಯ ಸ್ನಾನಸಲಾರದ ಸತಿಯರು ಬಿಸಿ ಯೊಳು ಮೀವುದು ಮೈದೊಳೆವುದು
ಬಳಿದ ಬೇನೆಯ ಬಡಮೆಯ್ಯ ಭಾವೆಯರೆಲ್ಲ । ತೊಳೆವುದು ಕೈಕಾಲು
ಮೊಗಗಳನು ॥
ಉಳಿದಂಗವನು ನನೆದುಡಿಯೊಳು ತೊಡೆವುದು ಕಳೆವುದು ಸಾಪಕರ್ಮವನು
ನೀರೊಳು ಮೆಯ್ಯ ನೇಮದೊಳು ಕರಣಗಳ । ಭೂರಿಸತ್ವದೊಳು ಬುದ್ಧಿಯನು
ನಾರಾಯಣನಾಳುತನದೊಳಾತ್ಮನ ಕೊಳೆ । ದೋರಂತೊಳಪ್ಪುವಡೆವುದು ॥
ಸಲೆ ಚಿಸ್ಸಬೆಳ್ಳಿ ಸಿತ ಕೊಳಚು ಕಾವುದ । ಸಲಬಗೆ ಪಾತ್ರಂಗಳನು ॥
ಕಿಲುಬಿನ ಕಲೆ ತೋರದಂತಾದರದಿಂ । ದಲಸದೆ ತೊಳೆವುದಂದದು ॥೨೪
ಅಡಿಗೆವನೆಗೆ ದೇವತಾರ್ಚನೆಯೆಡೆಗೆ ತಾ । ವಡಿದೊಳಿವುದಕೆಂದು ಬೇರೆ ॥
ಮಡಗಿಸುವುದು ಮರ್ಯಾದೆಯಂತು ನೀರ । ಕೊಡಗಳ ಕುಳಪಾಲಕಿಯರು ॥
ರಚನೆಯ ಬಗೆ ಧಯ್ಯವಾಗೆಯುಪಸ್ಕರ । ವುಚಿತವೆನಿಸಿಯೊಪ್ಪುವಡೆದು ॥
ಶುಚಿ ರುಚಿಯುಪ್ಪಂತೆ ಸುವಿಧಾನದೊಳ್ಮಡೆ । ಪಚನಗೈವುದು ಭಾವೆಯರು
ಬೆಂದುದು ಬೇಯದ ಬೆಗ್ಗದೊಳು ಹಸಿಯಾದುದ । ಬಂದುರೆ ತಳಪೊತ್ತಿದುದನು

ಅಂದವಳಿದುದನಚ್ಯುತನಾರೋಗಣೆ । ಗೆಂದು ಮುಂದಿಡದೆ ಕಳೆವುದು ॥೨೭
ಪ್ಪದೊಳೆಯುದ ಮಡಿಯುಡದ ಪ್ಪಲಿಗೆಯಂಜ । ಲಾದ ಸಾರಿಯುದನುಗ್ಗಿದು
ಈ ದೇವದಾದೇವರಿಗೆಂದದನು ನಿ । ವೇದಿಸಲಾಗದಚ್ಯುತಗೆ ॥೨೮
ದೇವರಿಗೆರಗಿ ದೇವರ ಮನೆಪೊಕ್ಕಲ್ಲಿ । ತೀವಿರುವುಪಕರಣಗಳ ॥
ಸ್ನಾನಕಾನದೆ ಸಜ್ಜುಗೈವುದು ಜನ್ಮದ । ಪಾವನವೆನಿಸಿ ಬಾಳುವುದು ॥೨೯
ಸಾರಿಸಿ ರಂಗವಲ್ಲಿಯು ಸರಗೊಳಿಸಿ ದೀ । ಪಾದೋಪಣವನಾಚರಿಸಿ ॥
ದಾರುತಿ ಮನದನ್ನನ ಬರವನೆ ಮನ । ಪಾರೆ ಕಾದಿಹುದು ಕಾಂತೆಯರು॥
ಒಡನೆ ತನ್ನಿಷ್ಟದೇವತೆಗಾರೋಗಣೆ । ವಡಿಸಿ ತಂದಮೃತಾನ್ನವನು ॥
ತಡೆಯದಿಸಿಯನನುಮತಿವಡೆದದನುಣ । ಬಡಿಸುವುದುಪಚರಿಸುವುದು ॥
ಅತಿಥಿಗಳಭ್ಯಾಗತರೊಡನಧಮರ ಯತಿಯಾಚಕರೆಲ್ಲರನು ॥
ಪತಿಕರಿಸುವುದು ಬಳಿಕ ಸಂತಸದೊಳು । ಸತಿಯರು ಸೆನಿವುದನ್ನವನು ॥
ತಿಳಿವಂತೆ ಪೇಳುವ ದೇಶಿಕೋತ್ತಮನಂಘ್ರಿ । ನಳಿನಂಗಳಿಗೆ ನತಿಗೈದು ॥
ಬಳಿಕ ಭಾರತಭಾಗವತರಾಮಾಯಣ । ದೊಳುಗತೆಗಳ ಕೇಳುವುದು ॥೩೩
ತಿಳಿದವರೊಳು ತತ್ವದಿರವ ಮಾಧವನಂಘ್ರಿ । ಯೊಳು ಭಕ್ತಿಭಾವವಬಲಿಸಿ॥
ಕಳೆವುದು ಸಕಲಕರಣತಲ್ಪಗಳ । ತೊಳೆವುದು ಮನದ ಮಲಗಳ ॥೩೪
ಎರೆಜೌವನದ ಸೀರೆಯುನಿತನಿತಕ್ಕೆ । ಮೋರೆಗಾಣಿಸಿ ಮುಂಬರಿಯದೆ ॥
ಪೀರಭಾರದ ಕಣ್ಣದೊಳು ಮೇರೆಯರಿತು ಪ್ಪ । ದೋರಿ ನಡೆವುದುಚಿತ
ದೊಳು ॥೩೫

ಸಜ್ಜುವಡೆಯೆ ಸೌಮ್ಯತೆ ಸರ್ವಾಂಗದೊ । ಳುಜ್ಜುಗಗೊಳಿಯೊಳುನಡತೆ ।
ಲಜ್ಜೆ ಬಿಂಬಿಸೆ ಲಾವಣ್ಯದೊಳೊಯ್ಯನೆ । ಸಜ್ಜೆಯಿಡುವುದು ಭಾವೆಯರು ॥
ನೆಳಲ ನಿಟ್ಟಿಸೆ ದಿಟ್ಟನೀಮದೊಳಿರೆ ಮನ । ತಲೆ ನಸುಮಣೆದಂದವಡೆಯೆ॥
ಒಲಿಯದೆ ಮೆಯ್ಯೊಪ್ಪದೊಳಿರೆವೊಯ್ಯನೆ । ಕುಲವಧು ಸಜ್ಜೆಗೊಳುವುದು ।
ತನ್ನೊಡಲಿಗೆ ತನ್ನ ಮನವ ಕಾಪಿಡುವುದು । ತನ್ನ ಮನಕೆ ತನ್ನಮತಿಯು॥
ತನ್ನ ಮತಿಗೆ ತನ್ನ ಸಾತ್ವಿಕಧೈರ್ಯವ । ನುನ್ನತಿವಡೆದೊಪ್ಪುವುದು ॥೩೬

ತನ್ನ ಮನೆಯ ಬಡತನಗಳ ಧನಗಳ । ತನ್ನನಿಯನ ತಪ್ಪುಗಳ ॥
ತನ್ನ ಮರವೆಮೋಸಗಳನವರಿವರೊಳು । ಬಿನ್ನಯಿಸದೆ ಮರಸುವುದು ॥೩೯
ಹಲವೀಧಿಯೊಳು ಪರಿಯುಡಿ ತಾಯ್ಮನೆಗಳಲ್ಲಿ । ಹಲವಗಲಿದ್ದು ನೆಲಸದೆ ॥
ಹಲಬಗೆಯೊಳು ಪತಿಪದವನಗಲಿದೊಂದು । ಕಲೆಯ ಕಳ್ಪುದವೋಲೆನಿಸುವುದು
ನೆರದ ಮರ್ಯಾದ ಪೆರಲಾಲೋಚನೆಗಳ । ಪೆರರೇಕಾಂತವೆನಿಸಕವ ॥
ಪೆರತೊರ್ವರಿಗೆ ಪೇಳುವ ಬೆಸನವ ಬಿಟ್ಟು । ನೆರೆನೇಮದೊಳು ನೆಲಸುವುದು ॥
ನೆರೆಮನೆ ಮನೆವಾಳಿಕ್ಕೆಯನಿಂತಿಂತೆಂದು । ಪರಿಹಾಸಗೈದು ಪಳಿಯದೆ ॥
ಪರರೊಳು ಪರಿವಾದವ ಬಣ್ಣಿಸುವರೊಡ । ನೆರಸದೆ ಬೇರೆನಿಸುವುದು ॥೪೦
ಹರಿದೂರ ಬೀದಿಬೀದಿಯ ಹಲಪನೆಯೊಳು । ತಿರುಗುವ ಧಿಟ್ಟವೆಣ್ಗಳನು ॥
ಕರೆದು ಮನ್ನಿಸದೇಕಾಂತವನಾಡದೆ । ಪರಿಹರಿಸುವುದು ಪದುಳದೊಳು ॥೪೧
ಬಂಡುಬೂತಾಟದ ಬಣ್ಣಣೆಯನು ಕಿವಿ । ಗೊಂಡು ಕೇಳದೆ ಕುರುಪಿಡದೆ ॥
ಚಂಡಿ ಚಪಲೆ ಚಾಡಿಕಾತಿಯೆನಿಸದೆ ನ । ಲ್ಗಂಡಿರಿಂಪುಗೈದು ನಲ್ಮೆಯೊಳು ॥
ಕೆಟ್ಟರಳಿದರೆಂಬಕೀರ್ತಿಗಂಜದ ಸತಿ । ಬಿಟ್ಟು ಕೆಳದಿವೆಣ್ಗಳೊಳು ॥
ನೆಟ್ಟನೆ ಬಳೆದಿರ್ದ ನೇಹವ ನೆನೆಯದೆ । ಪೊಟ್ಟುಗಳೆದು ಪೊರಡಿಪುದು ॥
ತೊಂಡುವೆಣ್ಗಳ ನೇಹದೊಡಕಿಗೆ ಸಿಲುಕದೆ । ಲಂಡೆವೆಣ್ಗಳ ಬಾಲಿಸದೆ ।
ಪುಂಡವೆಣ್ಗಳೊಳು ಪೊರ್ದುಗೆವಡೆಯದೆ । ನಲ್ಬಂಡಿರೊಡನೆ ಬೆರಸುವುದು
ಕಂಡ ಕಡೆಗೆ ನಡೆನಡೆದಳುಕದೆ ಕಾಲು । ಗಂಡ ಕರಾಳವೆಣ್ಣುಗಳ ॥
ಅಂಡಲೆದವರೊಳು ಬಳೆದೊಳುನೇಹವ । ಬೆಂಡುಗಳೆದು ಬಿಸುಡುವುದು ॥
ಮರುಳಾಗಿ ಮತ್ತೆ ಮುಟ್ಟನೊಳಿದ್ದುದಿಲ್ಲಂ । ಮೊರೆದಿನಿತುಮನೇಗಿಸದೆ ॥
ಇರುಳಿಗೆಂದಿಳಿಪೊತ್ತಿನೊಳಿಲ್ಲವಸ್ತುವ । ತರಿಸುವುದನುವಡಿಸುವುದು ॥
ನೆನೆದೊಂದೊಂದನೆಡೆಯೊಳಿರ್ದಾಣ್ಮನ । ಮನವ ನೋಯಿಸಿ ಮರುಗಿಸದೆ ॥
ಮನೆಗೆಲಸವನೆಲ್ಲವನಾರೈದು ಮ । ತ್ತಿನಿಯನ ಶಯ್ಯೆಗೇರುವುದು ॥೪೪
ಹಗಲಿರುಳೇಸರಿಯೊಳು ನಡೆದಿನಿಯನ । ಬಗೆಯ ತಿಳಿದು ಬಂದಿಗೊಂಬ ॥

ಸಂಗುಣೆಯುರಿಹಪದದೊಳು ನೂರೆಗೊಂಬರು । ಸೊಗದ ಸುಗ್ಗಿಯು
ಸಂಭ್ರಮದೊಳು ॥೫೧

ಚೆನ್ನಿಗ ಚಿಕದೇವರಾಯನ ಸಂಚಿಯ ।
ಹೊನ್ನನನ್ನುನುಡಿದ ಶಬ್ದದೊಳು ।
ಉನ್ನತಿವಡೆದೊಪ್ಪಿದುದೆಂಟನೆಯ ಸಂಧಿ
ಸನ್ಮತಗುಣಸಂಬಂಧಿ ॥೫೨

---

## ಒಂಬತ್ತನೆಯ ಸಂಧಿ

ಆವನಾಚರಿಸುತಲಿಗ ಕರ್ಮಯೋಗ ವ । ತ್ಯಾಗದ ನೆನಪು ವಿಜ್ಞಾನ ।
ಆವನೊಳೆರಕ ಬಹುತಿಯಾಷರವಾಸ । ಜೀವನಿಗಾನೆರಗುವೆನು ॥೧
ಜ್ಞಾನ ವೈರಾಗ್ಯ ಶ್ರೀಹರಿಭಕ್ತಿ ಸತ್ಕರ್ಮ । ಹೀನರಸೆನ್ನನಾಶ್ರೈದು ॥
ಆ ನಾರಾಯಣನಡಿಗೆರಗಿದ ಸಿರಿ । ಗಾನತಿಗೈದು ಬಾಳುವೆನು ॥೨
ಪತಿಪಾದಭಕ್ತಿಯುರಿಸಿದ ಸತಿಯುಧು ತಾ । ಪತಿಶಯಗತಿಗೆಳಸಿದೊಡೆ ।
ಇತರಚಿಂತೆಯನುಳಿದೇಕಚಿತ್ತದೊಳು ಶ್ರೀ ಪತಿಪಾದವನೆ ಭಜಿಸುವುದು
ಆವ ದೇವರನಾವರು ಭಜಿಸುವರು । ದೇವರನವರು ಸೇರುವರು ॥
ಆವ ಭೋಗದೊಳಾದೇವರಿರ್ಪರು ತಾ । ವಾವಿಧದೊಳು ಬಾಳುವರು ॥
ಶ್ರೀವರನಡಿಯ ಸೇರಿದರಿಂತುಳಿದು ನಿತ್ಯ । ದೇವಲೋಕವನೇರಿದವರು ।
ದೇವರೊಡನೆ ತಾವುನಾಳಿವರೆಂಬುದನು ಗೀ । ತಾವಚನದೊಳು ತಿಳಿಪ್ಪುದು ॥

ಅದೆಂತನೆ :—

ಶ್ಲೋಕ॥ ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥

ಪರಹಿಂಸೆಯೆನಗದೆ ಪರಧನಕಳುಪದೆ । ಪರಪುರುಷಂಗಾನೆನದೆ ।
ಸಿರಿಯರಸನ ಪಾದಸೇವೆಗೈದವರಾ । ಪರಮಪದವನು ಸೇರುವರು ॥
ಬಾಡಿನೇಳದೆ ಚಂಡಿತನವೆಸಗದೆ ಚಿನ್ನ । ವಾಡದೆ ಜರೆದು ನುಡಿಯದೆ ।
ಕೇಡೆಣಿಸದೆ ಕೆಲರಿಗೆ ಹಂಪದಸೇವೆ । ಗೀಡಾಗಿ ಗತಿಯ ಪಡೆವುದು ॥

ಸೇರುವುದಿಹಪರಗತಿ ನಾರಾಯಣ । ನಾರಾಧನೆಯೊಳೆಲ್ಲರಿಗೆ ॥
ಆರಯ್ಯೆ ಸಕಲಸತ್ಕರ್ಮಂಗಳಚ್ಯುತ । ನಾರಾಧನೆಯೆನಿಸುವುದು ॥೮
ಇದನಾಚರಿಸುವುದಿದನರಿದಿರ್ಪುದರಿಂ । ಬುದನಾರ್ಬಿದು ಶಾಸ್ತ್ರದೊಳು ॥
ಎದೆಗೊಳುವಂತೆ ಪೇಳುವ ಸಿರಿಯರ ದಿವ್ಯ । ಪದಸೇವೆಗೈದು ಬಾಳುವುದು
ಇದನಾಚರಿಸಿದೊಡೀಫಲವಪ್ಪುದೆಂ । ಬುದು ಕಾಮ್ಯಕರ್ಮವೆನಿಪುದು ॥
ಮುಂದದರಿಂದೆ ಮುಕ್ತಿಯನೆಳಸುವ ಕೋವಿದರಿದರ ಹಂಬಲನ್ನು ಬಿಟ್ಟುಹುದು
ಆವುದನೆಸಗದಿರ್ದೊಡೆ ಪಾಪವಾಕರ್ಮ । ಭಾವಿಸೆ ನಿತ್ಯವೆನಿಪುದು ॥
ಆವ ನಿಧದೊಳಾದೊಡವಾಕರ್ಮವ । ನಾಭಾಗನಾಚರಿಸುವುದು ॥೧೧
ಈನಿಮಿತ್ತದೊಳಿದನೆಸಗುವುದೆಂಬುದು । ತಾನೈಸೆ ನೈಮಿತ್ತ ಕರ್ಮ ॥
ಆನಿಮಿತ್ತದೊಳಾಚರಿಸುವುದೆಲ್ಲವ । ನಾನೈಮಿತ್ತಕರ್ಮವೆನು ॥೧೨
ಇಂತು ಮುಕ್ತಿಯನೆಳಸುವರು ಕಾಮ್ಯವನುಳಿ । ದಂತರಂಗದ ಶುದ್ಧಿಯೊಳು
ಚಿಂತೆಗೊಳದೆ ನಿತ್ಯನೈಮಿತ್ತಕರ್ಮವ । ಸಂತಸದೊಡನೆಸಗುವುದು ॥
ಇದು ಜಗದೀಶ್ವರನಾಜ್ಞೆಯೆನಗೆ ತಾ । ನಿದನಾಚರಿಸಬೇಕೆಂದು ॥
ಮುದದೊಡನೊಡರಿಸಲಿಗೆ ಮೋಕ್ಷವಿಲ್ಲಿಂ । ಬುದನರುಪುದು ಗೀತೆಯೊಳು ॥
ಶ್ಲೋಕ ॥ ನೇಹಾಭಿಕ್ರಮನಾಶೋಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥
ಈಯುಸಕಲದೊಳಿರೆ ಶೂದ್ರರಾದೊಡವಾ । ಸ್ತ್ರೀಯರಾದೊಡಮೇನವರು ॥
ಆಯೋಗಿಗಳಡರುವ ಪರಗತಿಗೆ ತಾ । ವಾಯಾಸವಿಲ್ಲದೇರುವರು ॥೧೫

ಇಂತಪ್ಪುದಕ್ಕಂ ಗೀತಾವಚನಂ :—

ಶ್ಲೋಕ ॥ ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾನ್ತಿ ಪರಾಂ ಗತಿಂ।
ಶುಚಿಯಾಗಿರೆ ದೇವತೆಗಳು ನಲಿವರು । ಕುಚಿಯನು ಪಿತೃಗಳೊಪ್ಪುವರು
ಶುಚಿಗಿರುವುವು ಶ್ರೇಷ್ಠಫಲಂಗಳದರಿಂದೆ । ಶುಚಿಯುಪ್ಪುದೆಲ್ಲವೇಳೆಯೊಳು
ಪಿರಿಯರ ದರ್ಶನದಿಂದೆ ಪೋಪುದು ಭೀತಿ । ಪರಿದೋಡುವುದು ಪಾಪಗಳು॥
ಹರುಷದೊಳದರಿಂದೆ ಹರಿಶರಣರ ದಿವ್ಯ । ಚರಣದರ್ಶನವೆಸಗುವುದು ॥

ಪರಮವಿಶ್ವಾಸವೆರಸಿ ವಿಷ್ಣುವೈಷ್ಣವ ಚರಣತೀರ್ಥವ ಸೇವಿಸಿದೊಡೆ ॥
ಪರಿದೋಡುವುವು ಸಕಲಪಾಪಂಗಳು । ಪರಮಪದವಿ ವಶವಹುದು ॥೧೮
ತಿಳಿಯೆ ಮಾನುಷಲೋಕದಿಂದಾ ಜವನೂರ । ಬಳಿಗೈದುವ ನಡುಬಟ್ಟೆ ॥
ಉಳಿಯದೆಂಬತ್ತೆಂಟು ಸಾಸಿರಗಾವುದ । ದಳತೆಯ ನೀಟವೆನಿಪ್ಪುದು ॥
ಊರುಕೇರಿಗಳಿಲ್ಲೊರ್ವರ ನೆರವಿಲ್ಲ । ನೀರು ನೆಳಲು ತಾನಿಲ್ಲ ॥
ನೇರಿ ನಿಲುವುದೊಂದು ತಾಣವಿಲ್ಲವೆನಲು । ದಾರಿಯನೇವೇಳ್ವುದು ॥೨೦
ಪುರಿಪಂತೆ ಬೇವುರಿ ಮಳಲ ರಾಶಿಗಳಿಂದೆ । ಹರಹಿದ ಮುಳ್ಳುಗಳಿಂದೆ ॥
ಪರಿಪರಿಗೋರುಕಲ್ಲುಗಳಿಂದೆ ಪಜ್ಜೆಯ । ನಿಡುಗೊಳಿಸುವುದೊಡನೊಡನೆ ॥೨೧
ಅರವಟ್ಟಿ ದಾನವೀಯದ ಪಾಪಿಗಳೀ । ದಾರಿಯ ಪಿಡಿದು ನಡೆತಹರು ॥
ಭೂರಿದಾನಗಳಿತ್ತ ಪುಣ್ಯಪುರುಷರೀ । ದಾರಿಯೊಳೆಂದಡಿಗಳನು ॥೨೨
ತೊಡಕಿಯ ಪಾಶಿಕೆಗಳನು ಬಂಧಿಸುವ । ಕುಡಿನೀರ ತುರುಕಂಡುವೆಗಳ ॥
ಬಡಿಗಳನೊಳಕುವೆಗಳನೊಲಿದೀವುದು । ಪಡೆವುದು ಪರಗತಿಗಳನು ॥
ಅಲಸದೆ ಮುಕ್ತಿಯನಾಸೆಪಡುವರಸ್ತು । ಫಲವ ಬಯಸಿ ಬಿಲ್ಲಗೆಡದೆ ॥
ನೆಲೆಗೊಂಡ ನಿಜಧರ್ಮದ ಶೇಷವಳಿಯದೆ । ಫಲವುದಾನವ ಪಡೆವುದು ॥
ತಾಳಗೆಡೆ ಮಣಗದ ಮುನ್ನವೇ ನಾಲಗೆ । ಬೀಳದ ಮುನ್ನವೆ ಬೇಗ ॥
ಪೇಳುವುದಂಬುಜಾಕ್ಷನ ನೆಸರುಗಳನು । ಕೇಳಲರಿಯದೊಡಾಲಿಪುದು ॥
ಶ್ರೀವಿಷ್ಣುಭಕ್ತಿಯಿಂದತಿವೇಗದೊಳೆ ದುಃ । ಖಾವಳಿಯುಳಿವುದೆಂಬುದಕೆ ॥
ಭಾವಿಸೆ ಭಾಗವತದೊಳೊಂದು ಕಥೆಯು । ದಾತ್ತ್ಯವಿಧವನು ಬಣ್ಣಿಸೆನು ॥
ತಕ್ಷಕನಿಂದ ತನಗೆಯುಳಿವಪ್ಪುದಿ । ನ್ನಕ್ಷಯಗತಿಗೊಂಡನೆಂದು ॥
ಅಕ್ಷಣದೊಳು ಶುಕಮುನಿಯಡಿಗೆರಗಿ ಪ । ರೀಕ್ಷಿತನಿಂತು ಕೇಳಿದನು ॥
ನಾವದಸಿದ ಸಮಯದೊಳು ಸದ್ಗತಿಗಾಗಿ । ಯಾವುದನೊಲಿದಾಲಿಪುದು ॥
ಆವುದನೋದುವುದಾವುದನೊಡರ್ಚುವು । ದಾವುದನರಿದೆ ನೆನೆವುದು ॥
ಇಂತು ನುಡಿದ ಪರೀಕ್ಷಿತರಾಯಗೆ ಬಗೆ । ಸಂತಸವನು ಸಮನಿಸುತೆ ॥
ಶಾಂತ ತಿಳಿದಖಿಲಶಾಸ್ತ್ರದ ತತ್ವವನೋ । ರಂತರಂಗದ ನಾಯೋಗಿ ॥೨೯

ಅರಸ ಕೇಳಾಪತ್ತುಡಿಸಿದ ವೇಳೆಗೆ । ದಃಕರ್ಮಗಳನೆ ಕೇಳುವುದು ॥
ಹರಿನಾಮಮಂಗಳನೊಲಿದೋದುವುದು ಶ್ರೀ ಹರಿಪದಂಗಳನೆ ನೆನೆವುದು ॥
ಹರಿಪಾದಪದ್ಮದ ಸೇವೆಯಿಲ್ಲದೆ ಸಲು । ವರಸವಿದ್ಯೆಯೊಡೆ ಫಲವೇನು ॥
ಮುರವೈರಿಯ ನೆನೆದೊಂದು ಮುಹೂರ್ತಕೆ । ಪರಗತಿ ಬಯಸಿದಂತಹುದು ॥
ಅಂದು ಖಟ್ವಾಂಗನೆಂಬರಸು ತಾನಳಿವುದ । ಕೊಂಡು ಮುಹೂರ್ತದೊಳರಿತು
ಕುಂದದೆ ಭಜಿಸಿ ಮುಕುಂದನ ಚರಣವ । ಸಂದನು ಪರಮಪದವನು ॥
ಏಳಿಲೆ ಭರತವಂಶಾಗ್ರಣೀ ಬೇಗದೊ ಕೇಳು ಭಜಿಸು ಸಾಧನವ ॥
ಏಳು ದಿವಸದಾಯುವಿರ್ದುದು ನಿನಗೆ । ಸ್ವಾಳಿದೀಕ್ಷೆಯನೀತಕಿದಕೆ
ಈ ವಿಧದೊಳು ಪೇಳ್ದ ಶುಕಮುನಿಗೆ ಪ । ರಾಪನತಿಯನಾಚರಿಸಿ ॥
ಭಾವಶುದ್ಧಿಯೊಳು ಭಾಗವತನ ಕೇಳಿಯುಂ । ದಾವಿಷ್ಣುಪದವನೈದಿದನು ॥
ಆದ್ಯೆ ವಿಷ್ಣುಪುರಾಣರಾಮಾಯಣ । ಭಾರತಭಾಗವತಗಳ ॥
ಆರು ಹಿರಿಯರಿಂದಾಲಿಸುವರವರಿಗೆ । ಸೇರುವುವೆಲ್ಲ ಸಿದ್ಧಿಗಳು ॥೩೫
ಇದಕೆ ಸಮ್ಮತಿವಚನಂಗಳು ಪಲವುಂ । ಟದರೊಳೊಂದೆರಡನೋದುವೆನು ॥
ಅದರರ್ಥಂಗಳನೆಲ್ಲರುಮಾರಿಸುತಿ । ಪದರಿತ ನೀವೊಳು ಬಣ್ಣಿಸೆನು ॥೩೬

ಶ್ರೀಭಾಗವತೇ ಪ್ರಥಮಸ್ಕಂಧೇ. ಪ್ರಥಮೋಽಧ್ಯಾಯೇ—

ಶ್ಲೋ॥ಧರ್ಮಃಪ್ರೋಜ್ಝಿತಕೈತವೋಽತ್ರ ಪರಮೋ ನಿರ್ಮತ್ಸರಾಣಾಂ ಸತಾಂ ।
ವೇದ್ಯಂ ವಾಸ್ತವಮತ್ರ ವಸ್ತು ಶಿವದಂ ತಾಪತ್ರಯೋನ್ಮೂಲನಂ॥
ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂ ವಾ ಪರೈರೀಶ್ವರಃ ।
ಸದ್ಯೋಹೃದ್ಯವರುಧ್ಯತೇಽತ್ರ ಕೃತಿಭಿಃಶುಶ್ರೂಷುಭಿಸ್ತತ್ಕ್ಷಣಾತ್

ವೇದವ್ಯಾಸನಣುಗನಾಶುಕಮುನಿ । ಯಾದರದಿಂದನುಗ್ಗದ ॥
ವೇದತತ್ತ್ವಾರ್ಥವೆನಿಸಿದ ಭಾಗವತದ । ನಾದರದಿಂದಾಲಿಪುದು ॥೩೭
ಮದಮತ್ಸರಂಗಳಹಗಿ ಮಹಾತ್ಮರು । ಸದಮಳಧರ್ಮವಿದರೊಳು ॥
ಇದು ತಾಪತ್ರಯಹರವೆನಿಸಲಿಸ ರಿದೆಯೊಳು ಹರಿ ನೆಲಸುವನು ॥೩೮

ಶ್ರೀವಿಷ್ಣುಪುರಾಣೇ ಷಷ್ಠೇ ಅಂಶೇ ಚರಮೋ ಅಧ್ಯಾಯೇ—

ಶ್ಲೋ॥ ಪುರಾಣಂ ವೈಷ್ಣವಂ ಚೈತತ್ಸರ್ವಕಿಲ್ಬಿಷನಾಶನಮ್ ।
ವಿಶಿಷ್ಟಂ ಸರ್ವಶಾಸ್ತ್ರೇಭ್ಯಃ ಪುರುಷಾರ್ಥೋಪಪಾದಕಮ್ ॥
ಯತ್ರಾದೌ ಭಗವಾಂಶ್ಚರಾಚರಗುರುರ್ಮಧ್ಯೇ ತಥಾಂತೇ ಚ ಸಃ ।
ಬ್ರಹ್ಮಜ್ಞಾನಮಯೋಽಚ್ಯುತೋಽಖಿಲಜಗನ್ಮಧ್ಯಾಂತಸರ್ಗಪ್ರಭುಃ ।
ತಚ್ಛೃಣ್ವನ್ಪುರುಷಃ ಪವಿತ್ರಪರಮಂ ಭಕ್ತ್ಯಾ ಪಠನ್ಧಾರಯನ್
ಪ್ರಾಪ್ನೋತ್ಯಸ್ತಿ ನ ತತ್ಸಮಸ್ತಭುವನೇಷ್ವೇಕಾಂತಸಿದ್ಧಿರ್ಹರಿಃ ॥

ಇದನು ಶ್ರೀವಿಷ್ಣುಪುರಾಣವೆಂಬರು ನು ತ್ತಿದರಿಂದೆ ಪಾಪ ಪರಿಹೃತವು ।
ಇದು ಸರ್ವಶಾಸ್ತ್ರದೊಳುತ್ತಮವೆನಿಸುವುದು । ಇದು ಸರ್ವಫಲವ ಸಾಧಿಪುದು ॥
ಆದಿಮಧ್ಯಾಂತರಹಿತನಚ್ಯುತನಜ । ರಾದಿಮಧ್ಯಾಂತದೊಳಿಹನು ॥
ಈ ದಿವ್ಯ ವಿಷ್ಣುಪುರಾಣವ ಕೇಳುವ । ರಾದೇವನನೊಲಿಯೆ ಸೇರುವರು ॥೪೦

ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚರಮಸರ್ಗೇ—

ಶ್ಲೋ॥ ರಾಮಾಯಣಮಿದಂ ಕೃತ್ಸ್ನಂ ಶೃಣ್ವತಃ ಪಠತಸ್ಸದಾ ।
ಪ್ರೀಯತೇ ಸತತಂ ರಾಮಸ್ಸ ಹಿ ವಿಷ್ಣುಸ್ಸನಾತನಃ ॥
ಪಾಪಾನ್ಯಪಿ ಚ ಯಃ ಕೃತ್ವಾ ಅಹನ್ಯಹನಿ ಮಾನವಃ ।
ಪಠತ್ಯೇಕಮಪಿ ಶ್ಲೋಕಂ ಪಾಪಾತ್ಸಃ ಪರಿಮುಚ್ಯತೇ ॥

ಈ ರಾಮಾಯಣವನ್ನನವರತ ಪಾಡುತ್ತಿದು ಕೇಳಿಯೋದುವವನು ॥
ಶ್ರೀರಾಮಚಂದ್ರನೊಲಿದು ಸಲಹುವನಾದಿ । ನಾರಾಯಣನವನ್ಯನೆ ॥೪೧
ಒಂದು ಸರ್ಗವನೊಂದು ಪದ್ಯವನಾದೊಡೆ ಒಂದು ಪಾದವನೋದಿದೊಡೆ
ಅಂದಂದಿನೊಳೆಸಗಿದ ಪಾಪಂಗಳಂ । ದಂದಿಗೆ ಪರಿಹರಿಸುವುವು ॥೪೨

ಶ್ರೀಮಹಾಭಾರತೇ ಸ್ವರ್ಗಾರೋಹಣಪರ್ವಣಿ ಚರಮೋಽಧ್ಯಾಯೇ—

ಶ್ಲೋ॥ ಕಾರ್ಷ್ಣಂ ವೇದಮಿಮಂ ಸರ್ವಂ ಶೃಣುಯಾದ್ಯಸ್ಸಮಾಹಿತಃ ।
ಬ್ರಹ್ಮಹತ್ಯಾಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ ॥
ಆಹ್ನಾ ಯದೇನಃ ಕುರುತೇ ಇಂದ್ರಿಯೈರ್ಮನಸಾ ಗಿರಾ ।
ಮಹಾಭಾರತಮಾಖ್ಯಾಯ ಸರ್ವಪಾಪೈಃ ಪ್ರಮುಚ್ಯತೇ ॥

ವೇದವ್ಯಾಸನೊಲಿದು ಪೇಳಿದ ಪೊಸ । ವೇದವೆನಿಪ ಭಾರತವನು ॥
ಓದಿದ ಪಾತ್ರದೊಳಿಪ್ಪುದು ಬ್ರಹ್ಮಹ । ತ್ಯಾದಿಮಹಾಪಾತಕಗಳು ॥
ನಡೆನುಡಿನೆನೆಹುಗಳಿಂದದದಿಸೊ । ಕೊಡಂಬಡುವ್ವ ಗ್ರಹಾಪಗಳು ॥
ಅಡಗುವ್ವವಂದಂದಿಗೆ ಭಾರತದೊಂದು ನುಡಿಯ ನೋಡಿದ ಪಾತ್ರದೊಳು
ಇಂತು ನಡೆವ ನಿತ್ಯನೈಮಿತ್ತಿಕ ಕರ್ಮ ಶ್ರೀ । ಕಾಂತನೊಳಿಗವೆಂದು ತಿಳಿದು॥
ಸಂತಸದಿಂ ಮಾಡುವ ಸತಿಯರಿಗೆ । ಚಿಂತಿತಫಲ ಸೇರುವುದು ॥೪೫
ಗುರುಮುಖದಿಂದಡೆ ರಹಸ್ಯತ್ರಯಾರ್ಥದ । ತಿರುಳನಂತು ತಿಳಿವುದೊಳು ॥
ಪರಿಹರಿಪುದು ಮಂತ್ರಾಂತರದೇವತಾ । ಸ್ಮೃತಿಸಾಧನಾಂತರಂಗಳನು ॥
ಪಂಚಸಂಸ್ಕಾರಂಗಳನು ಪಡೆದೊಡೆರ್ಮ । ಪಂಚಕತತ್ತ್ವಮನರಿತು ॥
ಪಂಚಕಾಲಿಕಧರ್ಮವನೆಸಗುತ ಸ । ತ್ಸಂಚಲಚಿತ್ತದೊಳಿಹುದು ॥೪೬
ಇದು ಮಂತ್ರವಿದು ದೇವತೆಯಿದು ನಡತೆಯಿಂ । ಬುದನರಿತಂತರಂಗದೊಳು
ಮುದದೊಡನಿರ್ಪ ಮುಮುಕ್ಷುಗಳಿಗೆ ಮುಕ್ತಿ । ಪದವಿ ಕೈವಶವಾಗಿಹುದು

---

ಪತಿಯೊಲವಳ್ಳಿ ಸತಿಯರೊಳು ನಡೆಯಾಯ । ಪತಿಪಾದಭಕ್ತಿಯುಳ್ಳ ॥
ಸತಿಯರ ಪೆಸ್ಸೆಮೆ ಸಕಲಜಗದೊಳು ನಿಲ್ಕೆ । ಸತಿಧರ್ಮ ಶಾಶ್ವತವಾಕ್ಕೆ ॥
ಬುದ್ಧೀಶರು ಧಾರ್ಮಿಕರಕ್ಕೆ ಜಗದೊಳು । ಶಾಸ್ತ್ರದ ಪದುಳದೊಳ್ ಕೇರ್ ॥
ಒಳ್ಪರೊರ್ವರೊಳೊಡನೆರೆಗೆ ದಂಪತಿಗಳು । ಸರ್ವದ ಸೌಖ್ಯದೊಳ್ ಕೇರ್ ॥
ಶ್ರೀವೇದಮಾರ್ಗಪ್ರತಿಷ್ಠಾಪನಾಚಾರ್ಯ । ನಾವ್ಯಸ್ತ್ಯಪ ಧರ್ಮಮೂರ್ತಿ
ಆವನುಭಯವೇದಾಂತಾಚಾರ್ಯನೆಂ । ಬೀವಿಧದೇಶಿಕವೆತ್ತಿಹನು ॥೪೭
ಶ್ರೀಶಂಕರವೇದವ್ಯಾಸವಾಲ್ಮೀಕಿಪ । ದಾಶರಥನು ಪಡೆಗೊಂಡು ॥
ಶ್ರೀಶಪದಾಂಬುಜಭಕ್ತಿತತ್ತ್ವಜ್ಞಾನ । ದಾಶ್ರಯೆನಿಸಿ ರಾಜಿಪನು ॥೪೮
ಈ ಮಹಿಮೆಯೊಳೆಸೆವಳಸಿಂಗರಾಚಾರ್ಯನು । ವ್ಯಾಮಂತ್ರಪಾತ್ರಭವಕೆ ।
ಭೂಮಿಯೆನಿಸಿ ನೆಗಳ್ದ ಕೈಸೆಯಿಂದಾ । ಗ ಮಹಾಕೃತಿ ಪೇಳ್ದೆನು ॥
ಧರ್ಮರಹಸ್ಯವನರಿತರ್ನೆಂಬೊಂದು । ಧರ್ಮಯೊಳುಸಿರ್ವವಳಲ್ಲ ॥

ಧರ್ಮದ ನೆಲಹು ಸುರಿಯುವಂತೆ ಕೃತಿಯಾಗಿ । ನಿರ್ಮಿಸಿ ನಲಿಗೊಳಿಸಿದೆನು ।
ಭಾವಿಸಿ ಬಿಟ್ಟಗಲಿತ ಪೆರ್ಮೆಯೆನಗಿಲ್ಲ । ದೇವತೆಗಳ ವರವುಲ್ಲ ॥
ಆವುದಧೀಶವಸಿತ್ತರಾರ್ಯರು ತಸ । ನಾವಿಧದೊಳು ಪೇಳಿದೆನು ॥
ಒಲಿವಿಡಿದುನಾವ್ಹೋದದಂತೆನೆನವ್ಯ । ಶೀಲವನೆಂದು ಕಳೆಯದಿ ॥
ಬಾಳಿ ಬಲ್ಲಿಸಿ ಬಳಲಿದಳೆಂಬ ಮರುಕದಿಂ । ದಾಲಿಪುದಖಿಳಸತಿಯರು ॥
ಮಳೆಯುಕ್ಕೆ ಕಾಲಕಾಲಕೆ ದೇವಧೆಂಲವಿಂದೆ । ಬೆಳೆಗ್ಹೆಗೆ ಪೆರ್ಚಿಗೆಯುಕ್ಕೆ ॥
ಇಳೆಯೊಳು ಪತಿವ್ರತಾಧರ್ಮಸಾಧನದೊಡ । ನೊಳುವೆಣ್ಗಳೊಪ್ಪುದೊರ್ಕೆ ॥
ಶ್ರೀರಂಗಪಟ್ಟಣದೊಳು ಸಿರಿ ನೆಲಸಿರ್ಕೆ । ಭೂರಿಸ್ವೈಭವ ಪುದಿದಿರ್ಕೆ ।
ಶ್ರೀ ರಂಗಧಾಮನ ದಿವ್ಯಯಾತ್ರೋತ್ಸವ । ಸಾರಾಥನೆ ನಿಂಗಿಲಕ್ಕೆ ॥೬೮
ಕನ್ನಡನಾಡೊಳು ಕಲಿಯುಗ ಪುಗದಿರ್ಕೆ । ಕನ್ನಡಿಗರು ಬಾಳ್ವರಕ್ಕೆ ॥
ಉನ್ನತಿವಡೆಗೆಯುಂಗದ ದೇಗುಲಗಳು । ಸಮೃತಿವಡೆಗೆ ಸತ್ರಗಳು ॥೬೯
ಈ ವಸುಧೆಯು ಧರ್ಮದೊಳು ಪಾಲಿಸುಗೆ ಚಿಕ್ಕದೇವರಾಜೇಂದ್ರಚಂದ್ರಮನು
ದೇವ ಗೋ ವಿಪ್ರಸಂತತಿ ಸಂತಸವೊರ್ಕೆ । ಗೋವಿಂದದಾನಂದವಕ್ಕೆ ॥

ಚೆನ್ನಿಗ ಚಿಕದೇವರಾಯನ ಸಂಚಿಯು ।
ಹೊನ್ನಮ್ಮನುಸಿರ್ದ ಕಬ್ಬದೊಳು ।
ಸನ್ನುತಿವಡೆದೊಪ್ಪಿತೊಂಬತ್ತನೆಯ ಸಂಧಿ ।
ಸನ್ನುತಗುಣಸಂಬಂಧಿ ॥೬೧

ಹದಿಬದೆಯ ಧರ್ಮಂ ಸಂಪೂರ್ಣಂ.

# ಹಳಗನ್ನಡದ ಕಠಿನ ಪದಗಳ ಅರ್ಥ

(ಸಂಧಿಯಲ್ಲಿರುವ ಪದಗಳು ಯಥಾಕ್ರಮವಾಗಿ ಆರಿಸಲ್ಪಟ್ಟಿವೆ)

## ಪೀಠಿಕಾ ಸಂಧಿ

ನೆಲೆವೀಡು—ನೆಲೆಯಾದ ಬೀಡು-ಮನೆ; ಸ್ಥಿರವಾದ ವಾಸಸ್ಥಾನ. ಸಿರಿ-ಐಶ್ವರ್ಯ. ಧುರ-ಯುದ್ಧ. ಅಡಪ-ಸಂಚಿ ಎಂದರೆ ಅಡಕೆ, ಎಲೆ, ಸುಣ್ಣ ಇಟ್ಟಿರುವ ಸಂಚಳಿಗೆ. ಕಾಳಂಜಿ-ಪಡಿಗ, ತಂಬುಲವನ್ನು ಹಾಕಿಕೊಳ್ಳುವಪಾತ್ರೆ. ಕುಂಚ-ಕುಚ್ಚು, ಚಾಮರ. ಬಿಂಕಗಾತಿ-ಬೆಡಗುಗಾತಿ; ಬಿಂಕ-ಗರ್ವ. ಗಾಡಿಕಾತಿ-ಸೌಂದರ್ಯದಿಂದ ಮೆರೆಯುವವಳು. ಪೆಣ್ಬಾರಿಬು-ಹೆಂಗಸಿನ ರೂಪ, ಅಥವಾ ವೇಷ; ವಂಬು-ವೇಷ. ಪಡಿ-ಸದೃಶ, ಪ್ರತಿ. ಪದಣಿಗೆ-ಸೇರಿಸುವ ರೀತಿ, ಪರಿಪಾಟಿ. ಪೊಂಗರು-ಕಾಂತಿ. ಅಂಗವಿಸೆ-ಸೇರಲು. ಓರಂತೆ—ಓರ್+ಅಂತೆ, ಏಕರೀತಿಯಾಗಿ, ಕ್ರಮವಾಗಿ. ನೆರವು-ಸಹಾಯ. ಕಬ್ಬೊನ್ನ-ಕಬ್ಬಿಯ ಹೊನ್ನ, (ಹೊನ್ನ-ಚಿನ್ನ) ಹೊಸಗನ್ನಡ ಕಬ್ಬಿಣ. ಗಬ್ಬ-ಕಬ್ಬ, ಕಾವ್ಯ. ಸಂಚಿಯ ಹೊನ್ನ-ತಾಂಬೂಲಕರಂಡವನ್ನು ಹಿಡಿದು ಕೊಂಡಿರುತ್ತ, ಅದನ್ನು ಸಮಯವರಿತು ಸಜ್ಜುಗೊಳಿಸುವ ಊಳಿಗವನ್ನು ಮಾಡುವ ಹೊನ್ನ ಎಂಬ ಹೆಸರುಳ್ಳವಳು. ಲಂಬಣ-ನೇತಾಡುವ ಮುತ್ತಿನ ಸರ. ತನಿಸೊಕ್ಕು—ತನಿದು+ಸೊಕ್ಕು, ಪೂರ್ಣವಾದ ಹೆಚ್ಚಾದ, ಮಿತಿಮೀರಿದ ಸೊಕ್ಕು. ಕಡುಕೂರ್ಮೆ—ಕಡಿದು+ಕೂರ್ಮೆ (ಪ್ರೀತಿ), ಹೆಚ್ಚಿನ ಪ್ರೀತಿ, ವಿಶ್ವಾಸ. ಬಣ್ಣನೆ-ವರ್ಣನೆ. ಬವಣ-ತಿರ್ಗುವ ಭ್ರಮಣ, ಸುತ್ತುವಿಕೆ. ಪದಗೆಟ್ಟು-ಹದಗೆಟ್ಟು. ಬಯಲು-ಕೆಲಸಕ್ಕೆ ಬಾರದ (ವರ್ಣನೆ). ಪತಿಬದೆ-ತಪ್ಪದ ಪತಿವ್ರತೆ. ತನಿಗಂಪು—ತನಿದು (ಪರಿಪಕ್ವವಾದ)+ಕಂಪು (ವಾಸನೆ); ಇಲ್ಲಿ ಸಾರವಾದ ಅಭಿಪ್ರಾಯ. ಎಳವಾತು-ಸುಲಭವಾದ ಮಾತು. ಸಾಹಿತ್ಯ-ಕಾವ್ಯ. ಐದನೆಯ ವೇದ-ಮಹಾಭಾರತ. ಎಳವೆ-ಬಾಲ್ಯ. ಬಳೆವುಗ್ಗೈದು-ವಶವಾಗಿಕೊಂಡು. ಮೂಢ

ಲಿಸಿ-ಎದುರುಬಿದ್ದು, ಹೀಯಾಳಿಸಿ. ಮೋಹಿ-ಹಟ. ನೊಸಲ್ಗಾಪಿ-ಧೈರ್ಯವುಳ್ಳ, ಚೆಂಗಸು, ಎದುರುಬೀಳುವವಳು. ನಿಗೆಷಹ-ಡಾಸ್ಯ. ತಿರುಳು-ಸಾರ.

## ಎರಡನೆಯ ಸಂಧಿ

ಇಂಗೊಳಲ= (ಇನಿತು + ಕೋಲ—ಕಬ್ಬನ್ನು) ಬಿಲ್ಲಾಗಿವುಳ್ಳ ಮನ್ಮಥ. ಇಂಗದಿರ=ಇನಿತು+ಕದಿರು (ಕಿರಣವನ್ನು ಉಳ್ಳ) ಶೀತಕಿರಣನಾದ ಚಂದ್ರನು. ಇಂಗಡಲು=ಇನಿತು+ಕಡಲು, ಹಾಲ್ಗಡಲು. ಆಣತಿ-ಅಪ್ಪಣೆ. ಎಲರು-ಗಾಳಿ, ವಾಯು. ಎಡರು-ಕಷ್ಟ, ದೋಷ. ಪಳಿಕೆನು-ಹೋಗಲಾಡಿಸುವೆನು. ಸ್ಮೃತಿ-ಮಂತ್ರ. ಕೆಡುಪಿಡಿದು-ನಿರ್ಧರಿಸಿ ತಿಳಿದು. ಇಂಬು-ಸ್ಥಾನ, ಅವಕಾಶ. ಕುರುಹು-ಗುರುತು, ರೂಪ. ಅಪಾಂಸುಲೆಯರು (ಸಂಸ್ಕೃತ)=ಪಾಂಸುಲೆಯರು (ಕೆಟ್ಟ ನಡತೆಯುಳ್ಳ ಸ್ತ್ರೀಯರು, ಸ್ವೈರಿಣಿಗಳು) ಅಲ್ಲದ ಸ್ತ್ರೀಯರು ಎಂದರೆ ಪತಿವ್ರತಾಸ್ತ್ರೀಯರು. ಪಾಸಟಿ-ಸರಿಸಮ. ದೊರೆಯು-ಸರಿಯು. ಮೋಡಿ-ಹಂಗು, ಹೆಚ್ಚುಗೆ. ಪಾಟಿ-ಸದೃಶ. ಬಿಳುಪಕ್ಕಿ-ಹಾಲೇಹಕ್ಕಿ. ಕೂರ-ಕರ್ಪೂರ. ಕೊತರ್ಗ-ದೃಷ್ಟಿಸಿ. ತಳುವದೆ-ಶೀಘ್ರವಾಗಿ, ಸಾವಕಾಶವಾಡದೆ. ಪೊತು-ಪರಿಪಾಲಿಸಿ. ಪಡಿಬರಿಸಿ-ಪ್ರತಿಭಟಿಸಿ, ಎದುರುಬಿದ್ದು. ಪೋರು-ಹೋರಾಡು, ಯುದ್ಧಮಾಡು.

## ಮೂರನೆಯ ಸಂಧಿ

ಅಳವಳಿಯದೆ-ಶಕ್ತಿಗುಂದದೆ; ಅಳವು-ಶಕ್ತಿ, ಅಳತೆ. ಬಣ್ಣಣೆ-ವರ್ಣನೆ, ಯಶಸ್ಸು. ನಲವು-ಸಂತೋಷ. ಮೊನೆಗೊಳದೆ-ಸುಮ್ಮನಾಗದೆ. ನೇಹ-ಸ್ನೇಹ. ಕಲಂಬಿ-ತ್ವರೆಪಟ್ಟು, ಉತ್ಸಾಹದಿಂದ. ಅನುವನ್ನು-ಬೇಕಾದ. ಉಬ್ಬುಗೊಂಡು-ಉತ್ಸಾಹದಿಂದ ಕೂಡಿ. ಬೇಸಿ-ರೀತಿ, ಶೃಂಗಾರ. ಭಾವನ-ಮನಸ್ಸನ್ನು. ಕಬ್ಬಸುರ-ಅತಿವೇಗ. ಗಾಳುಗೆಡದೆ-ಗಾಬರಿಪಡದೆ. ಗನ್ನಗಡುಕ-ಮರೆಮೋಸ. ಹನ್ನಸ-ಕೇಟಲಿ ಜಗಳ, ಬರೀ ಜಗಳ. ಮೊನೆ ಬಾಕು-ಮನಸ್ಸನ್ನು ಸೆಳೆಯುವ ನಾಟಕ. ಗಾರುಮಾಡೆಯದೆ-ಮನಸ್ಸು

ನಲ್ಲಿ ನೆಲಿಂದುಕೊಳ್ಳುದೆ. ಬಸೆ-ಹಸೆ. ಕೊನೆಗೆಸಂ-ಬಂಟುಮಾಡು. ಕವೆ ಕೋಡು ಕಾಣಿಸದಂತೆ-ಮರದ ಕವೆ ಕೊಂಬೆಗಳು ಕಾಣಿಸದ ಹಾಗೆ ಎಂದರೆ, ಇಲ್ಲಿ ಕೊಡಕಂಕಾಣುವಂತೆ ಹೆಚ್ಚಿಸಿದೆ. ನೆಗ್ಗು-ಕುಂದಿಗೆ, ತಗ್ಗು. ಅರಿ-ಗರ್ಜಿಸಿ. ಬೀಯು-ತನ್ನ. ವ್ಯರ್ಥ. ಗಲಿಗುವಡಿಸಿದೆ-ಒದರಿಕೊಳ್ಳುದೆ. ಅನುಗೆಟ್ಟು-ಹದತಪ್ಪಿ, ಮಿತಿಮೀರಿ. ಹಳಿಸಿ-ಹಾಸ್ಯಮಾಡಿ. ಅರೆಯು-ನಿರೀಕ್ಷಿಸಿದರೆ, ವಿಚಾರಮಾಡಿದರೆ. ಚಾಂದಣಿಯದೆ-ಒಂದುಕಡೆಯಲ್ಲಿಯೂ ನಿಲ್ಲದೆ, ಮೋಸಮಾಡಲು ಯತ್ನಿಸದೆ. ಅಲೆಗೊಳದೆ-ಸುತ್ತದೆ, ಅತ್ತಿತ್ತ ಹೋಗದೆ. ಕೊನಬು-ಸ್ಥೈರ್ಯ, ಹಗೆತನ. ಕೂರ್ಮೆ-ಪ್ರೀತಿ, ಇಷ್ಟ. ನೆರವು-ಬಲವು, ಬೆಂಬಲ. ಕೆಳೆ-ಸ್ನೇಹ.

## ನಾಲ್ಕನೆಯ ಸಂಧಿ

ಮರೆಹೊಕ್ಕಿಯಲ್ಲದ-ಕೊರತೆಗಂಡು ನಿವಾರಿಸಲು ಬೇರೆ ಕಡೆ ಹೋಗುವ ಭಾರವಿಲ್ಲದ, ಎಂದರೆ ಅಲ್ಲಿಯೇ ಸ್ಥಿರವಾಗಿ ನಿಂತು ಕೃಪಿಹೊಂದುವ. ಆಂಡಲೆಯದೆ-ಹೆಮ್ಮೆ ತೋರಿಸದೆ, ಪೀಡಿಸದೆ. ಅಳಲದೆ-ದುಃಖಿಸದೆ. ತಲೆಗುತ್ತಿ-ತಲೆತಗ್ಗಿಸಿಕೊಂಡು, ನಮ್ರವಾಗಿ. ಹಾಡು-ಹಿಂಸೆ. ಹಾಡುವಡಿಸರು-ತೊಂದರೆಪಡಿಸುವರು. ಚಿಂತ್ತನಾದವೆ-ಕ್ಷುದ್ರಬೇಳವೆ. ಈಡುಜೋಡು-ಸದೃಶ ಸಮಾನ. ಮಾನಗೊಳದೆ-ಹೆಚ್ಚುಕಡಿಮೆಯೆಂದು ಅಳೆಯದೆ. ಹದ-ತಾನು ಯಾವ ಸ್ಥಿತಿಯಲ್ಲಿರಬೇಕೋ ಆ ಸ್ಥಿತಿ; ಹದವಳಿಯದೆ-ಎಲ್ಲೆ ಮೀರಿ ಹೋಗದೆ. ಪಡಿಯೆಣೆ-ಸಮನಾಗುವವನು. ಕುತ್ತ-ತಪ್ಪು, ದೋಷ. ಕೆತ್ತಿಗೆರು-ಬಂಧುಗಳು. ಪತ್ತುಗೊಳಿಸಿ-ಸಂಬಂಧಪಡಿಸಿ. ಸೇರುವಂತೆ ಮಾಡಿ. ನಾವೆ-ದೋಣಿ, ಹಡಗು. ಹಸಿ-ಹದ, ಸರಿಯಾಗಿರುವಿಕೆ. ಓರಗೆಗೆಳತಿ-ಸಮಾನ ಸ್ಥಿತಿಯಲ್ಲಿರುವ ಸಖಿಯರು. ಮಿಸಿಸುವುದು-ಮರೆಯುವುದು, ಸ್ನಾನಮಾಡಿಸುವುದು. ಕರ್ಕಶ-ಕರ್ಕಶ, ಕ್ರೂರತನ. ಕಸುಮಕ್ಕಳು-ಕೂಸುಗಳು. ಪೆರದೆಗೆ-ಹಿಂದೆಗೆ. ಬೆಸುವಾತು-ಕಠಿಣವಾದ ಮಾತು. ನೊಸೆಗಾತಿ-ಹಟವಾದಿ, ಜಗಳಗಂಟಿ. ಮುಸಂಡಿ-ಸುರಟಿ. ನೇರಿಲಸದೆ-

ನಿರ್ಲಕ್ಷಿಸದೆ, ಮಾರಕ್ಕೆ ತಳ್ಳದೆ, ತಿರಸ್ಕರಿಸದೆ. ಕೇಣಗೊಂಡವರ್-(ಕೇಣ-ಹೊಟ್ಟೆಕಿಚ್ಚು) ಹೊಟ್ಟೆಕಿಚ್ಚು ಪಡುವವರು. ಊಣೆಯ-ಶಬ್ದವು ಶೂನ್ಯ, ಕೊರತೆ-ಕಡಿಮೆ. ಮಡಿವಳಿತಿ-ಅಗಸಗಿತ್ತಿ. ಕಣಿಕಿ-ಕಣಿಯನ್ನು ಹೇಳು ವವಳು. ಜಂತುವುಗಳು-ಹಾಲು, ಮೊಸರು, ಬೆಣ್ಣೆ ಇವುಗಳಿಗಾಗಿ ಸಾಕುವ ಪ್ರಾಣಿಗಳು. ಎಳವೆ-ಬಾಲ್ಯ.

## ಐದನೆಯ ಸಂಧಿ

ಆಮರ್ದನ-ಶಬ್ದವು ಅನ್ವಯಿತ. ಇಂಬುಗೊಳಿಸಿದ-ಸ್ಥಳಕೊಟ್ಟ, ಇಂಬು-ಸ್ಥಳ, ಮಂಕೊಂಡರ್ಥ ಲಜ್ಜೆಯಾದ, ಇಷ್ಟವಾದ. ಕೂರ್ತು-ಪ್ರೀತಿಸಿ. ಬೀಗಗಳೆವರು-ಹೀಯಾಳಿಸುವರು, ಚೇಷ್ಟೆಮಾಡುವರು. ಗಾವಿಲ-ಶಬ್ದವು ಗ್ರಾಮೀಣ, ಹಳ್ಳಿಯವ, ವಿನಯ ತಿಳಿಯದ ಮಂದ್ರ. ಪಸುಗೆ-ಭಾಗ. ಹೊಣೆ-ಹೊಡೆದಾಡಿ. ಪುರುಳು-ಅಸ್ತು. ಸವುಳುಗೊಳಿಸಿ-ಛಿದ್ರ ಪಡಿಸಿ. ಪಸಧನಗಳ-ವಸ್ತ್ರ ಒಡವೆ ಮುಂತಾದುವು; ಶಬ್ದವು ಪ್ರಸಾಧನ. ಪತ್ತುಗೆ-ಸಂಬಂಧ. ನಡೆವೆಣ-ನಡೆಯುವ ಹೆಣ, ಜೀವದಿಂದಿರುವ ಹೆಣ. ಕಡುಗೂರ್ಮೆ=ಕಡಿದು+ಕೂರ್ಮೆ, ಹೆಚ್ಚಾದ ಪ್ರೀತಿ, ಅಭಿಮಾನ. ಕಿಟ್ಟಿದ-ಕೈಗೆ ಸಿಕ್ಕಿದ. ಪಾರಣೆ-ಉಪವಾಸದ ಮರುದಿವಸದ ಊಟ. ಪನ್ನ-ಹಬ್ಬ. ಮಂದಿವಾಳ-ಜನಗಳ ಬಾಳಿಕೆ. ನೊಸಲಿನಾಳು-ಕಟುಕ ಮಾತು, ಮರ್ಮವನ್ನು ಕಂತುವ ಮಾತು. ಕೊನರಿಡಿಸು-ಹಬ್ಬುವಂತೆ ಮಾಡು, ಬೆಳೆಸು. ಮೊಗಸಂಟಿಸಿ-ಎದುರಿಗೆ ನಿಂತು ಬಹಳ ಹೇಳಿದೆ. ನೊಣ್ಣ ನಸಗು-ಮೌನವಾಗಿರು, ಮಾತಾಡದಿರು. ಪೆರ್ಚ್ಚಿಸಿರಿ=ಪಿರಿದು+ಸಿರಿ, ಹೆಚ್ಚಾದ ಸಂಪತ್ತು. ಹಿಗ್ಗು-ಹಿಗ್ಗು. ಸೋರೆಕಾರೆಯ-ಎಷ್ಟೆಂಯ ಕೊನೆಯನ್ನು. ಸೇರುವೆ-ಪೆರ್ಮೆ, ಹೆಮ್ಮೆ. ಬಣ್ಣ ಬಂಗಾರ-ಬಣ್ಣ-ಸೀರೆ, ಬಂಗಾರ-ಒಡವೆ. ಏರೆತೋರಿ-ಭೇದ, ಭಿನ್ನಭಾವ.

## ಆರನೆಯ ಸಂಧಿ

ಪರವೆಳ್ಳನಿತಿಲ್ಲದೆ-ಪ್ರೀತಿಸಿದರೆ ಪ್ರೀತಿಸುವುದು. ಇಲ್ಲವೆಂದರೆ ಇಲ್ಲ

ಎಂಬ ರೀತಿಯಲ್ಲಿರದೆ, ಭೇದವಿಲ್ಲದ ಹಾಗೆ. ಒಳತೋಟಿ-ಅಂತಃಕಲಹ. ಬೂತಾಟ-ನಟನೆ. ಕೋಟಲೆ-ಚಿಂತೆ. ಕಡೆಗಣಿಸು-ತಿರಸ್ಕರಿಸು. ಬಿಡುನುಡಿ-ಸಂಬಂಧವಿಲ್ಲದ ಮಾತು, ವ್ಯರ್ಥಾಲಾಪ. ಚಂದ್ರ-ಚೆಲುವು, ಸಿರಿ-ಸೌಂದರ್ಯವತಿ. ಅಂಕೆ-ಆಜ್ಞೆ, ಲೆಕ್ಕ. ಬಡಬಾಸ-ತೆಳುವಾದ ರೋಮಾವಳಿ. ಗಾಡಿ-ಚೋಜ, ಸೊಗಸು. ಗನ್ನವೇರುವ-ಘನವಾದ, ಗಂಭೀರವಾದ. ಸಿಡು ಸೊಳುವುದು-ಹೆಚ್ಚಿಗೆಗೊಳಿಸುವುದು. ಅಂಗಹಾರ-" ಒಂದು ತರದ ಕುಣಿತ ", ಗಂಧಲೇಪನ. ವ್ಯಂಗ್ಯ-ಸ್ಪಷ್ಟವಾಗಿ ಅರ್ಥ ಕಾಣಬಾರದ ಹಾಗೆ ಹೇಳುವ ಮಾತು. ಗಲಗು-ಕೂಗಾಟ, ಗಲಿಬಿಲಿ. ಬಿಸುಗದಿರ-ಸೂರ್ಯ. ತಂಬೆಗೆಂಡ-ಕೆಂಪಗೆ ಪ್ರಕಾಶಿಸುವ ಕೆಂಡ. ತೀವರವಟ್ಟು (ತತ್ಸಮ-ತೀವ್ರ) ಆತುರವಟ್ಟು. ಅರಿ-ಗರ್ಜಿಸಿ, ಒದರಿಕೊಂಡು. ಮುದುಗು, ಕುದುಗು-ಸಂಕೋಚವಾಡಿಕೊಂಡು. ಮೊರೆದು-ಜುಮ್ಮೆನೆ. ಗುಡಿಗೊಳಿಸು-ಕೊಂಕಿಸಿದ, ಮಡಮುಂದು-ನಡುವನ್ನು ತಿರುಗಿಸಿ. ಜಡವಾಯುವ-ಅಡ್ಡಲಾಗಿ ಹಾಯುವ. ಕೊಮರಿ-ಕುಮಾರಿ. ಪೊಂಜಳೆಮೆಯ್ಯ=ಪೊನ್+ಸೆಳೆ+ಮೆಯ್ ಅನ್ನುವುಗಳು, ಸ್ವರ್ಣದಂತೆ ಸ್ಪೃಹಣೀಯವಾಗಿಯೂ, ಸೆಳೆಯಂತೆ (-ಚಿತ್ರದ ಹಾಗೆ) ನುಣುಪಾಗಿಯೂ ಸಣ್ಣನಾಗಿಯೂ ಇರುವ ಮೈಯನ್ನು. ಆಯುವೀಯುವು-ಸಂಪಾದನೆ ಮತ್ತು ಖರ್ಚು. ಅರೆಮೆಯ್ಯನಿಸುವ-ಅರ್ಧಶರೀರವೆನಿಸಿಕೊಳ್ಳುವ, ಮನದನ್ನಳು-ಮನಸ್ಸಿಗೆ ಇಷ್ಟಳಾದವಳು. ಪಡಿಪಡಿಸು-ನೆಳಲಿನ ಹಾಗೆ ಅನುಸರಿಸುವ. ಅನುಗೊಳಿ-ಅನುಕೂಲಿಸಿದರೆ. ಗುಣವಿಲ್ಲದ-ಸುಗುಣಗಳಿಲ್ಲದ. ಎಕ್ಕೆಚಿತ್ತದ-ಜೋಡಿಯಾಗಿರುವಿಕೆಯನ್ನು ಬಿಡದಂತೆ ; ಎಕೆ-ಜೋಡಿ.

## ಏಳನೆಯ ಸಂಧಿ

ವನಪ್ರಸ್ಥ ಜನಕೆ-ಸ್ತೋತ್ರಾರ್ಹರಾದ ಮುನಿಜನಗಳಿಗೆ. ಎದೆಯೊಳು, ಕ್ಷುದುಗಿದರ್ದವನಿರವ=ಕ್ಷುದುಗಿದರ್ಡ+ಅವನ+ಇರವ, ಸ್ಥಿತಿಗತಿಗಳನ್ನು ಎಂದರೆ ದಮೆ, ಸೌಲಭ್ಯ. ವಾತ್ಸಲ್ಯಾದಿಗುಣಗಳನ್ನು. ಕರೆಗಣ್ಣಿಸಿ=

ಶರಗಿ+ಅಚ್ಚುಸಿ, ಮೇಲೆ ಬಂದು ಕವಿಯುವಂತೆ ಮಾಡಿ. ಒಳುವಗೆಗಳ-ಒಳ್ಳೆಯ ಬಗೆಗಳನ್ನು, ಗುಣಗಳನ್ನು. ವಿಕಶ-ವ್ಯಾಪಾರ. ಇಂಬುಗೊಳುವಳು-ಸಂತೋಷಪಡುವಳು. ಅಣ್ಣು-ತೇದ ಗಂಧ. ಎಡೆಬಿಡದೆ-ನಿಚ್ಚೀದವಿಲ್ಲದೆ, ಸರ್ವದಾ. ಚೊಚ್ಚಿಲ-ತುರುಬು. ಸೃಷ್ಟಿ-ಪುಣ್ಯ, ಅದೃಷ್ಟ. ಸವನಿಸು-ತಳಿಸು, ವರ್ಣಿಸು. ಪಡಿಮೊಗ-ಎದುರಾಗಿ, ಅಭಿಮುಖವಾಗಿ. ಅರಿಗದೊಡರ-ಅಟ್ಟಿಗಿದರೆ, ಚಲಿಸಿದರೆ. ಒತೆ-ಜೋಳ. ಉರವಣಿಸಿ-ವೇಗವಾಗಿ. ಕೇಣ-ಹೊಟ್ಟೆಕಿಚ್ಚು. ಅಸೂಯೆ. ಮುನ್ನಿನೋದುಗಳು-ಶಾಸ್ತ್ರಗಳು. ಪಾಸು-ಹಾಸಿಗೆ. ಅಸುಗೆಡುತ-ಸ್ವಸ್ಥತೆಯನ್ನು ಕಳೆದುಕೊಂಡು. ಆಳ್ದು-ಮುಳುಗಿ. ಸೋಂಕು-ಸ್ಪರ್ಶ. ಸೇಸೆವ-ಶಾಸನ. ಬಿಜ್ಜವಳರು-ವಿದ್ಯಾವಂತರು. ಎಲ್ಲಿದನು-ಎಲ್ಲಿ ಇರುವನು. ಕಡದಿಂದೆ-ಸ್ವಬದಿಂದ, ಆಳುವಿಕೆಯಿಂದ. ಬೆಕ್ಕಸಬೆರಗುವಡಿಸಳು-ಬೆಚ್ಚಿಬಿದ್ದು ತವಕಪಡುವಂತೆ ಮಾಡುವಳು. ಅನುಗೊಳಿಸು-ಸಿದ್ಧಪಡಿಸು. ಬಹಳ-ಪ್ರವಾಹ. ಪುರಳುಗಾಣದವರು-ಧನಕಾಣದವರು, ಹುಟ್ಟು ದರಿದ್ರರು. ಮಾಣಿಕ-ರತ್ನ ಅಥವಾ ಕೆಂಪು. ಬೆಳಗೈಗೆ-ಬೆಳಿದ ಸೈರಿಗೆ. ನೇತ್ರೋರಿ-ಕಾಲುವೆ. ಉಂಗುಟ-ಅಂಗುಷ್ಠ, ಹೆಬ್ಬೆಟ್ಟು.

## ಎಂಟನೆಯ ಸಂಧಿ

ಒಳ್ಳುವಡೆದುದು-ಸುಸ್ಥಿತಿಗೆ ಬಂದು ಕಾಪಾಡಲ್ಪಟ್ಟಿತು. ಜೋಕೆ-ಎಚ್ಚರಿಕೆ. ಸೈಪಿಡುತ-ಸರಿಪಡಿಸಿಕೊಳ್ಳುತ್ತ. ಬಿಡುಗೆಲಸ-ಚಿಲ್ಲರೆ ಕೆಲಸಗಳು. ಒಳುಗೆಜ್ಜ-ಒಳಗಿನ ಕೆಲಸ. ಮಣಿಪ್ಪುದು-ನಮಸ್ಕರಿಸುವುದು. ಅರಿದು-ಅಸಾಧ್ಯ, ಆಗಲಾರದು. ಸಾವಧಾನ-ಜಾಗರೂಕತೆ. ಕೀವಿಡ-ತುಂಬಿದ. ಮುಡಿಪರೆಪ್ಪುದರ್ಪಣ=ಮುಡಿದ (ಇಡಿಯುವ)+ಅರೆವ+ಉದರ್ಪಣ (ಉಜ್ಜುವ). ಕೆಲೆಗಂಡು-ದಂಟು ದಿಂಡು ಮುಂತಾದ.. ಕಡಕ-ಕಾಯಿ ಪಲ್ಯಗಳು. ಮಂಡೆಯನು-ತಲೆಯನ್ನು. ಅರದವರು-ಆಗದವರು. ಉಡೆ-ವಸ್ತ್ರ, ಬಟ್ಟೆ. ಪೊಂಸತ್ವದೊಳು-ದೊಡ್ಡದಾದ ಸಾತ್ವಿಕ ಗುಣದಲ್ಲಿ. ಕೈಯು-ಮನೋಹರ. ಉಪಸ್ಕರ-ಬೇಕಾದ ಸಾಮಾನು. ಸಂಯೋಧಾನ-ಎಚ್ಚರಿಕೆ.

ಗಬ್ಬ-ಇಲ್ಲಿ ಗರ್ಭ, ಒಳಗಡೆ. ಸಜ್ಜುಗೊಳ್ಳುವುದು-ಸಿದ್ಧಪಡಿಸುವುದು. ಹಾರುಕೆ-ನಿರೀಕ್ಷಿಸುತ್ತ. ಮನದ ದೂಳು-ಮನಸ್ಸಿನ ಕಲ್ಮಷಗಳು. ಸಜ್ಜುವಡೆಯೆ-ಸಿದ್ಧವಾಗಿರುವ ಹಾಗೆ. ಉಜ್ಜುಗಗೊಳೆ-ಕೆಲಸಮಾಡುವ ಹಾಗೆ. ಒಪ್ಪ-ಒಳ್ಳೆಯ ಸ್ಥಿತಿ. ಅಡಕ. ಬೆಸನ-ಕೆಲಸವನ್ನು, ವ್ಯಾಪಾರವನ್ನು. ಪರಿವಾದವ-ನಿಂದೆಯನ್ನು. ಬಂಡುಬೂತಾಟ-ಭಂಡತನ, ಬೂಟಾಟಿಕೆ. ಸಲೆಬಿಟ್ಟು-ಸ್ವೇಚ್ಛೆಯಾಗಿ ಹೋದ, ಸಡಿಲಬಿಟ್ಟು. ಪೊಟ್ಟುಕಳೆದು-ಹೊಟ್ಟಿನಂತೆ ಕಳೆದು. ಕೊಂಡುವೆಣ್ಗಳ್-ಮನಸ್ಸುಬಂದಂತೆ ನಡೆಯುವ ಸ್ತ್ರೀಯರು. ಲಂಡೆವೆಣ್ಗಳ್-ದುಷ್ಟಹೆಂಗಸರು, ಪುಂಡವೆಣ್ಗಳ್-ಪುಂಡುಕೆಲಸಗಳನ್ನು ಮಾಡುವ ಸ್ತ್ರೀಯರನ್ನು. ಒಳನೇಹವ-ಅಂತರಂಗ ಸ್ನೇಹವನ್ನು, ಆಸ್ಥೆಯನ್ನು. ಬೆಂಡುಗಳೆದು-ನಿಸ್ಸಾರವಾದಂತೆ ಕಳೆದು, ಸಂಪೂರ್ಣವಾಗಿ ತ್ಯಜಿಸಿ. ಇಳಿಪೊತ್ತು-ಇಳಿವ ಹೊತ್ತು, ಸಾಯಂಕಾಲ.

## ಒಂಭತ್ತನೆಯ ಸಂಧಿ

ಅಣತಿಯೊಳಗೆ-ಆಜ್ಞಾಕಾರ್ಯ, ಆಜ್ಞೆಯಿರುವಂತೆ ನಡೆಯುವಿಕೆ; ಭಗವಂತನು ಶಾಸ್ತ್ರಗಳ ಮೂಲಕ ತಿಳಿಸಿದ ಆಜ್ಞಾ ಕೈಂಕರ್ಯವಾಗಿ. ಅಳುಪದೆ-ಆಸೆಪಡದೆ. ಛಿನ್ನ-ನಿಂದೆ, ಛಿದ್ರ. ಕೋವಿದರು-ವಿದ್ವಾಂಸರು. ಅಡರುವ-ಏರುವ. ಬಸವಳಿದು-ಕ್ಷೀಣವಾಗುವುದು. ಜವನೂರು-ಯಮನ ಊರು, ನರಕ. ಬೇವುರಿ=ಬೇವ+ಉರಿ, ಜ್ವಲಿಸುತ್ತಿರುವ ಅಗ್ನಿ. ತಾಳಿಗೆ-ಗಂಟಲು. ಆಯು-ಆಯುಸ್ಸು. ಅಣುಗ-ಮಗ, ತಿರುಳು-ಸತ್ವ, ಸಾರಾರ್ಥ. ಅಗ್ಗಿ-ಅಗಲಿ. ಪದಟಿ, ಓಲೆವಿಡಿದು ನಾಪೋದೆಡೆ ಅರಿವೆವು ಎಮ್ಮ ಶೀಲವನು=ನಮ್ಮ ನಡತೆಯನ್ನು. ಓಲೆವಿಡಿದು ಓದದೆ ಅರಿವೆವು-ಪುಸ್ತಕವನ್ನು ಹಿಡಿದು ಓದದೇನೇ ತಿಳಿಯಬಲ್ಲೆವೆಂದು ಭಾವಿಸಿ. ಕಳೆಯದೆ-ತಿರಸ್ಕರಿಸದೆ. ಪಾರ್ವರು-ವೇದವನ್ನು ನೋಡಿದ ಬ್ರಾಹ್ಮಣರು. ಪದುಳ-ಸೌಖ್ಯ. ಮರುಕ-ದಯೆ. ಒಪ್ಪದೋಳು-ಕ್ಷೇಮವಾಗಿ, ಕುಶಲವಾಗಿ. ಅಗರ-ಅಗ್ರಹಾರ. ದೇಗುಲ-ದೇವಕುಲ, ದೇವಾ

೬೩. ಸತ್ರ-ಉಚಿತವಾಗಿ ಊಟಹಾಕುವ ಛತ್ರ.

## ವಿಶೇಷ ವಿಷಯದ ಟಿಪ್ಪಣಿ

ಒಂಭತ್ತನೆಯ ಸಂಧಿಯ ೪೫ ರಿಂದ ೪೮ ಪದಗಳಲ್ಲಿ ಕವಿಯು ಶ್ರೀವೈಷ್ಣವಮತದ ಪ್ರಕಾರ ಮುಕ್ತಿಯು ದೊರಕಬೇಕಾದರೆ ಅನುಸರಿಸಬೇಕಾದ ಸಾಧನಗಳನ್ನು ಸಂಗ್ರಹವಾಗಿ ತಿಳಿಸಿರುತ್ತಾರೆ:— ಅವು-(1) ನಿತ್ಯನೈಮಿತ್ತಿಕ ಕರ್ಮಗಳನ್ನು ಶ್ರೀಕಾಂತನ ಊಳಿಗವೆಂದು ಮಾಡಬೇಕು. (ನಿತ್ಯಕರ್ಮಗಳು ಯಾವುವೆಂಬುದನ್ನು ಸಂಧಿ ೭, ಪದ ೧೦ ರಿಂದ ೧೩ ರಲ್ಲಿ ತಿಳಿಸಿದೆ.) (2) ರಹಸ್ಯತ್ರಯಾರ್ಥದ ಸಾರವನ್ನು ತಿಳಿದು ಮಂತ್ರಾಂತರ ದೇವತಾಂತರ, ಸಾಧನಾಂತರಗಳನ್ನು ಬಿಡಬೇಕು. (ರಹಸ್ಯತ್ರಯಾರ್ಥವೆಂದರೆ, ಗುರುಮುಖದಿಂದ ರಹಸ್ಯವಾಗಿ ಉಪದೇಶಮಾಡಲ್ಪಟ್ಟ ಮೂರು ಮಂತ್ರಗಳು ಅವುಗಳ ಸಾರಾರ್ಥವನ್ನು ತಿಳಿದುಕೊಳ್ಳಬೇಕು. ಆ ಮಂತ್ರಗಳು ಅಷ್ಟಾಕ್ಷರೀ ಮಂತ್ರ, ದ್ವಯಮಂತ್ರ, ಚರಮಶ್ಲೋಕ ಎಂಬಿವು. ಅವುಗಳ ಸಾರಾರ್ಥವೇನೆಂದರೆ—ಈ ಮಂತ್ರಗಳಲ್ಲದೆ ಬೇರೆ ಮಂತ್ರಗಳು ಪ್ರಯೋಜನಕಾರಿಯಲ್ಲ; ಈ ಮಂತ್ರದಿಂದ ಶ್ರೀಮನ್ನಾರಾಯಣನಲ್ಲದೆ ಬೇರೆ ಯಾವ ದೇವತೆಯೂ ಮೋಕ್ಷಪ್ರದನಾಗುವುದಿಲ್ಲ; ಗೀತೆಯಲ್ಲಿ ಮೋಕ್ಷಸಾಧನವೆಂದು ಹೇಳಿರುವ ಕರ್ಮ ಜ್ಞಾನ ಭಕ್ತಿ ಪ್ರಪತ್ತಿಗಳು ಮೋಕ್ಷಕ್ಕೆ ಸಾಧನವಾಗಲಾರವೆಂದು ನಂಬಬೇಕು. (4) ವೈಷ್ಣವ ದೀಕ್ಷೆಗೆ ಬೇಕಾದ ಐದು ಸಂಸ್ಕಾರಗಳನ್ನು ಹೊಂದಬೇಕು. (5) ಸ್ವಸ್ವರೂಪ, ಪರಸ್ವರೂಪ, ಉಪಾಯಸ್ವರೂಪ, ಉಪೇಯಸ್ವರೂಪ, ಫಲಸ್ವರೂಪ ಎಂಬ ವಿಚಾರಗಳನ್ನು ಚೆನ್ನಾಗಿ ವಿಮರ್ಶಿಸಿ ತಿಳಿದುಕೊಂಡು ನಿತ್ಯವೂ ಐದು ಕಾಲಗಳಲ್ಲಿಯೂ ಮಾಡಬೇಕಾದ ಕೃತ್ಯವನ್ನು ನಿಶ್ಚಲಚಿತ್ತದಿಂದ ಮಾಡಬೇಕು. ಈ ಪ್ರಕಾರ ತಿಳಿದು ನಡೆವ ಮೋಕ್ಷಾಪೇಕ್ಷಿಗೆ ಮುಕ್ತಿ ದೊರೆಯುವುದು ಸಿದ್ಧ.